ಪುಸ್ತಕ ಪ್ರಪಂಚ

ಸೆಪ್ಟೆಂಬರ್-೧೯೯೭



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೪

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೪೭   ಸಂಚಿಕೆ-೧೨

ಸೆಪ್ಟೆಂಬರ್-೧೯೯೭

ಮುಖ ಚಿತ್ರ
ಉಪರಾಷ್ಟ್ರಪತಿ ಶ್ರೀ ಕೃಷ್ಣಕಾಂತ್
ರಕ್ಷಾಪುಟ-೪
ಡಾ|| ಕೆ. ಕೃಷ್ಣಮೂರ್ತಿ

ಪರಿವಿಡಿ

PUSTAKA PRAPANCHA: Monthly

Published and printed by Karnataka State Adult Education Council, Mysore-6. Price : Rupees Six

ಬಿಡಿಪ್ರತಿ : ರೂ. ೬

ವಾರ್ಷಿಕ ಚಂದಾ : ರೂ. ೬೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೪೦೦

ಸಂಸ್ಥೆಗೆ : ರೂ. ೬೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು–೫೭೦ ೦೦೬

ನಮ್ಮ ಉಪರಾಷ್ಟ್ರಪತಿ ಶ್ರೀ ಕೃಷ್ಣಕಾಂತ್ ಅವರು

ಸಿ. ನಾಗಣ್ಣ
ಇಂಗ್ಲಿಷ್ ಪ್ರಾಧ್ಯಾಪಕರು
ಮಹಾರಾಜ ಕಾಲೇಜು, ಮೈಸೂರು

ರಾಷ್ಟ್ರಪತಿ ಸ್ಥಾನಕ್ಕೆ ಶ್ರೀ ಕೆ. ಆರ್. ನಾರಾಯಣ್‌ರವರು ಚುನಾಯಿತರಾಗುತ್ತಿದ್ದಂತೆಯೇ ಉಪ ರಾಷ್ಟ್ರಪತಿಸ್ಥಾನ ತೆರವಾಯಿತು. ಕಾಂಗ್ರೆಸ್ ಹಾಗೂ ಸಂಯುಕ್ತ ರಂಗದ ಅಭ್ಯರ್ಥಿಯಾಗಿ ಶ್ರೀ ಕೃಷ್ಣಕಾಂತ್, ಬಿಜೆಪಿ ಹಾಗೂ ಮಿತ್ರ ಪಕ್ಷಗಳ ಅಭ್ಯರ್ಥಿಯಾಗಿ ಶ್ರೀ ಸುರ್ಜಿತ್ ಸಿಂಗ್ ಬರ್ನಾಲ ಆ ಸ್ಥಾನಕ್ಕೆ ಸ್ಪರ್ಧಿಸಿದರು. ಫಲಿತಾಂಶಕ್ಕಾಗಿ ಕಾಯುದ್ದ ಕೂರಬೇಕಾದ ಪ್ರಮೇಯವಿರಲಿಲ್ಲ; ಏಕೆಂದರೆ ಕೃಷ್ಣಕಾಂತರ ಗೆಲುವು ಮೊದಲೇ ತಿಳಿದಿತ್ತು—ಕಾಂಗ್ರೆಸ್ ಹಾಗೂ ಸಂಯುಕ್ತರಂಗದ ಮತದಾರರ ಸಂಖ್ಯೆಯ ಆಧಾರದ ಮೇಲೆ. ಕೃಷ್ಣಕಾಂತ್ ಗೆದ್ದ ಬಳಿಕ ಅವರ ಸ್ಪರ್ಧಿಯಾಗಿದ್ದ ಬರ್ನಾಲ ಅವರು, "ಕೃಷ್ಣಕಾಂತ್ ನನ್ನ ಲಾಗಾಯ್ತಿನ ಗೆಳೆಯರು, ಹಾಗಾಗಿ ನಾನವರಿಗೆ ಶುಭ ಕೋರುತ್ತೇನೆ" ಎಂದರು. ಹಾಗೆಯೇ, "ತಮಗೆ ಮತ ನೀಡಿದ ಸಂಸತ್ ಸದಸ್ಯರು ವಿಶಾಲವಾದ ಜನಸ್ತೋಮವನ್ನು ಪ್ರತಿನಿಧಿಸುವ ಕಾರಣ ಈ ಗೆಲುವು ನನಗೆ ಅತ್ಯಂತ ತೃಪ್ತಿಯನ್ನು ತಂದಿದೆ" ಯೆಂದು ಕೃಷ್ಣಕಾಂತ್ ಸಂತಸ ವ್ಯಕ್ತಪಡಿಸಿದರು.

ರಾಷ್ಟ್ರದ ಮೂರು ಉನ್ನತ ಸ್ಥಾನಗಳಲ್ಲಿ ಈವತ್ತು ವಿರಾಜಮಾನರಾಗಿರುವ ಮೂರು ಮಂದಿ ಕೂಡ ಕಾಂಗ್ರೆಸ್ ಹಿನ್ನೆಲೆಯಿಂದ ಬಂದವರಾದರೂ ತಮ್ಮ ಹೋರಾಟದ ಬದುಕಿನ ಮೂಲಕ ಅರ್ಹತೆ ಗಳಿಸಿಕೊಂಡಿರುವವರು. ಒಂದು ಕಾಕತಾಳೀಯ ಪ್ರಸಂಗವೆಂದರೆ ಈಗಿನ ಪ್ರಧಾನಿ ಶ್ರೀ ಐ. ಕೆ. ಗುಜ್ರಾಲ್ ಹಾಗೂ ಕೃಷ್ಣಕಾಂತರು ಜೈಲಿನಲ್ಲಿ ಸಹವಾಸಿಗಳು. ಇದಕ್ಕಿಂತ ವಿಸ್ಮಯಕರವಾದ ಸಂಗತಿಯೆಂದರೆ ಗುಜ್ರಾಲರ ತಂದೆ ತಾಯಿಗಳು ಹಾಗೂ ಕೃಷ್ಣಕಾಂತರ ತಂದೆ ತಾಯಿಗಳು ಒಟ್ಟಿಗೇ ಜೈಲು ಶಿಕ್ಷೆ ಅನುಭವಿಸಿದವರು. ತ್ಯಾಗ ಹಾಗೂ ರಾಷ್ಟ್ರ ಸೇವೆಯೆಂಬುದು ಅರೆಕಾಲಿಕವಾದ ಅನುಕೂಲ ಸಿಂಧು ರಾಜಕಾರಣವಾಗಲು ಸಾಧ್ಯವಿರದಿದ್ದ ಕಾಲಘಟ್ಟದಲ್ಲಿ ಈ ಮಹನೀಯರು ಸಾರ್ವಜನಿಕ ಕ್ಷೇತ್ರಕ್ಕೆ ಕಾಲಿರಿಸಿದರು.

ವಿಜ್ಞಾನ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಗಳಿಸಿದರಾದರೂ ಕೃಷ್ಣಕಾಂತರು ರಾಜಕಾರಣವನ್ನು ಆರಿಸಿಕೊಂಡಿದ್ದು ಸಹಜವೇ ಆಗಿದೆ. ಮೊದಲೇ ತಿಳಿಸಿದಂತೆ ಇವರ ತಂದೆ ಲಾಲಾ ಅಚ್ಯುತ್‌ರಾಮ್ ಅವರು ಬ್ರಿಟಿಷರ ವಿರುದ್ಧ ಸೊಲ್ಲೆತ್ತಿ ಸೆರೆ

ವಾಸ ಅನುಭವಿಸಿದವರು ಹಾಗೂ ಪಂಜಾಬಿನ ಕೇಸರಿಯೆಂದೇ ಪ್ರಸಿದ್ಧರಾಗಿದ್ದ ಲಾಲಾ ಲಜಪತ್ ರಾಯ್ ಅವರ ಸಮಕಾಲೀನರು. ಹಾಗಾಗಿ, ಹಿರಿಯ ತಲೆಮಾರಿನವರ ಕೆಚ್ಚು ಕೃಷ್ಣಕಾಂತ್‌ರಿಗೆ ಹರಿದು ಬಂದದ್ದರಲ್ಲಿ ಆಶ್ಚರ್ಯವಿಲ್ಲ. ಲಾಲಾ ಲಜಪತ್‌ರಾಯ್ ಅವರು ಸ್ಥಾಪಿಸಿದ 'ಸರ್ವೆಂಟ್ಸ್ ಆಫ್ ಪೀಪಲ್ ಸೊಸೈಟಿ'ಯ ಸದಸ್ಯರಾಗಿ ಹಾಗೂ ತರುವಾಯ ಅದರ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ೧೯೬೬ ರಿಂದ ೧೯೭೭ರ ಅವಧಿಯಲ್ಲಿ ಇವರು ರಾಜ್ಯ ಸಭಾ ಸದಸ್ಯರಾಗಿರುವ ಕಾಲಕ್ಕೆ ಕಾಂಗ್ರೆಸ್ ಇಬ್ಭಾಗವಾಯಿತು. ಕೃಷ್ಣಕಾಂತ್ ಇಂದಿರಾಗಾಂಧಿಯವರೊಡನೆ ಉಳಿದರು, ಉಳಿದವರು ಕಾಮರಾಜ್ ಹಾಗೂ ನಿಜಲಿಂಗಪ್ಪನವರ ಗುಂಪಿಗೆ ಸೇರಿದರು. ಆದಾಗ್ಯೂ 'ಯಂಗ್ ಟರ್ಕ್ಸ್' ಎಂದು ಖ್ಯಾತರಾಗಿದ್ದ ಚಂದ್ರಶೇಖರ್, ಮೋಹನ್‌ಧಾರಿಯಾ ಮುಂತಾದವರೊಡನೆ ತಮ್ಮನ್ನು ಗುರುತಿಸಿಕೊಂಡಿದ್ದ ಕೃಷ್ಣಕಾಂತ್ ಅಧಿಕೃತ ನಾಯಕತ್ವವನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಅಂದಿನ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸಿದ ಕೃಷ್ಣಕಾಂತರು ಮೌಲ್ಯಾಧಾರಿತ ರಾಜಕಾರಣದ ಅಗತ್ಯತೆಯನ್ನು ಒತ್ತಿ ಹೇಳತೊಡಗಿದರು. ಕಾಲಕ್ರಮೇಣ ಇವರ ಆಲೋಚನೆಗಳು ಹರಳುಗಟ್ಟಿ ಸುಧಾರಣೆಗಾಗಿ ಟೊಂಕಕಟ್ಟಿ ನಿಂತರು.

ಎಪ್ಪತ್ತರ ದಶಕದಲ್ಲಿ ಇವರು ಬಿಹಾರದ ಕೆಲವು ಪ್ರದೇಶಗಳಿಗೆ ಭೇಟಿ ನೀಡುತ್ತಿದ್ದ ಸಂದರ್ಭದಲ್ಲಿ ಪಕ್ಷದ ಒಬ್ಬ ಯುವ ಕಾರ್ಯಕರ್ತ ಸಾರ್ವಜನಿಕ ಜೀವನದ ಶುದ್ಧತೆಯ ಬಗ್ಗೆ ಒತ್ತಿ ಹೇಳುತ್ತಿದ್ದ ಕೃಷ್ಣಕಾಂತರನ್ನು ಕುರಿತು ಪ್ರಶ್ನೆ ಮಾಡಿದ್ದ: "ಕೃಷ್ಣಕಾಂತ್ ಬಾಬು, ಗಂಗೆಯನ್ನು ಶುದ್ಧೀಕರಿಸುವುದರ ಬಗ್ಗೆ ಗಮನ ಕೇಂದ್ರೀಕರಿಸುವುದರಿಂದ ಪ್ರಯೋಜನವಿಲ್ಲ. ಗಂಗೋತ್ರಿಯ ಕಡೆ ಗಮನ ನೀಡಿ. ಅಲ್ಲಿ ಮಾಲಿನ್ಯವನ್ನು ನೀವು ತಡೆಗಟ್ಟುವುದಾದರೆ, ಗಂಗೆ ತಂತಾನೆ ಶುದ್ಧಳಾಗುತ್ತಾಳೆ." ಚುನಾವಣಾ ರಾಜಕಾರಣದಲ್ಲಿ ಮೊದಲು ಶುದ್ಧತೆಯನ್ನು ಸಾಕ್ಷಾತ್ಕರಿಸಿಕೊಳ್ಳುವ ದಿಶೆಯಲ್ಲಿ ನೀವು ಕೆಲಸ ಮಾಡಿ ಎಂಬುದೇ ಆ ಯುವ ಕಾರ್ಯಕರ್ತನ ಪರೋಕ್ಷ ಸಂದೇಶವಾಗಿತ್ತು. ಮೂಲದಲ್ಲೇ ಕಪ್ಪು ಹಣದ ರೂಪದಲ್ಲಿ ಮಾಲಿನ್ಯ ಸೇರ್ಪಡೆಯಾಗುವಾಗ ಶುದ್ಧತೆಯನ್ನು ತರುವುದಾದರೂ ಹೇಗೆ ಎಂಬುದು ದೊಡ್ಡ ಪ್ರಶ್ನೆಯಾಗುತ್ತದೆ. ಆ ಘಳಿಗೆಯಿಂದ ಕೃಷ್ಣಕಾಂತರು ಚುನಾವಣಾ ರಾಜಕಾರಣಕ್ಕೆ ಶುದ್ಧತೆ ಅನಿವಾರ್ಯವೆಂದು ಮನಗಂಡು ಅದಕ್ಕಾಗಿ ಆಂದೋಲನ ಮಾಡಲು ಮುಂದಾದರು.

ಅವರ ಹೋರಾಟದ ಹಾದಿಯಲ್ಲಿ ಕಾಂತರು ಬೇರೆ ಬೇರೆ ಪಕ್ಷದ ನಾಯಕರ ಸಂಪರ್ಕಕ್ಕೆ ಬಂದರು. ಲೋಕನಾಯಕ ಜಯಪ್ರಕಾಶ್ ನಾರಾಯಣರ ಚಳವಳಿ ಅವರನ್ನು ಆಕರ್ಷಿಸಿತು. ಆ ಕಾರಣದಿಂದಲೇ ಅವರು ಕಾಂಗ್ರೆಸ್‌ನಿಂದ ದೂರವಾಗಬೇಕಾಯಿತು. ಆದರೆ ತುರ್ತುಪರಿಸ್ಥಿತಿಯ ನಂತರ ಜನತಾ ರಾಜಕಾರಣದಲ್ಲಿ ಮತ್ತೆ ಮಧ್ಯರಂಗಕ್ಕೆ ಬಂದರು. ೧೯೭೭ ರಲ್ಲಿ ಅವರು ಚಂಡೀಗಡದಿಂದ ಲೋಕಸಭೆಗೆ

ಚುನಾಯಿತರಾದರು. ವಿದೇಶೀ ಹಾಗೂ ರಕ್ಷಣಾ ನೀತಿ, ಭೂ ಸುಧಾರಣೆ ಹಾಗೂ ಪರಿಸರ ಕ್ಷೇತ್ರಗಳಲ್ಲಿ ಕೃಷ್ಣ ಕಾಂತರು ವಿಶಿಷ್ಟ ಸೇವೆ ಸಲ್ಲಿಸಿದ್ದಾರೆ.

ಎಪ್ಪತ್ತರ ಎತ್ತರದಲ್ಲಿ ಸದಾ ಹಸನ್ಮುಖಿಯಾಗಿರುವ ಶ್ರೀಯುತರು ಕಣ್ಮರೆಯಾಗುತ್ತಿರುವ ಹಳೆಯ ತಲೆಮಾರಿನ ಕಡೆಯ ಕೊಂಡಿಯಂತಿದ್ದಾರೆ. ದಲಿತ ವರ್ಗದಿಂದ ಬಂದ ನಾರಾಯಣರು ರಾಷ್ಟ್ರಪತಿ, ಕೃಷ್ಣಕಾಂತರಂತೆಯೇ ಲಾಹೋರ್‌ನಲ್ಲಿ ಹುಟ್ಟಿ ಬೆಳೆದು ವಿದ್ಯಾಭ್ಯಾಸ ಮಾಡಿ ನಮ್ಮ ಉಪ ಖಂಡದ ಕಣ್ಣೀರಿನ ಚರಿತ್ರೆಗೆ ಸಾಕ್ಷಿಯಂತಿರುವ ಇಂದ್ರ ಕುಮಾರ ಗುಜ್ರಾಲರು ಪ್ರಧಾನಿ, ಎಲ್ಲ ವಿಧದಲ್ಲೂ ಈ ಈರ್ವರ ಹೋರಾಟದ ಬದುಕು ಮತ್ತು ದೇಶ ಸೇವೆಯನ್ನು ಸಮರ್ಥವಾಗಿ ಮೈಗೂಡಿಸಿಕೊಂಡಿರುವ ಕೃಷ್ಣಕಾಂತರು ಉಪ ರಾಷ್ಟ್ರಪತಿ; ಇಂಥ ವಿಶಿಷ್ಟ ಹಿನ್ನೆಲೆಯ ತ್ರಿಮೂರ್ತಿಗಳನ್ನು ರಾಷ್ಟ್ರ ಉತ್ತಮ ಪೀಠದಲ್ಲಿ ಪಡೆಯುವುದು ಯುಗಕ್ಕೊಮ್ಮೆ ಎಂದು ತೋರುತ್ತದೆ. ಹಿಂದೆಂದೂ ಕಂಡು ಕೇಳರಿಯದ ಸಂಕೀರ್ಣಾವಸ್ಥೆಯಲ್ಲಿ ಸಿಲುಕಿರುವ ವರ್ತಮಾನ ಭಾರತದ ಸಮಸ್ಯೆಗಳಿಗೆ ಉತ್ತರ ಹುಡುಕುವಲ್ಲಿ ಕೃಷ್ಣಕಾಂತರ ಪಾತ್ರ ಮಹತ್ವದ್ದಾಗಿದೆಯೆಂದು ತಿಳಿಯುತ್ತಾ ಅವರಿಗೆ ಎಲ್ಲ ರೀತಿಯ ಶುಭ ಹಾರೈಸೋಣ. ಅವರಿಗೆ ಶುಭವಾದರೆ ಲಾಭ ನಮ್ಮೆಲ್ಲರಿಗೆ ತಾನೆ?




ಶಿಕ್ಷಣದ ಮೂಲಕ ಪುನರ್ನಿರ್ಮಾಣ;
ಪುನರ್ನಿರ್ಮಾಣದ ಮೂಲಕ ಶಿಕ್ಷಣ

—ಗಾಂಧೀಜಿ

ವಯಸ್ಕ ಶಿಕ್ಷಣತಜ್ಞ ಇನ್ನಿಲ್ಲ

ಡಾ॥ ದೇ. ಜವರೇಗೌಡ
ವಿಶ್ರಾಂತ-ಕುಲಪತಿಗಳು
'ಕಲಾ ನಿಲಯ', ಕಾಳಿದಾಸ ರಸ್ತೆ
ಜಯಲಕ್ಷ್ಮೀಪುರಂ, ಮೈಸೂರು-೫೭೦ ೦೧೨



ದಿ॥ ಟಿ. ಆರ್. ನಾಗಪ್ಪ ಅವರು

ಐವತ್ತು ವರ್ಷಗಳಿಗೂ ಹಿಂದೆ, ರಾಷ್ಟ್ರದ ಈ ಭಾಗದಲ್ಲಿ, ಅದರಲ್ಲಿಯೂ ಹಳೆಯ ಮೈಸೂರಿನ ಈ ಪ್ರದೇಶದಲ್ಲಿ, ವಯಸ್ಕರ ಶಿಕ್ಷಣದ ಇತಿಹಾಸ ಅತ್ಯುಜ್ವಲವಾಗಿದ್ದು, ರಾಷ್ಟ್ರೀಯ ಅಂತರರಾಷ್ಟ್ರೀಯ ಕೀರ್ತಿಯನ್ನು ಪಡೆದಿತ್ತೆಂಬುದು ಈಗ ಕೇವಲ ಕೆಲವರ ನೆನಪಿನ ಸಂಗತಿಯಾಗುಳಿದಿದೆಯೆಂಬುದು ದುರ್ದೈವದ ವಿಷಯವಾಗಿದೆ. ಈ ಅವನತಿಗೆ ಮುಖ್ಯ ಕಾರಣ ದೂರದೃಷ್ಟಿಯಿಲ್ಲದ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಲ್ಲದ, ಸಾಮಾನ್ಯರ ಬಗ್ಗೆ ಕಾಳಜಿಯಿಲ್ಲದ ವಿವೇಕರಹಿತ ಪುಢಾರಿಗಳ ಮತ್ತು ಅಧಿಕಾರಶಾಹಿಯ ಅಜ್ಞಾನ ನಿರ್ಲಕ್ಷ್ಯಗಳೇ ಕಾರಣವೆಂಬುದರಲ್ಲಿ ಅನುಮಾನವಿಲ್ಲ. ಒಂದು ಕಾರ್ಖಾನೆಯೊ, ಒಂದು ಶೈಕ್ಷಣಿಕ ಸಂಸ್ಥೆಯೊ ಅಥವಾ ಒಂದು ಪಾರಿಭಾಷಿಕ ಇಲಾಖೆಯೊ ಅವನತಿಯ ತಳವನ್ನು ಮುಟ್ಟಬೇಕೆಂದರೆ ಅದನ್ನು ಅಧಿಕಾರಶಾಹಿಗೊಪ್ಪಿಸಬೇಕು. ಇದಕ್ಕೆ ನಿದರ್ಶನಗಳನ್ನು ಹುಡುಕಬೇಕಾಗಿಲ್ಲ. ಪ್ರತಿನಿತ್ಯ ನಷ್ಟದ ಪಟ್ಟಿಯನ್ನು ಸೇರುತ್ತಿರುವ ಕಾರ್ಖಾನೆಗಳೆ ಸಾಕು. ವಯಸ್ಕರ ಶಿಕ್ಷಣ ಸಮಿತಿ ಮೂಲೆಗುಂಪಾದದ್ದು ಕನ್ನಡದ ಕಣ್ಮಣಿಗೆ ಎಸಗಿದ ದ್ರೋಹವಾಗಿದೆ. ಆದೀನ ಶಾಸಕರಿಗೊಂದು

ಸಚಿವ ಪದವಿಯನ್ನೊ ದಗಿಸುವ ಒಣಭೂಮಿ ಯಾಗಿದೆ ಅಥವಾ ಮುರುಕಲು ಕುರ್ಚಿ ಯಾಗಿದೆ.

ಈ ಆರು ದಶಕಗಳ ಇತಿಹಾಸದಲ್ಲಿ ನೂರಾರು ಮಂದಿ ಶಿಕ್ಷಕರ, ತಜ್ಞರ, ಆಡಳಿತ ಗಾರರ, ಸಂಘಟಕರ ಮೆರವಣಿಗೆ ಸಾಗಿ ಹೋಗಿದೆ. ಸಾವಿರಾರು ಮಂದಿ ನಾನಾ ರೀತಿಯ ತರಬೇತಿ ಪಡೆದಿದ್ದಾರೆ. ಕೆಲವರು ಅದೃಷ್ಟವಂತ ತಜ್ಞರು ದೇಶವಿದೇಶಗಳಲ್ಲಿ ತಮ್ಮ ವಿದ್ವತ್ತನ್ನು ಹಾಗೂ ಅನುಭವ ವನ್ನು ಹಂಚುವ ಮೂಲಕ ರಾಷ್ಟ್ರದ ಖ್ಯಾತಿ ಯನ್ನು ಹೆಚ್ಚಿಸಿದ್ದಾರೆ. ಅವರ ಸೇವೆ ಶ್ಲಾಘ ನೀಯವಾದದ್ದೆ. ಯಾವ ಸಂಸ್ಥೆಯಲ್ಲಿಯೇ ಆಗಲಿ ಸಂಬಳಕ್ಕಾಗಿ ದುಡಿಯುವ ಜನ ಹೆಚ್ಚೇ ಹೊರತು, ಕರ್ತವ್ಯ ನಿಷ್ಠೆಯಿಂದ, ಚಿತ್ತೈಕಾಗ್ರತೆಯಿಂದ, ಆಸ್ಥೆಯಿಂದ, ಅನ್ಯ ವಿಷಯ ನಿರಾಸಕ್ತರಾಗಿ, ತಾವು ಕೈಗೊಂಡ ಕಾರ್ಯಕ್ಕೆ ತಮ್ಮ ಬದುಕನ್ನೆಲ್ಲ ತೆತ್ತು ಕೊಂಡು ವಯಸ್ಕರ ಶಿಕ್ಷಣ ಕ್ಷೇತ್ರಕ್ಕೆ ಸೇವೆ ಸಲ್ಲಿಸಿದವರು ವಿರಳ; ವಿರಳರೆನ್ನುವುದಕ್ಕಿಂತ ಒಬ್ಬರೆಂದರೂ ಸಲ್ಲುತ್ತದೆ.

ಆ ಒಬ್ಬರೇ ಶ್ರೀ ಟಿ. ಆರ್. ನಾಗಪ್ಪ ನವರು. ಆ ಒಬ್ಬರೂ ಇನ್ನಿಲ್ಲ. ೬–೮–೯೭ ರಂದು ಅವರೂ ಪರಲೋಕವನ್ನು ಸೇರಿ, ವಯಸ್ಕರ ಶಿಕ್ಷಣ ಕ್ಷೇತ್ರವನ್ನು ಅನಾಥ ಗೊಳಿಸಿದ್ದಾರೆ. ವಯಸ್ಕರ ಶಿಕ್ಷಣದ ಬಗ್ಗೆ ಅವರಂತೆ ಚಿಂತೆಯನ್ನಂಟಿಸಿಕೊಂಡಿರುವ, ಮೂರು ಹೊತ್ತೂ ಅದರಲ್ಲಿಯೇ ತಮ್ಮ ತನು ಮನ ಧನಗಳನ್ನು ತೊಡಗಿಸಿಕೊಂಡಿ ರುವ ಮತ್ತೊಬ್ಬ ವ್ಯಕ್ತಿ ಈ ದೇಶದಲ್ಲಿ ನನಗೆ ಕಾಣಿಸುತ್ತಿಲ್ಲ. ಅವರಿಗೆ ಕೂತಲ್ಲಿ ನಿಂತಲ್ಲಿ ಹೋದಲ್ಲಿ ಬಂದಲ್ಲಿ, ಕೊನೆಗೆ ನಿದ್ರೆ ಯಲ್ಲಿಯೂ ಅದೇ ತೊಳಕೆ. ವಯಸ್ಕರ ಶಿಕ್ಷಣದ ಹಲವು ಮಗ್ಗುಲುಗಳನ್ನು, ಅದರ ಸಮಗ್ರ ದರ್ಶನವನ್ನು, ವಿವಿಧ ತಂತ್ರ ಸಿದ್ಧಾಂತಗಳನ್ನು, ಅದರ ತಾತ್ತ್ವಿಕ ಹಾಗೂ ಪ್ರಾಯೋಗಿಕಾನುಭವಗಳನ್ನು, ನೆಲೆ ಬೆಲೆ ಗೊತ್ತುಗುರಿಗಳನ್ನು, ಆ ಬಗ್ಗೆ ದೇಶವಿದೇಶ ಗಳಲ್ಲಿ ನಡೆಯುತ್ತಿರುವ ಸಂಶೋಧನೆಗಳನ್ನು ಆಮೂಲಾಗ್ರವಾಗಿ ಕಂಡುಕೊಂಡಿದ್ದರು. ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾ ದರೂ, ದೇಶದಲ್ಲಿನ್ನೂ ಶೇಕಡಾ ಐವತ್ತ ಕ್ಕಿಂತ ಹೆಚ್ಚು ನಿರಕ್ಷರಿಗಳಿದ್ದಾರಲ್ಲ, ಸರ್ಕಾರ ಖರ್ಚು ಮಾಡುತ್ತಿರುವ ಹಣ ಹೆಗ್ಗಣದ ಬಿಲಗಳಲ್ಲಿ ಅವಿತುಕೊಳ್ಳುತ್ತಿದೆಯಲ್ಲ, ಜನ ವಿದ್ಯಾವಂತರಾಗುವುದು ರಾಜಕಾರಣಿಗಳಿ ಗಂತು ಬೇಕಿಲ್ಲ, ವಿದ್ಯಾವಂತರಿಗೂ ಆ ಬಗ್ಗೆ ಕಾಳಜಿ ಇಲ್ಲವಲ್ಲ ಎಂಬ ನಿರಂತರ ವ್ಯಥೆ ಅವರ ದಾಗಿತ್ತು.

ಸುಮಾರು ಮೂವತ್ತಮೂರು ವರ್ಷಗಳ ಕಾಲ ವಯಸ್ಕರ ಶಿಕ್ಷಣ ಸಮಿತಿಯ ಹಲವು ಶಾಖೆಗಳಲ್ಲಿ ತಾದಾತ್ಮ್ಯ ಮನೋಭಾವದಿಂದ ಪ್ರಾಮಾಣಿಕವಾಗಿ ದುಡಿದರೆಂಬುದು ಹೆಗ್ಗಳಿಕೆಯ ಸಂಗತಿ. ಓದು ಸಾಮಗ್ರಿ ತಯಾರಿಕೆಯೆ, ಪುಸ್ತಕ ಪ್ರಪಂಚ ಬೆಳಕು ಪತ್ರಿಕೆಗಳ ಸಂಪಾದನೆಯೆ, ಕಮ್ಮಟಗಳ ನಿರ್ದೇಶನವೆ, ಸಂಶೋಧನೆಯೆ—ಯಾವ ಕೆಲಸವಾದರೂ ಸರಿಯೆ ಸಮರ್ಪಕವಾಗಿ ನಿರ್ವಹಿಸಬಲ್ಲ ಯೋಗ್ಯತೆ ಅವರದು. ನವ-ಸಾಕ್ಷರರ ವಾಚನಾವಶ್ಯಕತೆ ಆಸಕ್ತಿಗಳ ಬಗ್ಗೆ ಪರಿವೀಕ್ಷಣೆ ನಡೆಸಿದ್ದಾರೆ. ಅವರಿಗಾಗಿ ಕನ್ನಡ ದಲ್ಲಿ ಮೂಲ ಶಬ್ದಕೋಶವನ್ನು ರಚಿಸಿ ದ್ದಾರೆ. ಅನೇಕ ಮೌಲ್ಯಮಾಪನ ಕಾರ್ಯ ಕ್ರಮಗಳಲ್ಲಿ ಭಾಗವಹಿಸಿದ್ದಾರೆ. ದೇಶವಿದೇಶ

ಗಳಲ್ಲಿ ಸಾಕ್ಷರತೆಗೆ ಹಾಗೂ ವಯಸ್ಕರ ಶಿಕ್ಷಣಕ್ಕೆ ಸಂಬಂಧಿಸಿದ ಕಮ್ಮಟ, ವಿಚಾರ ಗೋಷ್ಠಿ, ತರಬೇತಿ ಶಿಬಿರಗಳಲ್ಲಿ, ಸಮ್ಮೇಳನ ಗಳಲ್ಲಿ ಪ್ರತಿನಿಧಿಯಾಗಿ, ತಜ್ಞರಾಗಿ, ಮಾರ್ಗ ದರ್ಶಿಯರಾಗಿ, ನಿರ್ದೇಶಕರಾಗಿ, ತರಬೇತಿದಾರ ರಾಗಿ, ಬೋಧಕರಾಗಿ, ಸಮಾಲೋಚಕರಾಗಿ ನಾನಾ ಮುಖವಾಗಿ ಸೇವೆ ಸಲ್ಲಿಸಿದ್ದಾರೆ. ಅಲ್ಲಲ್ಲಿ ಅವರು ಮಾಡಿದ ಕಾರ್ಯ ಪರಿಣತರ ಶ್ಲಾಘನೆಗೆ ಯೋಗ್ಯವಾಗಿವೆ.

ಇಷ್ಟೊಂದು ಅನುಭವವುಳ್ಳ ಜ್ಞಾನದಾಹ ವುಳ್ಳ ನಾಗಪ್ಪನವರಮನಶ್ಶಕ್ತಿ ಗಾಳಿಯಲ್ಲಿ ತೂರಿಹೋಗದಂತೆ, ಶೂನ್ಯದಲ್ಲಿ ಲಯವಾಗ ದಂತೆ, ಮುಂದಿನ ಜನಾಂಗಗಳಿಗೂ ಉಳಿಯು ವಂತೆ ಲಿಪ್ಯಂತರಿಸಿದ್ದಾರೆ. ಮನುಷ್ಯನ ಧೀಶಕ್ತಿ ಪ್ರತಿಭೆ ಮತ್ತು ಜ್ಞಾನ ವಿಸ್ತಾರ ಜಗತ್ತಿಗೆ ಅರಿವಾಗುವುದು ಅವನು ಹಿಂದೆ ಬಿಟ್ಟು ಹೋಗಿರುವ ಕೃತಿಗಳಿಂದ. ಕೆ. ವೆಂಕಟಪ್ಪನವರ ಚಿತ್ರಗಳಾಗಬಹುದು, ರಂಜಾಳ ಗೋಪಾಲ ಶೆಣೈ ಅವರ ಶಿಲ್ಪಗಳಾಗ ಬಹುದು, ವಿಶ್ವೇಶ್ವರಯ್ಯನವರ ಭದ್ರಾವತಿ ಕಾರ್ಖಾನೆಯಾಗಬಹುದು, ಟಾಗೋರರ ಗೀತಾಂಜಲಿಯಾಗಬಹುದು, ಪುರಂದರ ದಾಸರ ಕೀರ್ತನೆಗಳಾಗಬಹುದು; ಅಂತೆಯೇ ನಾಗಪ್ಪನವರಂಥ ಶಿಕ್ಷಣ ತಜ್ಞರ ಅನೇಕ ಗ್ರಂಥಗಳು ಹಲವು ಕಾಲ ವಿದ್ಯಾರ್ಥಿ ವಿದ್ವಾಂಸರ ಜ್ಞಾನದಾಹವನ್ನು ತಣಿಸ ಬಹುದೆಂದು ಆಶಿಸಬಹುದಾಗಿದೆ. ಬಹುವಾಗಿ ವಯಸ್ಕರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಅವರು ರಚಿಸಿರುವ ಗ್ರಂಥಗಳು ಅವರ ಆತ್ಮಕಥೆ ಗಳಂತಿವೆ; ಅವರ ಅಪಾರಾನುಭವಕ್ಕೆ, ಅವರ ಶಿಕ್ಷಣೋತ್ಸಾಹಕ್ಕೆ, ನಿರಕ್ಷರತೆಯನ್ನು ಹೋಗಲಾಡಿಸಬೇಕೆಂಬ ಅವರ ಕಾತರತೆಗೆ, ಅವರ ಕಾರ್ಯವಿಸ್ತಾರಕ್ಕೆ ಸಾಕ್ಷಿಗಳಾಗಿವೆ; ಅವರ ವ್ಯಕ್ತಿತ್ವಕ್ಕೆ, ಅದರ ವಿಕಾಸಕ್ಕೆ ನಿದರ್ಶನಗಳಾಗಿವೆ. ಪ್ರಾಯಶಃ ಇಂಡಿಯಾ ದೇಶದಲ್ಲಿ, ಈ ಕ್ಷೇತ್ರದಲ್ಲಿ ಕೆಲಸ ಮಾಡಿ ದವರು, ತಜ್ಞತೆಯ ಹೆಸರಿನಲ್ಲಿ ವಿದೇಶಗಳಲ್ಲಿ ಆರಾಮವಾಗಿ ವಿರಾಮವಾಗಿ ತಿರುಗಾಡಿ ಕೊಂಡು ಬಂದವರು ಇವರಷ್ಟು ಗ್ರಂಥ ಗಳನ್ನು ಬರೆದವರಿಲ್ಲ, ಇವರಂತೆ ಶ್ರೀಮಂತ ಆಸ್ತಿಯನ್ನು ಬಿಟ್ಟುಹೋದವರಿಲ್ಲ. ಆದರೆ ಸರಕಾರವಾಗಲಿ, ಸಮಾಜವಾಗಲಿ ಅವರನ್ನು ಅವರ ಯೋಗ್ಯತೆಗೆ ತಕ್ಕಂತೆ ಪುರಸ್ಕರಿಸಿ ದ್ದಿಲ್ಲ; ಅವರನ್ನು ಗುರುತಿಸಿದ್ದಿಲ್ಲ; ಅವರನ್ನು ಶೈಕ್ಷಣಿಕ ಸೇವೆಗೆ ಬಳಸಿಕೊಂಡ ದ್ದಿಲ್ಲ. ಅಂಥವರನ್ನು ಆ ಕ್ಷೇತ್ರದೊಳಗೆ ಬರ ಮಾಡಿಕೊಂಡರೆ ತಮ್ಮ ಕಾಂತಿ ಮಸುಳಿಸೀ ತೆಂಬ, ತಮ್ಮ ವಿರಾಮದ ಐಷಾರಾಮಕ್ಕೆ ಭ್ರಷ್ಟಾಚಾರಕ್ಕೆ ಅಪಚಾರವಾದೀತೆಂಬ ಭಯ ಅಲ್ಲಿ ಕೆಲಸ ಮಾಡುವ ತಜ್ಞರಿಗೆ. ಎಲ್ಲಿ ಹೋದರೂ ತಜ್ಞರ ಹಣೆಬರಹವೇ ಇದು! 'ಕವಿಗೆ ಕವಿ ಮುನಿವಂ' ಎಂಬಂತೆ ತಜ್ಞನಿಗೆ ತಜ್ಞ ಮುನಿಯುತ್ತಾನೆ.

ನಾಗಪ್ಪನವರು ೧೯೭೩ರಿಂದ ೧೯೯೭ರ ವರೆಗೆ ಇಪ್ಪತ್ತೈದು ವರ್ಷಗಳ ಅವಧಿಯಲ್ಲಿ ಸುಮಾರು ೪೬ ಗ್ರಂಥಗಳನ್ನು ರಚಿಸಿದ್ದಾರೆ. ಸಾಕ್ಷರತೆ ಮತ್ತು ವಯಸ್ಕರ ಶಿಕ್ಷಣ, ಸಾಕ್ಷರತಾ ಸಾಹಿತ್ಯ ಸೂತ್ರಗಳು, ಜನತಾ ಶಾಲೆಗಳು, ಭಾರತದ ಗ್ರಾಮೀಣ ಗ್ರಂಥಾಲಯಗಳು, ಅನೌಪಚಾರಿಕ ಶಿಕ್ಷಣ, ವಯಸ್ಕರ ಶಿಕ್ಷಣ ಕೈಪಿಡಿ, ಕರ್ನಾಟಕದಲ್ಲಿ ವಯಸ್ಕರ ಶಿಕ್ಷಣ, ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆ, ವಯಸ್ಕರ ಶಿಕ್ಷಣ ದರ್ಶನ,

ವಯಸ್ಕರ ಶಿಕ್ಷಣ ಉಪಾಧ್ಯಾಯರ ಕೈಪಿಡಿ, ಬ್ಯಾಂಕುಗಳು ನವಗಾಗಿ, ಕೋಳಿ ಸಾಕಣೆ, ಪ್ರಶಿಕ್ಷಣ ಕೈಪಿಡಿ, ಸಂಪೂರ್ಣ ಸಾಕ್ಷರತಾ ಕಾರ್ಯಕ್ರಮ—ಈ ಕೆಲವೇ ಕೆಲವು ಪುಸ್ತಕಗಳ ಹೆಸರುಗಳನ್ನು ಓದಿದರೂ ಸಾಕು, ನಾಗಪ್ಪನವರ ಕೃತಿ ವಿಸ್ತಾರ ವೈವಿಧ್ಯಗಳು ಮನವರಿಕೆಯಾದಾವು. ಅವರ ಹಲವು ಪುಸ್ತಕಗಳನ್ನು ಮೈಸೂರು ಬೆಂಗಳೂರು ಕರ್ನಾಟಕ ವಿಶ್ವವಿದ್ಯಾನಿಲಯಗಳು, ವಯಸ್ಕರ ಶಿಕ್ಷಣ ಸಮಿತಿ ಹಾಗೂ ಕೆಲವು ಪ್ರತಿಷ್ಠಿತ ಪ್ರಕಟನ ಸಂಸ್ಥೆಗಳು ಪ್ರಕಟಿಸಿರುವುದೇ ಅವುಗಳ ಉತ್ತಮತೆಗೆ ಸಾಕ್ಷಿಯಾಗಿದೆ.

ನಾನು ಜಂಟಿಕರ್ತೃತ್ವದ ಅವರ ಪುಸ್ತಕವೊಂದಕ್ಕೆ ಪೀಠಿಕೆ ಬರೆಯುತ್ತ 'ಈ ಗ್ರಂಥ ರಚನೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿರುವ ಮತ್ತೊಬ್ಬ ಗೆಳೆಯರೇ ಟಿ. ಆರ್. ನಾಗಪ್ಪನವರು' ಎಂದು ಹೇಳಿದ್ದೆ ('ಸಂಪೂರ್ಣ ಸಾಕ್ಷರತಾ ಕಾರ್ಯಕ್ರಮ, ಪು. viii) ನನ್ನ ಈ ಮಾತು ಜಂಟಿಕರ್ತೃತ್ವವಿರುವ ಅವರ ಎಲ್ಲ ಪುಸ್ತಕಗಳಿಗೂ ಅನ್ವಯವಾಗುತ್ತದೆಂದರೆ ತಪ್ಪಾಗಲಾರದು. ನಾನೊಮ್ಮೆ ಅವರನ್ನು ಕೇಳಿಯೇ ಬಿಟ್ಟೆ: 'ಏಕೆ ನಾಗಪ್ಪನವರೆ ನಿಮಗಿಂಥ ದುಸ್ಥಿತಿ, ದೈನ್ಯಪ್ರವೃತ್ತಿ. ಬೆವರು ಸುರಿಸಿ ಉತ್ತುಬಿತ್ತಿ ಬೆಳೆ ಕೈಗೆ ಬಂದಾಗ ಅದನ್ನೆಲ್ಲಾ ಲಪಟಾಯಿಸಿಕೊಂಡು ಹೋಗುವಂಥ ಮಾರ್ವಾಡಿಯ ಅಥವಾ ನಿರಂಕುಶ ಪ್ರಜಾಪ್ರಭುತ್ವದಂತೆ ನಿಮ್ಮ ಸ್ಥಿತಿಯಿದೆಯಲ್ಲ. ಇದಕ್ಕೇಕೆ ಅವಕಾಶ ಕೊಡುತ್ತೀರಿ?' ಎಂದು. 'ನಿಮ್ಮ ಮಾತು ಸರಿಯೇ ಸರಿ, ಸಾರ್. ಹಸ್ತಪ್ರತಿ ಪ್ರಕಟಗೊಂಡಾಗ ಮಾತ್ರವೇ ಅದಕ್ಕೆ ಸಾರ್ಥಕ್ಯ. ನನಗೆ ದೊಡ್ಡ ಹೆಸರೂ ಇಲ್ಲ, ಬಸುರೂ ಇಲ್ಲ. ಪ್ರಕಾಶಕರು ಸರಿಯಾಗಿ ಸಿಗೋಲ್ಲ; ಸಿಕ್ಕಿದರೂ ರಾಯಧನ ಕೊಡುವುದಿಲ್ಲ. ನಾನೇ ಅಚ್ಚು ಹಾಕಿಸಿದರೆ ಮಾರಾಟಗಾರರು ಸಿಕ್ಕಾಬಟ್ಟೆ ರಿಯಾಯಿತಿ ಕೇಳುತ್ತಾರೆ. ನನ್ನ ಹೆಸರಿನ ಜತೆಗೆ ಯಾವುದಾದರೂ ದೊಡ್ಡ ಹೆಸರು ತಳುಕು ಗೊಂಡರೆ ಮಾರಾಟದ ದೃಷ್ಟಿಯಿಂದ ಸ್ವಲ್ಪ ವಾಸಿ.' ಎಂದವರು ತಮ್ಮ ಸಂಕಟವನ್ನು ತೋಡಿಕೊಂಡರು. ನನಗೆ ಗೊತ್ತು, ಕನ್ನಡ ಓದಲು ಬಾರದ ದೊಡ್ಡ ಪ್ರಾಧ್ಯಾಪಕರ ಹೆಸರೂ ಅವರ ಪುಸ್ತಕಗಳಿಗೆ ಅಂಟಿಕೊಂಡಿವೆ. ಆ ಪ್ರಾಧ್ಯಾಪಕರಿಗೆ ನಾಚಿಕೆ ಬೇಡವೆ? ಅಷ್ಟೇ ಅಲ್ಲ, ಹೆಸರು ಎರವಲು ನೀಡಿದ್ದಕ್ಕಾಗಿ ಸರಿಯಾಗಿ ಅರ್ಧ ಭಾಗ ರಾಯಧನ ಅವರಿಗೆ ಸಲ್ಲಬೇಕಂತೆ. ಯಾವ ಕ್ಷೇತ್ರದ ಕಡೆ ಕಣ್ಣು ಹೊರಳಿಸಿದರೂ ಇಂಥ ದ್ರೋಹಿಗಳು ಕವಾಯತು ನಡೆಸುವುದನ್ನು ನೋಡಬಹುದಾಗಿದೆ. ನಾಗಪ್ಪನವರನ್ನು ಕಂಡಾಗಲೆಲ್ಲ ಅವರ ಬಗ್ಗೆ ನನ್ನಲ್ಲಿ ಕನಿಕರ ಅನುಕಂಪ ಮೂಡುತ್ತಿದ್ದವು. ಆದರೆ ತಮ್ಮ ವಿದ್ಯೆಯ ಬಗ್ಗೆ ಅವರಿಗೆ ತುಂಬ ಆತ್ಮಪ್ರತ್ಯಯವಿತ್ತೆಂಬುದನ್ನೂ ನಾನು ಬಲ್ಲೆ.

ಆದರೂ ಅವರು ಒಂದು ವಿಧದಲ್ಲಿ ಪುಣ್ಯವಂತರೇ ಸರಿ. ಹಲವು ಹೆಸರಾಂತ ಸಂಸ್ಥೆಗಳು ಅವರ ಗ್ರಂಥಗಳನ್ನು ಪ್ರಕಟಿಸಿವೆ. ಹಲವು ಗ್ರಂಥಗಳು ಅನೇಕ ಮುದ್ರಣಗಳನ್ನು ಕಂಡಿವೆ. ಕೆಲವು ಕನ್ನಡ ಸಾಹಿತ್ಯ ಅಕಾಡೆಮಿಯ ಪುರಸ್ಕಾರಕ್ಕೆ ಪಾತ್ರವಾಗಿವೆ. ನವಸಾಕ್ಷರರ ಸಾಹಿತ್ಯ ಪ್ರಕಾರದಲ್ಲಿ ಬೆಳಕು ಕಂಡ ಕಾಪ್ಪವ್ಯಸನ, ಬ್ಯಾಂಕುಗಳು ನವಗಾಗಿ ಮತ್ತು ಸರ್ಕಾರ ನಾವೇ ಎಂಬ ಗ್ರಂಥಗಳು ಭಾರತ ಸರ್ಕಾರದಿಂದ ನವ

ಸಾಕ್ಷರರ ಸ್ಪರ್ಧೆಯಲ್ಲಿ ಮೂರು ಸಲ ಬಹುಮಾನ ಗಿಟ್ಟಿಸಿವೆ. ಮೈಸೂರು ವಿಶ್ವ ವಿದ್ಯಾನಿಲಯದ ವಿಶ್ವಕೋಶಕ್ಕೆ ಬರೆದ ಅವರ ಹಲವಾರು ಲೇಖನಗಳು ಓದುಗರ ಮೆಚ್ಚುಗೆಗೆ ಪಾತ್ರವಾಗಿವೆ. ಗ್ರಂಥಕರ್ತ ರಿಗೆ ಓದುಗರ ಮೆಚ್ಚುಗೆಗಿಂತ ದೊಡ್ಡ ಬಹುಮಾನ ಯಾವುದಿದೆ?

೨೫–೧೧–೧೯೨೨ರಲ್ಲಿ ತೆರಕಣಾಂಬಿಯ ರಾಮಣ್ಣ ಲಕ್ಷ್ಮೀದೇವಮ್ಮನವರ ದಾಂಪತ್ಯ ದಲ್ಲಿ ಜನ್ಮತಾಳಿದ ಇಂಥ ಅಪರೂಪದ ವ್ಯಕ್ತಿ ನಾಗಪ್ಪನವರು. ತಾಯಿಯ ಊರು ಅಕ್ಕಿ ಹೆಬ್ಬಾಳಿನಲ್ಲಿ ಪ್ರಾಥಮಿಕ ವ್ಯಾಸಂಗವನ್ನೂ, ಶಾರದಾ ವಿಲಾಸ ಕಾಲೇಜಿನಲ್ಲಿ ಪ್ರೌಢ ವ್ಯಾಸಂಗವನ್ನೂ, ಮಹಾರಾಜಾ ಕಾಲೇಜಿ ನಲ್ಲಿ ಪದವಿ ಶಿಕ್ಷಣವನ್ನೂ ಪೂರೈಸುತ್ತಾರೆ. ಬಿ. ಎ. ತರಗತಿಯಲ್ಲಿ ಓದುತ್ತಿದ್ದಾಗಲೇ 'ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ಭಾಗವಹಿಸಿ, ಜೈಲುವಾಸವನ್ನನುಭವಿಸು ತ್ತಾರೆ. ವಿದ್ಯಾರ್ಥಿ ದಶೆಯಲ್ಲಿಯೇ ವಯಸ್ಕ ರಿಗೆ ರಾತ್ರಿಶಾಲೆಗಳನ್ನು ನಡಸುತ್ತಿದ್ದುದ ರಿಂದಲೋ ಏನೋ, ಸಂಬಳ ಕಡಮೆ, ಬಡ್ತಿ ಅವಕಾಶಗಳು ಇಲ್ಲವೆಂಬುದು ಗೊತ್ತಿದ್ದರೂ ಅವರು ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಕೆಲಸಕ್ಕೆ ಸೇರಿಕೊಳ್ಳುತ್ತಾರೆ. ಸೇರಿಕೊಂಡ ನಂತರ ಆ ಈ ಕಡೆಯ ಹುಲ್ಲುಗಾವಲುಗಳ ಕಡೆಗೆ ಕಣ್ಣು ಹಾಯಿಸದೆ, ತಾವು ಕೈಗೊಂಡ ಸೇವೆ ಮಹತ್ವಪೂರ್ಣವಾದದ್ದೆಂದು ತಿಳಿದು ಕರ್ತವ್ಯಪರರಾಗುತ್ತಾರೆ. ತಮ್ಮ ಆಶೆ ಆಕಾಂಕ್ಷೆಗಳಿಗೆಲ್ಲ ವಯಸ್ಕ ಶಿಕ್ಷಣವೆ ಗುರಿ ಯಾಗುತ್ತದೆ, ದಿಕ್ಸೂಚಿಯಾಗುತ್ತದೆ, ಸೂಜಿಗಲ್ಲಾಗುತ್ತದೆ. ಅದರಲ್ಲಿಯೇ ಅವರು ತೃಪ್ತಿಪಡೆಯುತ್ತಾರೆ, ಮುಕ್ತಿಯನ್ನು ಬಯಸುತ್ತಾರೆ. ಅವರಿಗೆ ಭ್ರಷ್ಟಾಚಾರವೆಂದ ರಾಗದು. ಸೋದರ ಸಂಸ್ಥೆಯೊಂದರಲ್ಲಿ ನಡೆದ ದ್ರವ್ಯಾಪಹರಣವನ್ನು ಕಂಡು ಸಿಡಿಮಿಡಿ ಗೊಳ್ಳುತ್ತಾರೆ. ಸಮಿತಿಯಲ್ಲಿಯೂ ಒಮ್ಮೊಮ್ಮೆ ಕಾಣಿಸಿಕೊಳ್ಳುತ್ತಿದ್ದ ಅಪವ್ಯಯದ ಬಗ್ಗೆ ಅವರು ಮೌನಕೋಪ ದಿಂದ ಕುದಿಯುತ್ತಿದ್ದುದುಂಟು. ಅಲ್ಲೊಬ್ಬ ಇಲ್ಲೊಬ್ಬ ಇಂಥ ಸಜ್ಜನರಿರುವುದರಿಂದಲೇ ಜಗತ್ತು ಹಳಿ ತಪ್ಪದೆ, ಮುಗ್ಗರಿಸದೆ ಮುನ್ನಡೆಯುತ್ತಿದೆ.

ತಿದ್ದುಪಡಿ

'ಅಚಾತುರ್ಯದಿಂದ ೧೧ನೇ ಸಂಚಿಕೆಯಲ್ಲಿ 'ಅರಿವಳಿಕೆ ಶಾಸ್ತ್ರ'ದ ಮತ್ತೊಬ್ಬ ಲೇಖಕರ ಹೆಸರು ಬಿಟ್ಟು ಹೋಗಿದೆ. ಅದನ್ನು ತಿದ್ದಿಕೊಳ್ಳಬೇಕಾಗಿ ವಿನಂತಿ: ಆ ಇನ್ನೊಂದು ಹೆಸರು— ಡಾ॥ ಕಂಠೀ ಬಾಲಸರಸ್ವತಿ, ಡೀನ್, ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಅರಿವಳಿಕೆ ಶಾಸ್ತ್ರ ವಿಭಾಗ, ಎಂ. ಎಸ್. ರಾಮಯ್ಯ ಮೆಡಿಕಲ್ ಕಾಲೇಜು, ಬೆಂಗಳೂರು.'

ಸಂ.

ಭಾರತದಲ್ಲಿ ಕುಟುಂಬ ಯೋಜನೆಯ ಇತಿಹಾಸ

ಟಿ. ಆರ್. ನಾಗಪ್ಪ

೨೯೦೪, ೨ನೇ ಮುಖ್ಯ ರಸ್ತೆ
ಚಾಮುಂಡಿಪುರಂ, ಮೈಸೂರು-೪

ಆಗಸ್ಟ್ ೬ ರಂದು ನಡೆದ ಪುಸ್ತಕ ಪ್ರಪಂಚ ಸಂಪಾದಕ ಮಂಡಳಿ ಸಭೆಯಲ್ಲಿ ಶ್ರೀ ಟಿ. ಆರ್. ನಾಗಪ್ಪನವರ ಲೇಖನದ ಆಯ್ಕೆ ಕುರಿತು ನಡೆದ ಚರ್ಚೆಯಲ್ಲಿ ಅವರು ವಯಸ್ಕರ ಶಿಕ್ಷಣಕ್ಕೆ ಸಲ್ಲಿಸಿರುವ ಬಹುಮುಖ ಸೇವೆಯ ಪ್ರಸ್ತಾಪವಾಗಿ "ವಯಸ್ಕರ ಶಿಕ್ಷಣ ಸೇವೆಗೆ ಪ್ರಶಸ್ತಿ ಬರುವುದಾದರೆ ಅದಕ್ಕೆ ಮೊದಲ ಅರ್ಹ ವ್ಯಕ್ತಿ ನಾಗಪ್ಪನವರು" ಎಂದು ಪ್ರೊ॥ ದೇಜಗೌ ಅವರು ಆ ಸಂದರ್ಭದಲ್ಲಿ ಹೇಳಿದ ಮಾತು ಕಿವಿಯಲ್ಲಿರುವಾಗಲೇ (ಮರುದಿನವೆ) ನಾಗಪ್ಪನವರಿಗೆ ಶ್ರದ್ಧಾಂಜಲಿ ಅರ್ಪಿಸಬೇಕಾಗಿ ಬಂತು.

ಶ್ರೀ ಟಿ. ಆರ್. ನಾಗಪ್ಪನವರು (೨೫-೧೧-೧೯೭೭) ೭೫ ವರ್ಷಗಳ ಸಾರ್ಥಕ ಬದುಕು ನಡೆಸಿ, ಮೂರು ದಶಕಗಳಿಗೂ ಮಿಗಿಲಾಗಿ ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಸೇವೆ ಸಲ್ಲಿಸಿ ಕಳೆದ ೨೦ ವರ್ಷಗಳ ಹಿಂದೆ ಔಪಚಾರಿಕವಾಗಿ ನಿವೃತ್ತರಾಗಿದ್ದರು. ಶ್ರೀಯುತರ ಕಾರ್ಯಕ್ಷೇತ್ರದಲ್ಲಿನ ವೈವಿಧ್ಯಮಯ ಅನುಭವ, ದೇಶ ವಿದೇಶಗಳ ಪರಿಚಯ, ಪರಿಣತರ ಒಡನಾಟ, ಕ್ರಿಯಾಶೀಲತೆ, ವಯಸ್ಕರ ಶಿಕ್ಷಣ ದಲ್ಲಿದ್ದ ನಿಷ್ಠೆ, ಪಟ್ಟಾಗಿ ಕೂತು ಬರೆಯುವ ಕಲೆ, ಬರೆದುದನ್ನು ಪ್ರಕಟಿಸುವ ಛಲ, ಪ್ರಕಟವಾದುದನ್ನು ಮಾರಾಟ ಮಾಡುವ ಸಾಹಸ ಇವೆಲ್ಲದರ ಪರಿಣಾಮ ನೂರಾರು ಬಿಡಿ ಲೇಖನಗಳು ಹಾಗೂ ೪೬ಕ್ಕೂ ಮಿಗಿಲಾದ ಕೃತಿಗಳ ಪ್ರಕಟಣೆ. ಇದು ವಯಸ್ಕರ ಶಿಕ್ಷಣದಲ್ಲಿ ನಾಗಪ್ಪನರು ಮಾಡಿದ ಎಣೆ ಇಲ್ಲದ ಸಾಧನೆ.

ಮುಂಗೋಪ, ಹಾಸ್ಯ, ವ್ಯಂಗ್ಯ, ಶಿಸ್ತು, ಚಟುವಟಿಕೆ ಈ ಎಲ್ಲವನ್ನೂ ಮೈಗೂಡಿಸಿಕೊಂಡಿದ್ದ ನಾಗಪ್ಪನರು ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದರು. ವಯಸ್ಕರ ಶಿಕ್ಷಣದ ಭಾವನಾತ್ಮಕ ಬೆಸುಗೆಯೊಂದಿಗೆ ಈ ಕೆಲಸದ ಅನುಷ್ಠಾನದಲ್ಲಿ ಯಾರೇ ಎಡವಿದರೂ ಚಾಟಿಯಿಂದ ಎಚ್ಚರಿಸುತ್ತ, ಬದುಕಿರುವವರೆಗೂ ಬರೆಯುತ್ತಲೇ ಇದ್ದ ಇವರ ನಿಧನದಿಂದಾಗಿ ವಯಸ್ಕರ ಶಿಕ್ಷಣಕ್ಕೆ ನಷ್ಟವಾಗಿದೆ. ವಯಸ್ಕರ ಶಿಕ್ಷಣಕ್ಕೆ ಬಹುಮುಖ ಸೇವೆ ಸಲ್ಲಿಸಿದ ಶ್ರೀ ಟಿ. ಆರ್. ನಾಗಪ್ಪ ಅವರನ್ನು ಅಂತಾರಾಷ್ಟ್ರೀಯ ಸಾಕ್ಷರತಾ ದಿನಾಚರಣೆ—(ಸೆಪ್ಟೆಂಬರ್ ೮) ಸಂದರ್ಭದಲ್ಲಿ ಸ್ಮರಿಸಿ, ಅನಕ್ಷರತೆಯ ನಿವಾರಣೆಗೆ ಪ್ರಮುಖ ಸವಾಲಾಗಿರುವ 'ಜನಸಂಖ್ಯಾ ಸ್ಫೋಟ' ಕುರಿತ ದಿವಂಗತರ ಈ ಲೇಖನ ಪ್ರಕಟಿಸಿದೆ.

೧೯ನೆಯ ಶತಮಾನದ ಪ್ರಾರಂಭದಲ್ಲಿ ಅಮೆರಿಕದ ಮಹಾನ್ ಸಮಾಜ ಸೇವಕಿ ಮಾರ್ಗರೇಟ್ ಸ್ಯಾಂಗರ್ ಎಂಬ ಮಹಿಳೆ ಕುಟುಂಬ ಯೋಜನಾ ಚಳುವಳಿಯನ್ನು ಪ್ರಾರಂಭಿಸಿ 'ಬೇಬಿಸ್ ಬೈ ಚಾಯ್ಸ್, ನಾಟ್ ಬೈ ಚಾನ್ಸ್' ಎಂಬ ತತ್ವವನ್ನು ಪ್ರತಿಪಾದಿಸಿದಳು. ಮಹಿಳೆಯರಿಗೆ ಗರ್ಭ ನಿರೋಧಕಗಳನ್ನು ಬಳಸಲು ಆಕೆ ಹೇಳಿ

ದಳು. "ಜನನ ನಿಯಂತ್ರಣ" ಎಂಬ ಪದವನ್ನು ಮೊದಲ ಬಾರಿಗೆ ಸೃಷ್ಟಿಸಿದ ಶ್ರೀಯುಸ್ಸ್ ಆಕೆಗೆ ಸೇರತಕ್ಕದ್ದು. ಆಕೆ ಅಮೆರಿಕ ರಾಷ್ಟ್ರದ ಜನನ ನಿಯಂತ್ರಣ ಒಕ್ಕೂಟದ ಪ್ರಥಮ ಅಧ್ಯಕ್ಷೆ ಆದಳು. ಆಕೆ ವೈದ್ಯರನ್ನು ಜನನ ನಿಯಂತ್ರಣ ಕಾರ್ಯಕ್ಕೆ ಹಚ್ಚಿ ಸ್ತ್ರೀವಿಮೋಚನೆಗೆ ನಾಂದಿ ಹಾಡಿದಳು. ೧೯೨೩ ರಲ್ಲಿ ಈ ಒಕ್ಕೂಟವು ಮಾರ್ಗರೇಟ್ ಸ್ಯಾಂಗರ್ ಹೆಸರಿನಲ್ಲಿ 'ಕ್ಲಿನಿಕಲ್ ರಿಸರ್ಚ್ ಬ್ಯೂರೋ' ಸಂಸ್ಥೆಯನ್ನು ಸ್ಥಾಪಿಸಿತು.

ಭಾರತದಲ್ಲಿ ಕುಟುಂಬ ಯೋಜನೆಯ ಇತಿಹಾಸ

೧೯೨೫ಕ್ಕೂ ಮುನ್ನ ಭಾರತ ಸಂಪ್ರದಾಯವಾದಿಗಳ ತವರುಮನೆ ಆಗಿತ್ತು. ಅವರ ನಿರೋಧದ ಮಧ್ಯೆ ಡಾ|| ಆರ್. ಡಿ. ಕರ್ವೆಯವರು ಮುಂಬಯಿನಲ್ಲಿ ಒಂದು ಕುಟುಂಬಯೋಜನ ಆಸ್ಪತ್ರೆಯನ್ನು ತೆರೆದರು. ಆನಂತರ ಮೈಸೂರು ಸಂಸ್ಥಾನದ ರಾಜರ್ಷಿ ನಾಲ್ವಡಿಕೃಷ್ಣರಾಜ ಒಡೆಯರ್ ಅವರು ೧೯೩೦ರ ಜೂನ್ ೧೧ ರಂದು ಮೈಸೂರು ನಗರದ ಚೆಲುವಾಂಬ ಮತ್ತು ಕೃಷ್ಣರಾಜೇಂದ್ರ ಆಸ್ಪತ್ರೆಗಳಲ್ಲಿ, ಅನಂತರ ಬೆಂಗಳೂರು ನಗರದ ವಾಣಿವಿಲಾಸ ಆಸ್ಪತ್ರೆಯಲ್ಲಿ ಕುಟುಂಬಯೋಜನೆ ಚಿಕಿತ್ಸಾಕೇಂದ್ರಗಳನ್ನು ಆರಂಭಿಸಿದರು. ಈ ಕೇಂದ್ರಗಳು ಇಡೀ ವಿಶ್ವಕ್ಕೆ ಮಾದರಿ ಆಗಿದ್ದವು. ಮೊಟ್ಟಮೊದಲಾಗಿ ಸ್ತ್ರೀ ಕುಟುಂಬ ಯೋಜನಾ ಕೇಂದ್ರ ಸ್ಥಾಪನೆ ಆಯಿತು. ಆದ್ದರಿಂದ ಈ ದಿಸೆಯಲ್ಲಿ ಕರ್ನಾಟಕದ ಹಿಂದಿನ ಮೈಸೂರು ರಾಜ್ಯ ಮಾದರಿ ಎನ್ನಬಹುದು. ೧೯೩೦ರಲ್ಲಿ ಡಾ|| ಎ. ಆರ್. ಪಿಳ್ಳೆಯವರು ಕುಟುಂಬ ಯೋಜನೆಯ ಅಧ್ಯಯನ ಕೇಂದ್ರವನ್ನು ಪ್ರಾರಂಭಿಸಿದರು. ೧೯೮೦ರಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮದ ಸುವರ್ಣ ಮಹೋತ್ಸವ ಆರಂಭಿಸಿದವು.

ಸರ್ ಎಂ. ವಿಶ್ವೇಶ್ವರಯ್ಯನವರೂ ಸಹ ಜನನ ನಿಯಂತ್ರಣ ಕಾರ್ಯಕ್ರಮಗಳ ಬಗ್ಗೆ ಆಸಕ್ತಿ ವಹಿಸಿದರು. ಗಾಂಧೀಜಿಯವರೂ ಸಹ ಜನ ಸಂಖ್ಯೆಯ ಹೆಚ್ಚಳದ ಬಗ್ಗೆ ಚಿಂತಿಸತೊಡಗಿದರು. ಅವರು ತಮ್ಮ 'ಯಂಗ್ ಇಂಡಿಯ' (೧೨-೩-೧೯೨೫) ಪತ್ರಿಕೆಯಲ್ಲಿ ಸಂತತಿ ನಿಯಂತ್ರಣದ ಬಗ್ಗೆ ಲೇಖನವನ್ನು ಬರೆದರು. ೧೯೨೫ ರಿಂದ ೧೯೩೫ರ ವರವಿಗೆ 'ಯಂಗ್ ಇಂಡಿಯಾ' ಮತ್ತು 'ಹರಿಜನ' ಪತ್ರಿಕೆಗಳಲ್ಲಿ ಜನಸಂಖ್ಯಾ ಬೆಳವಣಿಗೆ, ಸಂತತಿ ನಿಯಂತ್ರಣ ಬ್ರಹ್ಮಚರ್ಯ, ಸಂಯಮ ಮತ್ತು ಇತರ ಕೃತಕ ವಿಧಾನಗಳ ಬಗ್ಗೆ ವಿವರವಾಗಿ ವಿಚಾರ ಮಾಡಿರುವರು. ಜನಸಂಖ್ಯಾ ಸಮಸ್ಯೆಗೆ ಸಂತತಿ ನಿಯಂತ್ರಣ ಮುಖ್ಯ ಪರಿಹಾರ ಎಂದು ಅವರು ನಂಬಿದ್ದರು. ೧೯೩೬ ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯವು ಸ್ನಾತಕೋತ್ತರ ಮಟ್ಟದಲ್ಲಿ ಜನನ ನಿಯಂತ್ರಣವನ್ನು ಒಂದು ಅಧ್ಯಯನ ವಿಷಯವನ್ನಾಗಿ ವ್ಯವಸ್ಥೆ ಮಾಡಿತು.

೧೯೩೫ ರಲ್ಲಿ ಜವಹರಲಾಲ್ ನೆಹರು ಅವರ ಅಧ್ಯಕ್ಷತೆಯಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಿಂದ ರಚನೆಯಾದ ಸಮಿತಿ ಕುಟುಂಬ ಯೋಜನೆ ಕಾರ್ಯಕ್ರಮಗಳನ್ನು ಬೆಂಬಲಿಸಿತು. ೧೯೩೬ರಲ್ಲಿ ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶಗಳಲ್ಲಿ ಕುಟುಂಬ ಯೋಜನಾ ಕೇಂದ್ರಗಳು ಆರಂಭವಾದವು. ೧೯೩೫ ಮತ್ತು ೧೯೩೮ ರಲ್ಲಿ ಕುಟುಂಬ ಯೋಜನೆಗೆ ವ್ಯಾಪಕ

ಬೆಂಬಲ ದೊರೆಯಿತು. ೧೯೪೦ ರಲ್ಲಿ ಸರ್ ಪಿ. ಎಸ್. ಸಪ್ರುರವರು ಜನನ ನಿಯಂತ್ರಣ ಕೇಂದ್ರಗಳ ಸ್ಥಾಪನೆ ಬಗ್ಗೆ ರಾಜ್ಯ ಸಭೆಯಲ್ಲಿ ನಿರ್ಣಯವನ್ನು ಯಶಸ್ವಿಯಾಗಿ ಮಂಡಿಸಿದರು. ೧೯೪೬ರ ಭೂರ ಸಮಿತಿಯು ತನ್ನ ವರದಿಯಲ್ಲಿ ಜನನ ನಿಯಂತ್ರಣ ಕೇಂದ್ರಗಳ ಸ್ಥಾಪನೆಯ ಬಗ್ಗೆ ಬಲವಾದ ಶಿಫಾರಸುಗಳನ್ನು ಮಾಡಿತು. ೧೯೪೯ ರಲ್ಲಿ ಮುಂಬಯಿ ನಗರದಲ್ಲಿ ಶ್ರೀಮತಿ ಧನ್ವಂತ್ರಿ ರಾಮರಾವ್ ನೇತೃತ್ವದಲ್ಲಿ ಕುಟುಂಬ ಯೋಜನಾ ಸಂಸ್ಥೆ ಅಸ್ತಿತ್ವಕ್ಕೆ ಬಂತು. ಅದು ದೇಶಾದ್ಯಂತ ತನ್ನ ಶಾಖೆಗಳನ್ನು ಸ್ಥಾಪಿಸಿತು. ಈ ಶಾಖೆಗಳು ಯೋಜನಾನೀತಿ ಮತ್ತು ಕಾರ್ಯಕ್ರಮಗಳ ಪ್ರಚಾರ ಕೈಗೊಂಡವು. ಜೊತೆಗೆ ಜನಸಂಖ್ಯಾ ಅಧ್ಯಯನ, ಜನಸಂಖ್ಯಾ ಶಿಕ್ಷಣ ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿವೆ. ಅದೇ ವರ್ಷ ಯೋಜನಾ ಆಯೋಗದ ಮೊದಲ ಸಭೆ ನಡೆಯಿತು. ಜವಹರ್‌ಲಾಲ್ ನೆಹರು ಅವರು ಕುಟುಂಬ ಯೋಜನೆಯ ಅಗತ್ಯ ಮತ್ತು ಆವಶ್ಯಕತೆಗಳನ್ನು ಕುರಿತು ಸಭೆಯನ್ನು ಉದ್ದೇಶಿಸಿ ಇಡೀ ರಾಷ್ಟ್ರಕ್ಕೆ ಅದನ್ನು ಮನವರಿಕೆ ಮಾಡಿಕೊಟ್ಟರು. ೧೯೫೧ರಲ್ಲಿ ಕುಟುಂಬ ಯೋಜನೆಯನ್ನು ರಾಷ್ಟ್ರೀಯ ಕಾರ್ಯಕ್ರಮವನ್ನಾಗಿ ಕೈಕೊಂಡ ಮೊದಲನೆಯ ರಾಷ್ಟ್ರ ಭಾರತ. ಪ್ರತಿಯೊಂದು ಪಂಚವಾರ್ಷಿಕ ಯೋಜನೆಯಲ್ಲಿ ಕುಟುಂಬ ಯೋಜನೆಗೆ ಹಣ ಮೀಸಲಾಯಿತು. ಇತ್ತೀಚೆಗೆ ಶಾಲೆ ಕಾಲೇಜುಗಳಲ್ಲಿಯೂ ಸಹ ಜನಸಂಖ್ಯಾ ಶಿಕ್ಷಣ ಪಠ್ಯವಸ್ತುವಾಯಿತು. ೧೯೫೨ರಲ್ಲಿ "ಜನಸಂಖ್ಯಾ ಕಾರ್ಯನೀತಿ ಸಮಿತಿ" ಮತ್ತು ಜನಸಂಖ್ಯಾ ಸಂಶೋಧನಾ ಹಾಗೂ ಕಾರ್ಯಕ್ರಮ ಸಮಿತಿಗಳು ನೇಮಕಗೊಂಡವು. ಭಾರತ ಸರಕಾರದ ಆರೋಗ್ಯ ಖಾತೆ ಕುಟುಂಬ ಯೋಜನಾ ವಿಭಾಗವನ್ನು ಪ್ರಾರಂಭಿಸಿತು. ಕುಟುಂಬ ಕಲ್ಯಾಣ ಕಾರ್ಯಕ್ರಮಗಳಿಗೆ ತಗುಲಿದ ವೆಚ್ಚದ ವಿವರ ಹೀಗಿದೆ.

ಯೋಜನಾವಾರು ಕುಟುಂಬ ಕಲ್ಯಾಣ ಕಾರ್ಯಕ್ರಮಗಳಿಗೆ ತಗುಲಿದ ವೆಚ್ಚದ ವಿವರ

ಪಂಚವಾರ್ಷಿಕ ಯೋಜನೆ ವಿವರ		ಮಂಜೂರಾದ ಹಣ	ವೆಚ್ಚವಾದ ಹಣ
೧	೧೯೫೧–೫೬	೬೫ ಲಕ್ಷ ರೂ.ಗಳು	೧೪.೫ ಲಕ್ಷ ರೂ.ಗಳು
೨	೧೯೫೬–೬೧	೫ ಕೋಟಿ ರೂ.ಗಳು	೨ ೨ ಕೋಟಿ ರೂ.ಗಳು
೩	೧೯೬೧–೬೬	೨೭ ”	೨೪.೯ ”
	೧೯೬೬–೬೯	೮೨.೯ ”	೭೦.೪ ”
೪	೧೯೬೯–೭೪	೨೮೫.೮ ”	೨೮೪.೪ ”
೫	೧೯೭೪–೭೯	೨೮೫.೬ ”	೪೦೯.೦ ”
೬	೧೯೭೯–೮೫	೨೨೮.೦ ”	೨೨೬.೧ ”
೭	೧೭೮೫–೯೦	೩.೨೫೬.೦ ”	

ಕುಟುಂಬ ಯೋಜನೆಗೆ ಯೋಜನಾವಾರು ಹೆಚ್ಚು ಹಣ ಖರ್ಚಾಗಿರುವುದನ್ನು ಕಾಣಬಹುದು. ೧೯೫೧ರಲ್ಲಿ ಭಾರತ ಸರಕಾರ ಜನನ ನಿಯಂತ್ರಣ ಕಾರ್ಯಕ್ರಮದ ಆವಶ್ಯಕತೆಯನ್ನು ಮನಗಂಡಿತು. ೧೯೫೨ರ ನವಂಬರಿನಲ್ಲಿ ಮುಂಬಯಿ ನಗರದಲ್ಲಿ ಮೂರನೆಯ ಅಂತರರಾಷ್ಟ್ರೀಯ ಯೋಜನಾಬದ್ಧ ಪಾಲಕತ್ವ ಸಮ್ಮೇಳನ ನಡೆಯಿತು. ಅದರ ಫಲವಾಗಿ ಅಂತರ ರಾಷ್ಟ್ರೀಯ ಯೋಜನಾಬದ್ಧ ಪಾಲಕತ್ವ ಒಕ್ಕೂಟ ಸ್ಥಾಪನೆ ಆಯಿತು. ಮೂರು ದಿನಗಳ ಕಾಲ ೮೯ ವೈದ್ಯರಿಗೆ ಕುಟುಂಬ ಯೋಜನಾ ಶಸ್ತ್ರಚಿಕಿತ್ಸೆ ಹಾಗೂ ಗರ್ಭ ನಿರೋಧಕಗಳ ಬಗ್ಗೆ ವಿಶೇಷ ತರಬೇತಿ ದೊರೆಯಿತು. ಸುರಕ್ಷಿತ ಕಾಲಾವಧಿ ವಿಧಾನ ಫಲಾನುಭವಿಗಳಿಗೆ ೨೮ ತ್ರಿವರ್ಣಮಣಿಗಳ ಸರವನ್ನು ಉಚಿತವಾಗಿ ಹಂಚಿಕೆ ಮಾಡಲಾಯಿತು. ಸಂಯುಕ್ತ ರಾಷ್ಟ್ರ ಸಂಘ, ಭಾರತ ಸರಕಾರ ಮತ್ತು ಮೈಸೂರು ಸರಕಾರಗಳ ಆಶ್ರಯದಲ್ಲಿ 'ಮೈಸೂರು ಜನ-ಸಂಖ್ಯಾ ಅಧ್ಯಯನ' ಎಂಬ ಸಂಶೋಧನಾ ಕಾರ್ಯ ಆರಂಭವಾಯಿತು. ಅದರ ವರದಿಯ ಆಧಾರದ ಮೇಲೆ ಜನಸಂಖ್ಯಾ ನೀತಿ ಸಮಿತಿ ರಚನೆ ಆಯಿತು.

ಆರಂಭದಲ್ಲಿ ಕುಟುಂಬ ಯೋಜನಾ ಚಿಕಿತ್ಸಾಲಯಗಳು ನಿರೋಧಕಗಳನ್ನು ವಿತರಿಸುತ್ತಿದ್ದವು. ಅಂತಹ ಕ್ಲಿನಿಕ್‌ಗಳ ಸಂಖ್ಯೆ ೧೯೫೧ರಲ್ಲಿ ೫೦. ೧೯೫೬ರಲ್ಲಿ ಅವುಗಳ ಸಂಖ್ಯೆ ೧೬೫ಕ್ಕೆ ಏರಿತು. ೧೪೭ ಕುಟುಂಬ ಯೋಜನಾ ಆಸ್ಪತ್ರೆಗಳು ಆರಂಭವಾದವು. ಅವುಗಳ ಪೈಕಿ ಗ್ರಾಮಾಂತರ ಪ್ರದೇಶಗಳಲ್ಲಿ ೨೮ ಆಸ್ಪತ್ರೆಗಳಿದ್ದವು. ೨೦೫ ಖಾಸಗಿ ಆಸ್ಪತ್ರೆಗಳಿಗೆ ಕುಟುಂಬ ಯೋಜನೆಯನ್ನು ಕೈಕೊಳ್ಳಲು ಧನ ಸಹಾಯ ಒದಗಿತು.

೨ನೇ ಯೋಜನೆ ೧೯೫೬-೬೧

೧-೯-೧೯೫೦ ರಲ್ಲಿ ಕೇಂದ್ರದಲ್ಲಿ ಕುಟುಂಬ ಯೋಜನಾ ಮಂಡಳಿ ಸ್ಥಾಪನೆ ಆಯಿತು. ಖಾಸಗಿ ಸಂಘ ಸಂಸ್ಥೆಗಳಿಗೆ ನೆರವು ಮುಂದುವರಿಯಿತು. ವೈದ್ಯ ಸಿಬ್ಬಂದಿಗೆ ವಿಶೇಷ ತರಬೇತಿ ಕಾರ್ಯಾಗಾರಗಳು ಪ್ರಾರಂಭವಾದವು. ಆಗ ೪೧೬೪ ಕ್ಲಿನಿಕ್‌ಗಳು ಕುಟುಂಬ ಯೋಜನಾ ಸೇವೆ ನೀಡುತ್ತಿದ್ದವು. ಡಾ|| ಗೋರೆ ಅವರು ಮುಂಬಯಿ ನಗರದಲ್ಲಿ ಭಾರತ ಸರಕಾರದ ಕುಟುಂಬ ಯೋಜನಾ ತರಬೇತಿ ಮತ್ತು ಸಂಶೋಧನಾ ಕೇಂದ್ರ ಪ್ರಾರಂಭ ಮಾಡಿದರು.

ಸಂಯುಕ್ತ ರಾಷ್ಟ್ರ ಸಂಘ, ಭಾರತ ಸರಕಾರ ಹಾಗೂ ಸರದೊರಬ್ಜಿ ಟಾಟಾ ಟ್ರಸ್ಟ್ ಇವುಗಳ ಸಂಯುಕ್ತ ಆಶ್ರಯದಲ್ಲಿ ಮುಂಬಯಿನಲ್ಲಿ ಜನಸಂಖ್ಯಾ ಅಧ್ಯಯನ ತರಬೇತಿ ಮತ್ತು ಸಂಶೋಧನ ಕೇಂದ್ರ ಸ್ಥಾಪನೆ ಆಯಿತು. ಮಹಾರಾಷ್ಟ್ರ ಸರಕಾರ ಕುಟುಂಬ ಯೋಜನಾ ಕಾರ್ಯಕ್ರಮವನ್ನು ಒಪ್ಪಿಕೊಂಡಿತು. ಡಾ|| ಜಿ. ಎಸ್. ಫಡ್ಕೆಯವರು ಮೊದಲ ಬಾರಿಗೆ ಪುರುಷ ಸಂತಾನ ನಿರೋಧ ಶಸ್ತ್ರಕ್ರಿಯೆಯನ್ನು ನಡೆಸಿದರು. ಈ ವಿಭಾಗದಲ್ಲಿ ಅವರ ಕಾಣಿಕೆ ಅಪಾರ. ೧೯೫೮ ರಲ್ಲಿ ಸಂತಾನ ನಿರೋಧ ಶಸ್ತ್ರಕ್ರಿಯೆಯನ್ನು ಅಂಗೀಕರಿಸಿದ್ದು ಒಂದು ಸಂತೋಷದ ವಿಷಯ. ಕೇಂದ್ರ ಸರಕಾರವು ಸಂತಾನ ನಿರೋಧ ಶಸ್ತ್ರಕ್ರಿಯೆಯ ಖರ್ಚನ್ನು ಭರಿಸಲು ಒಪ್ಪಿತು. ಎರಡನೆಯ

ಪಂಚವಾರ್ಷಿಕ ಯೋಜನೆಯ ಅಂತ್ಯದ ವೇಳೆಗೆ ೧.೫ ಲಕ್ಷ ಸಂತಾನ ನಿರೋಧ ಶಸ್ತ್ರ ಕ್ರಿಯೆಗಳು ನಡೆದವು.

ಸಾಮೂಹಿಕ ಶಿಕ್ಷಣ ಕಾರ್ಯಕ್ರಮಗಳ ಅಂಗವಾಗಿ ದೊಡ್ಡ ದೊಡ್ಡ ಭಿತ್ತಿ ಪತ್ರಗಳು ಕರಪತ್ರಗಳು, ಚಿತ್ರಗಳು, ಮಡಿಕೆ ಹಾಳೆಗಳು ಮತ್ತು ಪುಸ್ತಕಗಳು ತಯಾರಾಗಿ ಪ್ರಚಾರಕ್ಕೆ ಬಂದವು. ಜೊತೆಗೆ ಪರಿಣಾಮಕಾರಿಯಾದ ಪ್ರಭಾವ ಬೀರಬಲ್ಲ ಚಲನ ಚಿತ್ರ ಸ್ಲೈಡ್ ಮತ್ತು ಸ್ಟ್ರಿಪ್‌ಗಳು ಬಳಕೆಗೆ ಬಂದವು.

ಫೋರ್ಡ್ ಫೌಂಡೇಶನ್ ಮತ್ತು ಪಾಪ್ಯುಲೇಷನ್ ಕೌನ್ಸಿಲ್ ಅಂತರರಾಷ್ಟ್ರೀಯ ಸಂಸ್ಥೆಗಳು. ಅವು ಯೋಜನೆಗೆ ತಾಂತ್ರಿಕ ಮತ್ತು ಧನ ಸಹಾಯ ನೀಡಿದವು.

ಈ ಅವಧಿಯಲ್ಲಿ ಸಂತಾನ ನಿರೋಧಕ ಸಾಧನಗಳನ್ನು ಅರ್ಹದಂಪತಿಗಳಿಗೆ ಒದಗಿಸಿದರು. ಶೇ. ೦.೨ ಮಂದಿ ಅರ್ಹ ದಂಪತಿಗಳು ಕುಟುಂಬ ಯೋಜನೆಯನ್ನು ಅನುಸರಿಸಿದರು. ೩೨೦ ನಗರಗಳಲ್ಲಿ ಹಾಗೂ ೧೮೬ ಗ್ರಾಮಗಳಲ್ಲಿ ಆರೋಗ್ಯ ಕೇಂದ್ರಗಳು ಆರಂಭವಾದವು.

ಎರಡನೆಯ ಯೋಜನೆಯ ಅಂತ್ಯದಲ್ಲಿ ಎಲ್ಲ ರಾಜ್ಯಗಳು ಒಂದು ಕುಟುಂಬ ಯೋಜನಾ ಕೇಂದ್ರವನ್ನು ಹೊಂದಿದ್ದವು.

೩ನೆಯ ಯೋಜನೆ ೧೯೬೧-೬೬

ಕುಟುಂಬ ಯೋಜನೆ "ಯೋಜಿತ ಅಭಿವೃದ್ಧಿಯ ಕೇಂದ್ರ ಬಿಂದು ಎಂದು ಘೋಷಿಸಲಾಯಿತು.

ಅರ್ಹ ದಂಪತಿಗಳಿಗೆ ತಿಳಿವಳಿಕೆ, ನೇರ ಸೇವೆ ಸಲ್ಲಿಕೆ, ಅರೆ ವೈದ್ಯಕೀಯ ಮತ್ತು ವೈದ್ಯಕೀಯ ಸಿಬ್ಬಂದಿಗೆ ತರಬೇತಿ ನೀಡಲು ಒಂದು ಕೋಟಿ ಜನರಿಗೆ ಒಂದೊಂದು ಪ್ರಾದೇಶಿಕ ಕುಟುಂಬ ಯೋಜನಾ ಘಟಕ ಪ್ರಾರಂಭವಾಯಿತು.

ಕೇಂದ್ರದಲ್ಲಿ ಕುಟುಂಬ ಯೋಜನಾ ಇಲಾಖೆ ಸ್ಥಾಪನೆ ಆಯಿತು. ಅಂದರೆ ರಾಷ್ಟ್ರಮಟ್ಟದಲ್ಲಿ ಒಂದು ವ್ಯವಸ್ಥಿತ ಸಂಘಟಣೆ ರೂಪುಗೊಂಡಿತು. ಕುಟುಂಬ ಯೋಜನೆಯ ಸಂಕೇತ. "ಕೆಂಪು ತ್ರಿಕೋನ" ವನ್ನು ರೂಪಿಸಿದವರು ಕೃಪಾನಾರಾಯಣ. ಅವರು ಸ್ವತಂತ್ರ ಕುಟುಂಬ ಯೋಜನೆಯ ವಿಭಾಗದ ಮೊದಲ ಜಂಟಿ ನಿರ್ದೇಶಕರು.

ಈ ಅವಧಿಯಲ್ಲಿ ರಾಷ್ಟ್ರದಲ್ಲಿ ೩೬೭೬ ಗ್ರಾಮೀಣ ಉಪ ಕೇಂದ್ರಗಳು, ೧೩೮೧ ನಗರ ಕುಟುಂಬ ಯೋಜನಾ ಕೇಂದ್ರಗಳು ಕಾರ್ಯನಿರ್ವಹಿಸಿದವು. ೨೮ ಪ್ರಾದೇಶಿಕ ಕುಟುಂಬ ಯೋಜನಾ ತರಬೇತಿ ಸಂಸ್ಥೆಗಳು ಕಾರ್ಯ ನಿರ್ವಹಿಸಿದವು.

೧೯೬೫-೬೬ರಲ್ಲಿ ಕುಟುಂಬ ಯೋಜನೆ ಮಾಡಿಸಿಕೊಂಡವರಿಗೆ, ವೈದ್ಯರಿಗೆ, ಯೋಜನೆಯನ್ನು ಅಂಗೀಕರಿಸುವಂತೆ ಮನ ಒಲಿಸುವವರಿಗೆ ಪ್ರೋತ್ಸಾಹ ಧನ ನೀಡಲು ನಿರ್ಧಾರ ಆಯಿತು. ಯೋಜನೆಯನ್ನು ಪ್ರಚಾರಗೊಳಿಸಲು 'ಸೆಂಟರ್ ಕಾಲಿಂಗ್' ಎಂಬ ಮಾಸ ಪತ್ರಿಕೆ ಪ್ರಕಟವಾಯಿತು.

ಎರಡನೆಯದಾಗಿ ಸ್ವಯಂಸೇವಾ ಸಂಘಗಳಿಗೆ ಅನುದಾನ ಮಂಜೂರಾಯಿತು. ಸಮಾಜ ಸೇವಕರಿಗೆ ಪ್ರೋತ್ಸಾಹ ದೊರೆಯಿತು.

ಯೋಜನೆಯ ಅಂತ್ಯದಲ್ಲಿ ೪೮೦ ಗ್ರಾಮೀಣ, ೨೭,೭೫೨ ಅರೆ-ಗ್ರಾಮೀಣ ಹಾಗೂ ೧೮೦೫ ನಗರ ಕೇಂದ್ರಗಳು

ಕುಟುಂಬ ಕಾರ್ಯಯೋಜನೆಯನ್ನು ನಿರ್ವಹಿಸಿದವು.

ಶೇಕಡಾ ೩.೭ ರಷ್ಟು ಮಂದಿ ಅರ್ಹ ದಂಪತಿಗಳು ಕುಟುಂಬ ಯೋಜನಾ ವಿಧಾನವನ್ನು ಅನುಸರಿಸಿದರು. ೧೯೬೨ ಮತ್ತು ೧೯೬೫ ರಲ್ಲಿ ಭಾರತವು ನೆರೆಯ ಚೀನಾ ಹಾಗೂ ಪಾಕಿಸ್ಥಾನಗಳೊಂದಿಗೆ ಯುದ್ಧ ಹೂಡಬೇಕಾಯಿತು, ಆದ್ದರಿಂದ ಈ ಕ್ಷೇತ್ರದಲ್ಲಿ ನಿರೀಕ್ಷಿಸಿದ ಪ್ರಗತಿಯನ್ನು ಸಾಧಿಸಲು ಆಗಲಿಲ್ಲ. ಮೇಲಾಗಿ ೪ನೆಯ ಪಂಚವಾರ್ಷಿಕ ಯೋಜನೆಗೆ ಬದಲಾಗಿ ೧೯೬೬-೬೯ರ ಅವಧಿಯಲ್ಲಿ ಮೂರು ವಾರ್ಷಿಕ ಯೋಜನೆಗಳು ಕಾರ್ಯರೂಪಕ್ಕೆ ಬಂದವು.

೧೯೬೬ ರಲ್ಲಿ ಕುಟುಂಬ ಯೋಜನೆಯ ನಿರೂಪಣಾ ಸಂಸ್ಥೆ ಅಸ್ತಿತ್ವಕ್ಕೆ ಬಂದಿತು. ಸ್ವತಂತ್ರ ಕುಟುಂಬ ಯೋಜನಾ ಇಲಾಖೆ ಸ್ಥಾಪನೆ ಆಯಿತು. ಅದರ ಆಶ್ರಯದಲ್ಲಿ ಏಳು ಪ್ರಾದೇಶಿಕ ನಿರ್ದೇಶನಾಲಯಗಳು ಅಹಮದಾಬಾದು, ಬೆಂಗಳೂರು, ಭೂಪಾಲ, ಕಲ್ಕತ್ತಾ, ಚಂಡಿಘಡ, ಪಾಟ್ಣ ಮತ್ತು ಲಕ್ನೋಗಳಲ್ಲಿ ಸ್ಥಾಪನೆ ಆದವು.

೧೯೬೮ರ ಸೆಪ್ಟೆಂಬರಿನಲ್ಲಿ ಕುಟುಂಬ ಯೋಜನಾ ಇಲಾಖೆ ನಿರೋಧದ ಬಳಕೆಯ ಪ್ರಚಾರವನ್ನು ಪ್ರಪ್ರಥಮವಾಗಿ ಕೈಕೊಂಡಿತು. ಜೊತೆಗೆ ಶೈಕ್ಷಣಿಕ ಮತ್ತು ಸಮೂಹ ಮಾಧ್ಯಮ ಚಟುವಟಿಕೆಗಳು ಬಳಕೆಗೆ ಬಂದವು.

ಯೋಜನೆಯ ಅಂತ್ಯದಲ್ಲಿ ೪೩ ಪ್ರಾದೇಶಿಕ ಕುಟುಂಬ ಯೋಜನಾ ಸಂಸ್ಥೆಗಳು. ೧೦,೦೦೦ ವೈದ್ಯರು. ೧೫೦೦೦ ಅರೆ ವೈದ್ಯಕೀಯ ಕಾರ್ಯಕರ್ತರು ಕುಟುಂಬ ಯೋಜನೆಯಲ್ಲಿ ತರಬೇತು ಪಡೆದರು.

೬ ದಶಲಕ್ಷ ಅರ್ಹ ದಂಪತಿಗಳು ಒಂದಲ್ಲಾ ಒಂದು ಗರ್ಭ ನಿರೋಧಕ ವಿಧಾನವನ್ನು ಅನುಸರಿಸಿದರು. ಶೇಕಡ ೭.೯ ಅರ್ಹ ದಂಪತಿಗಳು ಕುಟುಂಬ ಯೋಜನಾ ವಿಧಾನಗಳನ್ನು ಅನುಸರಿಸಿದರು.

೧೯೬೯-೭೪—೪ನೇ ಯೋಜನೆ

೫೯ ಪ್ರಸವೋತ್ತರ ಸೇವಾ ಕೇಂದ್ರಗಳು ಆರಂಭವಾದವು. ಪ್ರಕೃತ ೧೦೪ ವೈದ್ಯಕೀಯ ಮಹಾ ವಿದ್ಯಾಲಯಗಳು ಹಾಗೂ ೩ ಸ್ನಾತಕೋತ್ತರ ಕೇಂದ್ರಗಳಲ್ಲಿ ಪ್ರಸವೋತ್ತರ ಸೇವಾ ಕಾರ್ಯಗಳು ಅನುಷ್ಠಾನಕ್ಕೆ ಬಂದವು.

ಜನನ, ಮರಣ ನೋಂದಣಿ ಕಾಯ್ದೆ ಜಾರಿಗೆ ಬಂದಿತು. ೧೯೭೦ರ ಡಿಸೆಂಬರಿನಲ್ಲಿ 'ಫ್ಯಾಮಿಲಿ ಪ್ಲಾನಿಂಗ್ ಫೌಂಡೇಶನ್' ಎಂಬ ಸ್ವಯಂಸೇವಾ ಸಂಸ್ಥೆ ಜಯಪ್ರಕಾಶ ನಾರಾಯಣ್ ಮತ್ತು ಜೆ.ಆರ್.ಡಿ. ಟಾಟಾ ಅವರ ಮುಂದಾಳುತ್ವದಲ್ಲಿ ಸ್ಥಾಪನೆ ಆಯಿತು. ೧೯೭೨ರಲ್ಲಿ ವೈದ್ಯಕೀಯ ಗರ್ಭಪಾತ ಕಾನೂನು ಜಾರಿಯಾಯಿತು.

೧೯೭೩ರ ವರೆಗೆ ೫ ದಶಲಕ್ಷ ಚಿಕಿತ್ಸೆಗಳು, ೧೯೭೩-೭೪ರ ಅವಧಿಯಲ್ಲಿ ದಶಲಕ್ಷ ಶಸ್ತ್ರ ಚಿಕಿತ್ಸೆಗಳು ನಡೆದವು.

ನಾಲ್ಕನೆಯ ಯೋಜನೆಯಲ್ಲಿ ೧೦ ಲಕ್ಷ ಸಂತಾನ ನಿರೋಧ ಚಿಕಿತ್ಸೆಗಳು ನಡೆದವು. ೧೯ ದಶಲಕ್ಷ ಅರ್ಹ ದಂಪತಿಗಳು ಕುಟುಂಬ ಯೋಜನೆ ಅನುಸರಿಸಿದರು.

ಶೇಕಡ ೧೪.೦ ಮಂದಿ ಅರ್ಹ ದಂಪತಿಗಳು ಕುಟುಂಬ ಯೋಜನೆಗೆ ಒಳಗಾದರು.

೧೯೭೪-೭೯—೫ನೇ ಯೋಜನೆ

ವಿಶ್ವಸಂಸ್ಥೆ ೧೯೭೪ ನೆಯ ಸಾಲನ್ನು ವಿಶ್ವ ಜನಸಂಖ್ಯಾ ವರ್ಷವೆಂದು ಆಚರಿಸಲು ಕರೆಕೊಟ್ಟಿತು.

೧೯೭೬ ರಲ್ಲಿ ಪಂಜಾಬು, ಹರಿಯಾನ ಮತ್ತು ಮಹಾರಾಷ್ಟ್ರ ರಾಜ್ಯಗಳು ಕಡ್ಡಾಯ ಶಸ್ತ್ರ ಚಿಕಿತ್ಸೆ ನಡೆಸಲು ಮುಂದಾದವು.

ಕುಟುಂಬ ಯೋಜನೆ ತನ್ನ ಹೆಸರನ್ನು 'ಕುಟುಂಬ ಕಲ್ಯಾಣ ಕಾರ್ಯಕ್ರಮವು' ಎಂದು ಬದಲಾಯಿಸಿಕೊಂಡಿತು.

೧೯೭೮ರಲ್ಲಿ ಬಾಲ್ಯವಿವಾಹ ಪ್ರತಿಬಂಧ ಕಾಜ್ಞೆ ತಿದ್ದುಪಡಿ ಆಯಿತು. ಶೇಕಡಾ ೨೨.೫ರಷ್ಟು ಅರ್ಹ ದಂಪತಿಗಳು ಚಿಕಿತ್ಸೆಗೆ ಒಳಗಾದರು.

೧೯೭೯-೮೫—೬ನೇ ಯೋಜನೆ

೧೯೮೩ರಲ್ಲಿ ರಾಷ್ಟ್ರೀಯ ಆರೋಗ್ಯ ನೀತಿಯ ಪ್ರಕಾರ ಹಳ್ಳಿ ಮಟ್ಟದಲ್ಲಿ ಆಸ್ಪತ್ರೆಗಳು ಸ್ಥಾಪನೆ ಆದವು. ೧೯೮೩ ಸೆಪ್ಟೆಂಬರ್ ೩೦ ರಂದು ಸಂಯುಕ್ತರಾಷ್ಟ್ರ ಸಂಘ ಜನಸಂಖ್ಯಾ ಪ್ರಶಸ್ತಿಯನ್ನು ಇಂದಿರಾ ಗಾಂಧಿಯವರಿಗೆ ನೀಡಿತು.

೧೯೮೫ರ ಹೊತ್ತಿಗೆ ಶೇ. ೩೬.೬ ಅರ್ಹ ದಂಪತಿಗಳನ್ನು ಶಸ್ತ್ರಚಿಕಿತ್ಸೆಗೆ ಗುರಿಪಡಿಸುವ ಉದ್ದೇಶ ಇತ್ತು. ಆದರೆ ಸಾಧನೆ ಶೇ. ೩೨ ಮಾತ್ರ.

೧೯೮೪-೯೦ರ ಅವಧಿಯಲ್ಲಿ ವಿಶ್ವ ಬ್ಯಾಂಕ್ ನೆರವಿನ ಭಾರತದ ಜನಸಂಖ್ಯಾ ಯೋಜನೆ ಜಾರಿಯಲ್ಲಿತ್ತು. ಈ ಯೋಜನೆಗೆ ಕರ್ನಾಟಕದ ವೆಚ್ಚ ೭೧.೩೧ ಕೋಟಿ ರೂಪಾಯಿಗಳು. ಅದರಲ್ಲಿ ಶೇ. ೪೮ ಭಾಗ ವಿಶ್ವಬ್ಯಾಂಕಿನ ಸಾಲು, ಶೇಕಡಾ ೩೯.೮ ಭಾರತ ಸರಕಾರದ ನೆರವು. ಉಳಿದ ಭಾಗವನ್ನು ಆಯಾ ರಾಜ್ಯ ಸರಕಾರಗಳು ಕೊಡುಗೆ ರೂಪದಲ್ಲಿ ನೀಡಿವೆ. ಕೇರಳದ ವೆಚ್ಚ ೪೯.೧೧ ಕೋಟಿ ರೂಪಾಯಿಗಳು. ಪಶ್ಚಿಮ ಬಂಗಾಳದ ವೆಚ್ಚ ೧೦೭.೪೭ ಕೋಟಿ ರೂಪಾಯಿಗಳು.

ಈ ಯೋಜನೆಯಲ್ಲಿ ಜನಸಂಖ್ಯಾ ಶಿಕ್ಷಣಕ್ಕೆ ಹೆಚ್ಚಿನ ಪ್ರಾಶಸ್ತ್ಯ ದೊರೆಯಿತು. ಆಯಾ ರಾಜ್ಯಗಳು ಸುಮಾರು ೬೦ ದಶ ಲಕ್ಷದಷ್ಟು ಹಣವನ್ನು ನಿಗದಿಮಾಡಿದವು.

ಕುಟುಂಬ ಯೋಜನಾ ಶಿಕ್ಷಣ ಜನಪರ ಶಿಕ್ಷಣವಾಗಿ ಪರಿವರ್ತನೆ ಆಯಿತು. ಕುಟುಂಬಯೋಜನಾ ಶಿಕ್ಷಣವನ್ನು ಜನಸಂಖ್ಯಾ ಶಿಕ್ಷಣವನ್ನಾಗಿ ಶಾಲೆ, ಕಾಲೇಜು ಪಠ್ಯಪುಸ್ತಕಗಳಲ್ಲಿ ಸಂಯೋಜಿಸುವ ಕಾರ್ಯ ಜಾರಿಗೆ ಬಂದಿತು. ಈ ಅವಧಿಯಲ್ಲಿ ೭೬೫ ಕೋಟಿ ರೂಪಾಯಿಗಳನ್ನು ಜನಸಂಖ್ಯಾ ಕಾರ್ಯಕ್ರಮಕ್ಕೆ ವಿನಿಯೋಗಿಸಲಾಯಿತು.

೧೯೮೫-೯೦ —೭ನೆಯ ಯೋಜನೆ

ಈ ಅವಧಿಯಲ್ಲಿ "ಗಂಡಿರಲಿ ಹೆಣ್ಣಿರಲಿ ಮಕ್ಕಳೆರಡೇ ಸಾಕು" "ನಾವಿಬ್ಬರು, ನಮಗಿಬ್ಬರು" ಹಾಗೂ "ಎರಡನೇ ಮಗು ಮೂರು ವರ್ಷದ ನಂತರ" ಎಂಬ ಘೋಷಣೆಗಳು ಅನುಷ್ಠಾನಕ್ಕೆ ಬಂದವು.

ರಾಷ್ಟ್ರೀಯ ಕುಟುಂಬ ಯೋಜನೆ ಪ್ರಾರಂಭವಾದಂದಿನಿಂದ ೧೯೮೯ರ ಮಾರ್ಚ್ ವರೆಗೆ ಸುಮಾರು ೧೦೬.೨ ದಶಲಕ್ಷಕ್ಕೂ ಹೆಚ್ಚು ಜನನವನ್ನು ತಡೆಯಲಾಗಿದೆ. ಒಂದು ಜನನವನ್ನು ತಡೆಯಲು ೩೮೦ ರೂ. ಗಳು ತಗಲುತ್ತದೆ. ಈ ಯೋಜನೆ

ಯಲ್ಲಿ ಮಹಿಳೆ ನಿರೋಧ ಚಿಕಿತ್ಸೆಗೆ ಹೆಚ್ಚು ಒತ್ತು ಕೊಡಲಾಯಿತು.

ಯೋಜನಾರಹಿತ ಅವಧಿ

ಕೇಂದ್ರದಲ್ಲಿ ಸರಕಾರಗಳ ತೀವ್ರ ಬದಲಾವಣೆ ಆಯಿತು. ಆದ್ದರಿಂದ ಕೂಡಲೇ ೮ನೇ ಪಂಚವಾರ್ಷಿಕ ಯೋಜನೆ ಜಾರಿಗೆ ಬರಲಿಲ್ಲ. ಆದರೆ ಕುಟುಂಬ ಕಲ್ಯಾಣ ಕಾರ್ಯಕ್ರಮವನ್ನು ಹಂತಹಂತವಾಗಿ ಕೈಕೊಳ್ಳಲು ತೀರ್ಮಾನವಾಯಿತು. ಈ ದಿಸೆಯಲ್ಲಿ ರಾಷ್ಟ್ರ ಮತ್ತು ರಾಜ್ಯಮಟ್ಟದ ವಿಚಾರ ಸಂಕಿರಣಗಳು ಸಂಘಟಿತಗೊಂಡವು.

೧೫-೯-೧೯೯೦ರಿಂದ "ಒಂದು ಮಗುವಿನ ಕುಟುಂಬ" ಚಳುವಳಿ ಪ್ರಾರಂಭವಾಯಿತು.

ರಾಷ್ಟ್ರದಲ್ಲಿ ಒಟ್ಟು ೬೦೮ ದಶಲಕ್ಷ ನಿರೋಧ್‌ಗಳ ಉತ್ಪಾದನೆ ಆಗುತ್ತಿದೆ. ೧೯೮೯-೯೦ ರಲ್ಲಿ ನಿರೋಧ್‌ಗಳ ನಿರ್ಮಾಣದಿಂದ ಗಳಿಸಿದ ಆದಾಯ ೧೫೧ ದಶಲಕ್ಷ ರೂಪಾಯಿಗಳು.

೧೯೯೧ರ ವೇಳೆಗೆ ೨೭ ರಾಜ್ಯ ಕುಟುಂಬ ಕಲ್ಯಾಣ ಬ್ಯೂರೋಗಳು ಕಾರ್ಯ ನಿರ್ವಹಿಸುತ್ತಿವೆ. ಜಿಲ್ಲಾ ಮಟ್ಟದಲ್ಲಿ ೪೫೦ ಜಿಲ್ಲಾ ಕುಟುಂಬ ಕಲ್ಯಾಣ ಬ್ಯೂರೋಗಳು ಕಾರ್ಯ ನಿರ್ವಹಿಸುತ್ತಿವೆ.

ರಾಷ್ಟ್ರೀಯ ಕುಟುಂಬ ಕಲ್ಯಾಣ ಕಾರ್ಯಕ್ರಮ ಜಾರಿಗೆ ಬಂದ ನಂತರ ಇತ್ತೀಚಿನವರೆಗಿನ ಕುಟುಂಬ ಕಲ್ಯಾಣಗಳ ಪ್ರಗತಿ ಹೀಗಿದೆ:

೧೩೫೨-೮೪ ಸುಮಾರು ೬.೦೯ ಕೋಟಿಗೂ ಹೆಚ್ಚು ಜನನಗಳ ತಡೆ. ಅದರಲ್ಲಿ

	ಶಸ್ತ್ರ ಚಿಕಿತ್ಸೆ ಮೂಲಕ	೫೦.೦೯ ಮಿಲಿಯನ್
	ವಂಕಿಧಾರಣೆ	೪.೦೯ "
	ಎಲ್ಲ ತಾತ್ಕಾಲಿಕ ವಿಧಾನಗಳು	೫.೯೩ "
೧೯೫೬-೮೪	ವ್ಯಾಸಕ್ಟಮಿ	೨,೩೦,೩೬೮೭೯
	ಟ್ಯೂಬೆಕ್ಟಮಿ	೨,೧೬,೮೮,೯೭೧
೧೯೬೫-೮೪	ವಂಕಿ ಧಾರಣೆ	೧.೩೬ ಕೋಟಿ
೧೯೬೮-೮೪	ನಿರೋಧಗಳ ವಿತರಣೆ	೩೭,೫೯೦,೩೧,೦೦೦
	ಡಯಾ ಫ್ರಾಮ್‌ಗಳು	೧,೨೮,೦೦೦
	ಜೆಲ್ಲಿ ಮುಲಾಮುಗಳು	೨೯,೦೭,೦೦೦
	ನೊರೆ ಮಾತ್ರೆಗಳು	೨,೦೪,೬೭,೦೦೦
	ತತ್ಸಮಾನ ಶಸ್ತ್ರ ಚಿಕಿತ್ಸೆಗಳು	೫,೩೨,೬೯,೦೦೦
೧೯೭೬-೮೪	ನುಂಗುವ ಗುಳಿಗೆಗಳ ವಿತರಣೆ	೧,೬೬,೫೦,೦೭೪
	ತತ್ಸಮಾನ ಶಸ್ತ್ರ ಚಿಕಿತ್ಸೆಗಳು	೭೨,೪೫,೪೬೨

ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಭಾರತ: ಒಂದು ಸಿಂಹಾವಲೋಕನ

ಬ್ರಿಗೇಡಿಯರ್ ಮಹಾದೇವ ಗೋಖಲೆ
(ಸೇವಾನಿವೃತ್ತ)
೨೦೧, ವೃಂದಾವನ, ೨ನೇ ಹಂತ
ಮೈಸೂರು-೫೭೦ ೦೨೦

ಬ್ರಿಗೇಡಿಯರ್ ಎಂ. ಎ. ಗೋಖಲೆ (೧೯೧೭) ಅಚ್ಚ ಕನ್ನಡಿಗರು, ದೇಶ ಸೇವಾ ಪರಾಯಣರು, ವೀರಯೋಧರು, ಸೈನ್ಯದಲ್ಲಿ ವೈದ್ಯರಾಗಿ ರಣರಂಗದ ದುಃಖ ದುಮ್ಮಾನ ಕಂಡು ಸಾಂತ್ವನ ನೀಡಿದವರು. "ಭಾರತ ಅಂದು, ಇಂದು ಹೇಗಿದೆ?" ಎಂಬ ಪ್ರಶ್ನೆಗೆ ಉತ್ತರ ನೀಡಿದ್ದಾರೆ ಸ್ವಾನುಭವದಿಂದ.

೧೯೨೭ ರಿಂದ ೩೪ರ ತನಕ ನಾನು ಕಾರ್ಕಳ (ದ.ಕ.) ಬೋರ್ಡ್ ಹೈಸ್ಕೂಲಿನಲ್ಲಿ ವಿದ್ಯಾರ್ಥಿ. ಆ ಕಾಲದಲ್ಲಿ ನಮ್ಮ ಅಧ್ಯಾಪಕರ ವ್ಯಕ್ತಿತ್ವ, ಶಿಸ್ತು, ಶಿಕ್ಷಣ ಪದ್ಧತಿ, ನಡತೆ, ಮಾರ್ಗದರ್ಶನ, ವಿದ್ಯಾರ್ಥಿಗಳ ಮೇಲೆ ಅವರಿಗಿದ್ದ ಪ್ರೀತಿ, ವಿಶ್ವಾಸ, ಇವು ಯಾರೂ ಮೆಚ್ಚುವಂತಿದ್ದುವು. ಶಿಕ್ಷಕರು ಅನುಭವ ಸಂಪನ್ನರಾಗಿದ್ದರು. 'ತನ್ನ' ವಿಷಯ ಮಾತ್ರವಲ್ಲ, ಇತರ ವಿಷಯಗಳನ್ನೂ ಕಲಿಸುವ ಯೋಗ್ಯತೆಯುಳ್ಳವರಾಗಿದ್ದರು. ಕೆಲವರು ತಮ್ಮ ವಿಷಯ ವಿಜ್ಞಾನ ಆದರೂ ಇಂಗ್ಲಿಷ್ ಅಥವಾ ಗಣಿತವನ್ನೂ ಅಷ್ಟೇ ಯೋಗ್ಯ ರೀತಿಯಲ್ಲಿ ಬೋಧನೆ ಮಾಡುವ ಅರ್ಹತೆ ಪಡೆದವರಿದ್ದರು. ಕೆಲವು ವರುಷಗಳ ಹಿಂದೆ ಲೋಕಸಭೆಯ ಸ್ಪೀಕರ್ ಆಗಿದ್ದ ಸನ್ಮಾನ್ಯ ಸದಾನಂದ ಹೆಗ್ಡೆಯವರು ನಮ್ಮ ಶಾಲೆಯ ಪ್ರತಿಭಾವಂತ ವಿದ್ಯಾರ್ಥಿ.

೧೯೩೪ ರಿಂದ ೩೬ರ ತನಕ ಮಂಗಳೂರು ಗವರ್ನಮೆಂಟ್ ಕಾಲೇಜಿನಲ್ಲಿ (ಈಗಿನ ಯುನಿವರ್ಸಿಟಿ ಕಾಲೇಜು) ಪ್ರಿನ್ಸಿಪಾಲ್ ಗೋವಿಂದ ಕೃಷ್ಣ ಚೆಟ್ಟೂರ್ ಅವರ ನೇತೃತ್ವದಲ್ಲಿ ಪಡೆದ ಶಿಕ್ಷಣವೆಂದರೆ ಅದೊಂದು ಅವಿಸ್ಮರಣೀಯ ಅನುಭವ. ಆ ಕಾಲದಲ್ಲಿ ಮದ್ರಾಸು ಪ್ರೆಸಿಡೆನ್ಸಿ ಓರ್ವ ಆಂಗ್ಲ ಗವರ್ನರರ ಆಳ್ವಿಕೆಗೆ ಒಳಪಟ್ಟಿತ್ತು. ೧೯೩೫ರಲ್ಲಿ ನಮ್ಮ ಕಾಲೇಜಿನ 'ವಾರ್ಷಿಕ ದಿನ'ದ ಸಮಾರಂಭಕ್ಕೆ ಮದರಾಸಿನ ಗವರ್ನರರಾದ ಸನ್ಮಾನ್ಯ ಲಾರ್ಡ್ ಎರ್‌ಸ್ಕಿನ್ ಎಂಬವರೇ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. 'ಇಂಟರ್ ಮೀಡಿಯಟ್'ನ (ಈಗಿನ ಪಿ.ಯು.ಸಿ.) ಎರಡೇ ಎರಡು ದರ್ಜೆಗಳಿರುವ ಈ ಸಣ್ಣ ಕಾಲೇಜಿನ "ಕಾಲೇಜ್ ಡೇ"ಗೆ ಗವರ್ನರರೇ ಮುಖ್ಯ ಅತಿಥಿಯಾಗಿ ಬಂದದ್ದು ಒಂದು ಐತಿಹಾಸಿಕ ದಾಖಲೆ ಎನ್ನಬಹುದು!

ಹಿರಿಯ ವಿದ್ಯಾರ್ಥಿನಿ ಕಮಲಾದೇವಿ ಚಟ್ಟೋಪಾಧ್ಯಾಯ ಅವರು "ಮನೆಯ ಬಳಿಕ ಈ ಕಾಲೇಜು ನನ್ನ ಜೀವನದ ಮುಖ್ಯ ಪ್ರಯೋಗ ಶಾಲೆಯಾಗಿತ್ತು" ಎಂದಿದ್ದಾರೆ. ಇನ್ನಿತರ ಹಿರಿಯ ವಿದ್ಯಾರ್ಥಿಗಳ ಪೈಕಿ ಡಾ॥ ಶಿವರಾಮಕಾರಂತರು, ಸುಪ್ರಸಿದ್ಧ ಪತ್ರಿಕೋದ್ಯಮಿ ಶ್ರೀ ಎಂ. ವಿ. ಕಾಮತ್, ಜಸ್ಟಿಸ್ ಜಗನ್ನಾಥ ಶೆಟ್ಟಿ, ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಂ. ವೀರಪ್ಪಮೊಯ್ಲಿ ಮೊದಲಾದವರು ಉಲ್ಲೇಖನೀಯ.

ಈ ಕಾಲೇಜಿನ ಒಂದು ಮುಖ್ಯ ವೈಶಿಷ್ಟ್ಯವೆಂದರೆ ಇಲ್ಲಿಯ ಸುಪುಷ್ಟವಾಚನಾಲಯ. ಇಂತಹ ಗ್ರಂಥ ಭಂಡಾರಗಳು ದೊಡ್ಡ ದೊಡ್ಡ ಕಾಲೇಜುಗಳಲ್ಲಿಯೂ ಅತಿವಿರಳ.

ಮದರಾಸಿನ (ಈಗಿನ ಚೆನ್ನೈ) "ಮದರಾಸು ಕ್ರಿಶ್ಚನ್ ಕಾಲೇಜ"ನಲ್ಲಿ ೧೯೩೬ ರಿಂದ ೩೮ರ ತನಕ ಬಿ.ಎ. ಡಿಗ್ರಿಗಾಗಿ ಇಂಗ್ಲಿಷು, ಕನ್ನಡ, ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ—ಈ ವಿಷಯಗಳ ಅಧ್ಯಯನಮಾಡುವಾಗ ನಾನು ಅನುಭವಿಸಿದ ಸಮಾಧಾನ, ತಣಿವು, ಬೇರೆ ಎಲ್ಲಿಯೂ ಸಿಗಲಿಲ್ಲ. ಅಲ್ಲಿ ವಿದ್ಯಾರ್ಥಿಗಳಿಗೆ ಸ್ಫೂರ್ತಿ ನೀಡುವ ಉತ್ತಮ ಮಟ್ಟದ ಪ್ರತಿಭಾವಂತ ಅಧ್ಯಾಪಕರಿದ್ದರು. ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು "ನಕಲು ಹೊಡೆಯುತ್ತಾರೆ" ಎಂಬುದನ್ನು ಆ ಕಾಲದಲ್ಲಿ ನಾವು ಕೇಳಿಯೂ ಇರಲಿಲ್ಲ. ಭೌತಶಾಸ್ತ್ರದ ಪ್ರಾಕ್ಟಿಕಲ್ ಪರೀಕ್ಷೆ ಆರುಗಂಟೆಗಳ ಕಾಲ ನಡೆಯುತ್ತಿತ್ತು. ವಿದ್ಯಾರ್ಥಿಗಳನ್ನು ಒಳಗೆ ಬಿಟ್ಟು ಬಾಗಿಲು ಮುಚ್ಚಿ ಬೀಗ ಹಾಕುತ್ತಿದ್ದರು. ಆರುಗಂಟೆಯ ಕಾಲ ಯಾರೂ ಹೊರಗೆ ಹೋಗುವಂತಿಲ್ಲ. ಇನ್ನೊಂದು ವೈಶಿಷ್ಟ್ಯವೆಂದರೆ ಪ್ರತಿದಿನದ ಪಾಠ "ನೀತಿ ತತ್ತ್ವಬೋಧೆ"ಯಿಂದ ಪ್ರಾರಂಭ. ಆ ಬಳಿಕ ಇತರ ವಿಷಯಗಳು. ನೀತಿ ತತ್ತ್ವಬೋಧೆ ಪರೀಕ್ಷೆಯ ವಿಷಯ ಅಲ್ಲದಿದ್ದರೂ ಕೂಡ ವಿದ್ಯಾರ್ಥಿಗಳು ತೋರಿಸುತ್ತಿದ್ದ ಆಸಕ್ತಿ ಪ್ರಶಂಸನೀಯ. ಕಾರಣ ಈ ಪಾಠ ಅಷ್ಟು ಸ್ವಾರಸ್ಯಪೂರ್ಣವೂ, ಪರಿಣಾಮಕಾರಿಯೂ ಆಗಿತ್ತು. ಬೇಸರ ಬರುವ ಪಾಠ ಅಲ್ಲವೇ ಅಲ್ಲ.

ಮುಂದೆ ಮದರಾಸಿನಲ್ಲಿಯೇ "ಎಂ.ಬಿ.ಬಿ.ಎಸ್." ಮುಗಿಸಿ ಸೈನ್ಯದ ವೈದ್ಯಕೀಯ ವಿಭಾಗದ ಆಫೀಸರನಾದೆ. ಆಗ ನನ್ನ ದರ್ಜೆ ಲೆಫ್ಟಿನೆಂಟ್ (ದ್ವಿನಕ್ಷತ್ರಧಾರಿ)—ಹೆಗಲ ಮೇಲೆ ಎರಡು ನಕ್ಷತ್ರಗಳ ಚಿಹ್ನೆ. ಅಂದಿನಿಂದ ಸತತ ಮೂವತ್ತು ವರುಷ ಸೈನ್ಯದ ಸೇವೆಮಾಡಿದೆ. ಆಗ ಎರಡನೇ ಮಹಾಯುದ್ಧ ನಡೆದಿತ್ತು. ೧೯೪೪ರ ಆಗಸ್ಟ್ ತಿಂಗಳಿನಿಂದ ಪ್ರಥಮ ಮೂರು ತಿಂಗಳು ಪುಣೆಯಲ್ಲಿ ಬ್ರಿಟಿಷ್ ಅಧಿಕಾರಿಗಳ ನೇತೃತ್ವದಲ್ಲಿ ಕಠಿಣ ತರಬೇತಿ. ಯುದ್ಧದಲ್ಲಿ ಗಾಯಗೊಂಡ ಸೈನಿಕರ ಶುಶ್ರೂಷೆಮಾಡುವ ಕ್ರಮಬದ್ಧ ರೀತಿಯ ಶಿಕ್ಷಣ. ಅಲ್ಲಿಂದ ನನ್ನ ವರ್ಗಾವಣೆ ಅಫ್‌ಘಾನಿಸ್ಥಾನದ ಸರಹದ್ದಿನಲ್ಲಿ 'ಲಂಡಿಕೊತ್ತಲ್' ಎಂಬಲ್ಲಿಗೆ ಆಯಿತು. ಪುಣೆಯಿಂದ ಅಲ್ಲಿಗೆ ತಲಪುವುದೆಂದರೆ—ಮುಂಬೈ ದಿಲ್ಲಿ–ಅಲ್ಲಿಂದ ಲಾಹೋರ್ (ಈಗ ಪಾಕಿಸ್ತಾನ) ಮುಂದೆ ರಾವಲ್‌ಪಿಂಡಿ–ಅನಂತರ ಪೇಶಾವರ–ಖೈಬರ್ ಫಾಸ್–ಲಂಡಿಕೊತ್ತಲ್. ಅಲ್ಲಿಯ ಮಿಲಿಟರಿ ಆಸ್ಪತ್ರೆ ಒಂದು ಕೋಟೆಯ ಒಳಗಡೆ,

ಕೋಟೆಯ ಮಹಾದ್ವಾರವನ್ನು ದ್ವಾರ ಪಾಲಕರು ತೆರೆದು ಜನರನ್ನು ಒಳಗೆ ಬಿಡುವರು. 'ಪ್ರವೇಶ ಪಾಸ್' ತೋರಿಸಿ ಒಳಗೆ ಹೋಗಬೇಕು. ಈ ಆಸ್ಪತ್ರೆಯಲ್ಲಿ ಆಂಗ್ಲ ಸೈನಿಕರಿಗೂ ಭಾರತೀಯ ಸೈನಿಕರಿಗೂ ಪ್ರಪ್ರತ್ಯೇಕ ವ್ಯವಸ್ಥೆ ಇತ್ತು. ವಾರ್ಡುಗಳು ಬೇರೆಬೇರೆ. ಊಟ, ತಿಂಡಿಯ ವ್ಯವಸ್ಥೆ, ವಸತಿಸೌಕರ್ಯ ಬೇರೆ ಬೇರೆ. ಆದರೆ ಅದೇ ಡಾಕ್ಟರುಗಳು ನರ್ಸುಗಳು ಎಲ್ಲಾ ರೋಗಿಗಳ ಶುಶ್ರೂಷೆ ಮಾಡಬೇಕು. ಡಾಕ್ಟರರಲ್ಲಿ ಕೆಲವರು ಬ್ರಿಟಿಷರೂ ಇದ್ದರು.

ಲಂಡಿಕೊತ್ತಲ್ ಕೆಂಟೋನ್‌ಮೆಂಟ್‌ನಲ್ಲಿ ಒಂದು ಆಂಗ್ಲ ಸೈನಿಕರದ್ದೇ ಬ್ರಿಗೇಡ್ ಇತ್ತು. ಬ್ರಿಗೇಡ್‌ನಲ್ಲಿ ಸಾಧಾರಣ ೨೦೦೦ ಸೈನಿಕರು. ಒಮ್ಮೊಮ್ಮೆ ನನ್ನನ್ನು ವೈದ್ಯಕೀಯ ಸಹಾಯಕ್ಕಾಗಿ ಅಲ್ಲಿಗೆ ಕಳುಹಿಸುತಿದ್ದರು. ಅಲ್ಲಿ ಆಂಗ್ಲ ಸೈನಿಕರ ಶುಶ್ರೂಷೆ ಮಾಡುತ್ತಿರುವಾಗ ನನಗೆ ಯಾವುದೇ ಅಡ್ಡಿ ಅನನುಕೂಲತೆಗಳು ಆಗಲಿಲ್ಲ. ಅವರು ನನ್ನೊಡನೆ ಸಹಾನುಭೂತಿಯಿಂದ ವರ್ತಿಸುತ್ತಿದ್ದರು.

ಮುಂದೆ ನನ್ನ ವರ್ಗ ಮಧ್ಯಪ್ರಾಚ್ಯದ ಇರಾಕ್ ಎಂಬಲ್ಲಿಗೆ ಆಯಿತು. ಅಲ್ಲಿನನ್ನ ಕಾಯಂ ಕೆಲಸ ಮಿಲಿಟರಿ ಆಸ್ಪತ್ರೆಯಲ್ಲಿ. ಒಮ್ಮೆ ನನ್ನನ್ನು ಅಲ್ಲಿಂದ ತಾತ್ಕಾಲಿಕ ಸೇವೆಯ ಮೇಲೆ ಒಂದು ಬ್ರಿಟಿಷ್ ಬೆಟಾಲಿಯನ್‌ಗೆ (೭೦೦ ಸೈನಿಕರು) ಕಳುಹಿಸಿದರು. ಅಲ್ಲಿ ನಾನೊಬ್ಬನೇ ಭಾರತೀಯ. ಆಫೀಸರರು, ಸೈನಿಕರು, ಎಲ್ಲರೂ ಆಂಗ್ಲರೇ ನಾನು ಶಾಕಾಹಾರಿ, ಮದ್ಯಪಾನ ಇಲ್ಲ ಧೂಮಪಾನ ಇಲ್ಲ ಆದರೂ ನನಗೆ ಯಾವ ತೊಂದರೆಯೂ ಆಗಲಿಲ್ಲ. ಬೆಟಾಲಿಯನ್‌ನ್ನೊಂದಿಗೆ ನಾನು ಅವರ ಎಲ್ಲಾ ತರಬೇತಿ ಶಿಬಿರಗಳಲ್ಲಿ ಇರುತ್ತಿದ್ದೆ. ಮರುಭೂಮಿಯಲ್ಲಿ ಯುದ್ಧ ಮಾಡುವ ವಿಶಿಷ್ಟ ಪದ್ಧತಿಗಳ ಅಭ್ಯಾಸ ಮಾಡುತ್ತಿದ್ದರು. ಇದರಲ್ಲಿಯೂ ನಾನೂ ಅಭಿರುಚಿ ತೋರಿಸುತ್ತಿದ್ದುದು ಅವರಿಗೆ ಬಹಳ ಸಂತೋಷವನ್ನು ಉಂಟುಮಾಡುತ್ತಿತ್ತು.

ಇರಾಕ್‌ನಲ್ಲಿಯ ನಮ್ಮ ಆಸ್ಪತ್ರೆಯಲ್ಲಿ ಕೆಲಸಮಾಡಲು ಪ್ರತಿದಿನ ೨೫ ಜರ್ಮನ್ ಯುದ್ಧ ಬಂದಿಗಳು ಬರುತ್ತಿದ್ದರು. ಅವರ ಕೆಲಸಗಳೆಂದರೆ ಗಾರೆ ಕೆಲಸ, ಬಡಗಿ ಕೆಲಸ, ರಸ್ತೆ ರಿಫೇರಿ, ಚರಂಡಿ ತೋಡುವುದು, ಮಾಡುರಿಫೇರಿ ಇತ್ಯಾದಿ. ಇವರ ಮೇಲ್ವಿಚಾರಣೆ ನನ್ನ ಹೊಣೆಗಾರಿಕೆ ಅವರ ಆಫೀಸರನಿಗೆ ಆಯಾಯಾ ದಿನದ ಕೆಲಸ ನಾನು ಅಂದೇ ಸೂಚಿಸುತ್ತಿದ್ದೆ. ಸಾಯಂಕಾಲ ಅವನು ಪೂರ್ಣಮಾಡಿದ ಕೆಲಸ ನನಗೆ ತೋರಿಸುತ್ತಿದ್ದನು. ಅವನಿಗೆ ಸ್ವಲ್ಪ ಮಾತ್ರ ಇಂಗ್ಲಿಷು ಬರುತ್ತಿತು. ಇವರಿಂದ ನಾನು ಕಲಿತ ಪಾಠವೆಂದರೆ—

೧. ಶಿಸ್ತು ಯಾವಮಟ್ಟದ್ದು ಇರಬೇಕು
೨. ಕಾಲನಿಷ್ಠೆ ಹೇಗಿರಬೇಕು ಮತ್ತು
೩. ಕೆಲಸದ ಶ್ರೇಷ್ಠತೆಯ ಮಹತ್ತ್ವ ("ಯೋಗ: ಕರ್ಮ ಸುಕೌಶಲಂ" ಭಗವದ್ಗೀತೆ)

ಅವರ ಕೆಲಸದಲ್ಲಿ ಕುಂದುಕೊರತೆ ಕಂಡು ಬರುವುದು ತೀರಾ ಕಡಿಮೆ.

ಒಂದು ವರುಷದ ಬಳಿಕ ಇರಾಕ್‌ನಿಂದ ಸ್ವದೇಶಕ್ಕೆ ಹಿಂತಿರುಗಿದೆ. ಆಗ ೧೯೪೭ರ

ಪೂರ್ವಾರ್ಧ. ಬ್ರಿಟಿಷರ ಆಳ್ವಿಕೆ ನಡೆದೇ ಇತ್ತು. ಸ್ವಾತಂತ್ರ್ಯ ಯುದ್ಧದ ಕಾವು ಪ್ರಖರವಾಗಿತ್ತು. ಮುಂದೆ ಆಗಸ್ಟ್ ೧೫ರಂದು ಸ್ವಾತಂತ್ರ್ಯೋದಯವಾಯಿತು.

ಸ್ವಾತಂತ್ರ್ಯೋತ್ತರ ಪ್ರಸಕ್ತ ವಿದ್ಯಮಾನದಲ್ಲಿ ಕಂಡುಬರುವುದೇನು? ಅಪಘಾತಗಳು, ದರೋಡೆ, ಕಳವು, ಕೊಲೆ, ಸುಲಿಗೆ, ಅತ್ಯಾಚಾರ, ಅನಾಚಾರ, ಭ್ರಷ್ಟಾಚಾರ, ದುರಾಚಾರ, ಆಹಾರ ಪದಾರ್ಥಗಳಲ್ಲಿ ಕಲಬೆರಿಕೆ. ನಿನ್ನೆ ಒಂದು ಬಸ್ಸು ನದಿಯಲ್ಲಿ ಬಿದ್ದು ೭೦ ಜನರ ಸಾವು, ಇಂದು ಬೆಳಿಗ್ಗೆ ಬೆಂಕಿಯ ಅನಾಹುತದಲ್ಲಿ ೬೦ ಜನ ಸತ್ತರು. ಕಲ್ಲು ತೂರಾಟ, ಗೋಲಿಬಾರು, ಪರೀಕ್ಷೆಯ ಪ್ರಶ್ನೆಪತ್ರಗಳು ಮಾರುಕಟ್ಟೆಯಲ್ಲಿ ಸಿಗುತ್ತವೆ, ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಕಾಪಿ ಹೊಡೆಯುವುದು, ಶಾಸಕರೇ ನಿಯಮ ಭಂಗಮಾಡುವುದು, ಸಚಿವರು ಸಭೆಗೆ ಗೈರು ಹಾಜರು, ಒಂದುವೇಳೆ ಬಂದರೆ ೧–೨ ಗಂಟೆ ವಿಳಂಬ, ಲೋಕಸಭೆ, ವಿಧಾನಸಭೆಗಳಲ್ಲಿ ಗಲಭೆ–ಗೊಂದಲ, ಶಿಸ್ತುಭಂಗ, ಮಹಾನ್ ವ್ಯಕ್ತಿಗಳ ಪ್ರತಿಮೆಗಳ ಅಪಮಾನ, ಕಾಡುಗಳ್ಳರ ಷರತ್ತುಗಳಿಗೆ ಒಪ್ಪಿಗೆ (ವೀರಪ್ಪನ್ ಪ್ರಕರಣ) ಕೆಲವು ಕಡೆ ರಕ್ಷಕರೇ ಭಕ್ಷಕರು, ಆರಕ್ಷಕರೇ ಆರಕ್ಷಕರಾಗುವುದು—ಇದೇ ದೃಶ್ಯ.

ಯಾರು ಶಕ್ತಿವಂತರು? ಸರಕಾರವೇ ಅಥವಾ ಕುಖ್ಯಾತ ಕಾಡುಗಳ್ಳರಂತಹ ನರಹಂತಕರೇ? ವಿಧಿವಿಧಾನಗಳಿಗೆ ಮಾನ್ಯತೆಯಿಲ್ಲ. ದರೋಡೆಕೋರರು ಕೊಲೆಗಾರರು ಲೋಕಸಭಾ ಸದಸ್ಯರು.

ಇಂದು ದಿನ ಬೆಳಗಾದರೆ ನಮ್ಮ ಸಮಾಜದಲ್ಲಿ ನಡೆಯುತ್ತಿರುವ ಅಕೃತ್ಯಗಳು ನಿಮ್ಮ–ನಮ್ಮ ರೋಷ ಉಕ್ಕುವಂತೆ ಮಾಡುವುದಿಲ್ಲವೆ? ನ್ಯಾಯಾಲಯಗಳಲ್ಲಿ ಫಿರ್ಯಾದಿಗಳ ಅರ್ಜಿಗಳು–ಲಕ್ಷೋಪಲಕ್ಷ ಅರ್ಜಿಗಳು–ಧೂಳು ತಿನ್ನುತ್ತಿವೆ. ಇವರಿಗೆ ನ್ಯಾಯ ದೊರೆಯುವುದು ಎಂದು?

ಜನನಾಯಕರ ವೈಯಕ್ತಿಕ ಆಸೆಗಳ ಪೂರೈಕೆಗಾಗಿಯೇ ಇರುವುದು ನಮ್ಮ ಸರಕಾರ. ಬೇಲಿಯೇ ಹೊಲವನ್ನು ಮೆಯ್ದೊಡೆ....?

ಸೇವಾನಿವೃತ್ತ ಸೈನಿಕರ ಸಮಸ್ಯೆಗಳನ್ನು ಕೇಳುವವರಿದ್ದಾರೆಯೆ? ಓರ್ವ ಸೈನಿಕನು ತನ್ನ ಕರ್ತವ್ಯ ಪರಿಪಾಲನೆಯಲ್ಲಿ ಅಸುನೀಗಿದರೆ ಅವನ ಕುಟುಂಬದ ಪುನರ್ವಸನ, ಮಕ್ಕಳ ವಿದ್ಯಾಭ್ಯಾಸ, ವೈದ್ಯಕೀಯ ಸಹಾಯ ಮುಂತಾದ್ದಕ್ಕೆ ಗಮನ ಕೊಡುವವರ್‍ಯಾರು?

ಬ್ಯಾಂಕುಗಳಲ್ಲಿ ಗ್ರಾಹಕರ ಹಣ ಲಪಟಾಯಿಸಿ ಪ್ರಾಣ ತಿನ್ನುತ್ತಿರುವ ಪ್ರಾಣೇಶನಂತಹರೂ, ಹಗರಣ ಪ್ರಕರಣಗಳಲ್ಲಿ (ಉ.ದಾ : ಸಿ.ಆರ್.ಬಿ. ಹಗರಣ) ಕೋಟಿ, ಕೋಟಿ ಹಣವನ್ನು ತಿಂದವರೇ ಪೇಪರುಗಳ ಮುಖಪುಟದ “ಹೀರೋ”ಗಳು. ‘ವಿದ್ಯಾವಿಕಾಸ’ ಮಾಡಬೇಕಾದವರು ಪರಿಣಾಮದಲ್ಲಿ ‘ವಿದ್ಯಾವಿನಾಶ’ ಮಾಡುವ ಶಿಕ್ಷಣಾಧಿಕಾರಿಗಳು.

ಗ್ರಾಮಾಭಿವೃದ್ಧಿಯ ಮಾತು ಮಾತ್ರ. ಒಂದು ಹಳ್ಳಿಯಲ್ಲಿ ಕುಡಿಯುವ ನೀರಿನ ಒಂದು ಗಡಿಗೆಗೆ ರೂ. ೧! ಇನ್ನೊಂದೆಡೆ ಒಂದು ಬಕೆಟ್ ನೀರಿಗೆ ರೂ. ೫! ಇದು ಪ್ರಜಾತಂತ್ರ ಭಾರತ.

“ನಗರಾಭಿವೃದ್ಧಿ” ಎಂದರೆ ಎತ್ತರವಾದ ಬಹುಮಹಡಿ ನಿವೇಶನಗಳ ಅಭಿವೃದ್ಧಿ!

ಇವುಗಳಲ್ಲಿ ಹಲಕೆಲವು "ಬಹುತಾರ", "ಪಂಚತಾರ", "ತ್ರಿತಾರ", ಹೊಟೇಲುಗಳಿಗೆ ಮೀಸಲು. ಇವುಗಳಿಂದ ಜನಸಾಮಾನ್ಯರಿಗೆ ಉಪಯೋಗವೇನು?

ಪ್ರಕೃತ ವಿದ್ಯಮಾನ ಹೀಗಿರುವಾಗ ಸ್ವಾತಂತ್ರ್ಯದ ಸುವರ್ಣೋತ್ಸವದ ಸಂಭ್ರಮವೇಕೆ? ಈ ವಿಜೃಂಭಣೆಗಳಿಗೆ, ಪ್ರದರ್ಶನ ಆಡಂಬರಗಳಿಗೆ ತಗಲಬಹುದಾದ ಕೋಟ್ಯಂತರ ರೂಪಾಯಿಗಳನ್ನು ನೀರಿನ ಸರಬರಾಜಿಗೂ, ರಸ್ತೆಗಳ ರಿಪೇರಿಗೂ ಶಿಕ್ಷಣ ಕ್ಷೇತ್ರದಲ್ಲಿ, ವೈದ್ಯಕೀಯ ಕ್ಷೇತ್ರದಲ್ಲಿ, ಇತ್ಯಾದಿ ಅವಶ್ಯಕವಾದ ಸುಧಾರಣೆಗಳಿಗೆ ಉಪಯೋಗಿಸಿದರೆ "ಭಾರತದ ಸ್ವಾತಂತ್ರ್ಯ ಸುವರ್ಣೋತ್ಸವವು" ಅರ್ಥಪೂರ್ಣವಾಗಬಲ್ಲುದು. ಹೀಗಾದರೆ ಭಾರತ ಮಾತೆಯು ಧನ್ಯಳು.

ವಿಚಾರವಂತರು, ವಿವೇಕಶಾಲಿಗಳು, ಪರಿಣತರು ಒಂದಿಷ್ಟು ಯೋಚಿಸುವಿರಾ?



ಅಲ್ಪ ವಿದ್ಯೆ ಅಪಾಯಕಾರಿ
ಆದರೆ ಅಪಾರ ಅಜ್ಞಾನವೂ ಅಷ್ಟೇ ಕೆಡುಕು

ಕಾರ್ಯಾಚರಣೆಯಲ್ಲಿರುವ ಅಜ್ಞಾನಕ್ಕಿಂತ
ಭಯಂಕರವಾದುದು ಬೇರೊಂದಿಲ್ಲ

—ಗಯಟೆ

ನಿರಕ್ಷರತೆ, ಹಿಂದುಳಿದಿರುವಿಕೆ
ಶೋಷಣೆಯ ಗುರುತು

—ಗಾಂಧೀಜಿ

ಎದುರು ಮನೆಯ ಮೀನಾ

ಅರುಣಚಂದ್ರ ಮುಧೋಳ್
'ರಮಾಶ್ರೀ' ೧೧೬೭–ಬಿ೧, ಎಚ್.ಐ.ಜಿ.
೧ನೇ ತಿರುವು, ಶ್ರೀರಾಂಪುರ ೨ನೇ ಹಂತ
ಮೈಸೂರು

ಇವತ್ತಿಗೆ ನನಗೆ ಸಂಪೂರ್ಣ ಅರವತ್ತು ವರ್ಷ ತುಂಬಿತು. ನಾನು ಹುಟ್ಟಿದ ವರ್ಷವಾಗಲಿ ಅಥವಾ ದಿನಾಂಕದ ದಾಖಲೆಗಳಾಗಲೀ ನಮ್ಮ ಮನೆಯಲ್ಲಿ ಇಲ್ಲ. ನಾನು ಸರ್ಕಾರಿ ಸೇವೆಯನ್ನು ಸೇರಿ ನಿವೃತ್ತನಾದವನೂ ಅಲ್ಲ. ನನ್ನ ಗೆಳೆಯರಂತೂ ಒಬ್ಬೊಬ್ಬರು ಒಂದೊಂದು ವರ್ಷದಲ್ಲಿ ನಿವೃತ್ತರಾದವರು. ಕೆಲವರು ಇನ್ನೂ ಸೇವೆಯಲ್ಲಿ ಇದ್ದಾರೆ. ನಾವೆಲ್ಲಾ ಸಮವಯಸ್ಕರಾದರೂ, ಸರ್ಕಾರಿ ಸೇವೆಯಲ್ಲಿ ಅವರು ಎಂದಿಗೂ ನನಗಿಂತ ಕಿರಿಯರೇ. ಅದನ್ನು ಅವರೆಲ್ಲಾ ಹೇಗೆ ಸಾಧಿಸಿದರು ಎಂಬುದು ನನಗಂತೂ ಇಲ್ಲಿಯವರೆಗೂ ಅರ್ಥವಾಗದ ವಿಷಯ. ನಾವೆಲ್ಲಾ ಚಿಕ್ಕ ಮಕ್ಕಳಾಗಿದ್ದಾಗ ನಮ್ಮ ಅಜ್ಜ ಹೇಳುತ್ತಿದ್ದ ಕಥೆಯೊಂದು ಜ್ಞಾಪಕಕ್ಕೆ ಬರುತ್ತದೆ. ನಮ್ಮೂರಿನ ಆಚೆ ಒಂದು ಗುಹೆಯಲ್ಲಿ ಒಬ್ಬ ಜಟಾಧಾರಿ ಸಾಧು ವಾಸಿಸುತ್ತಿದ್ದಾನೆಂದೂ, ಅವನು ತನ್ನ ಕೈಯಲ್ಲಿದ್ದ ಮಾಯಾ ದಂಡದಿಂದ ಏನನ್ನು ಬೇಕಾದರೂ ಸಾಧಿಸುತ್ತಾನೆಂದೂ ಹೇಳುತ್ತಿದ್ದರು. ನನಗೆ ಈಗಲೂ ನನ್ನ ಮಿತ್ರರ ಬಗ್ಗೆ ಒಂದು ಅನುಮಾನ ಇದ್ದೇ ಇದೆ. ಅವರೇನಾದರೂ ಆ ಸಾಧುವಿನ ದಂಡದ ಸಹಾಯದಿಂದ ತಮ್ಮ ವಯಸ್ಸನ್ನು ಕೆಲ ವರ್ಷಗಳ ಕಾಲ ಸ್ಥಗಿತಗೊಳಿಸಿದ್ದರೆ ಎಂದು. ಏನೇ ಇರಲಿ, ಅವರ ಪಾಡು ಅವರಿಗೆ. ನನಗಂತೂ ಅರವತ್ತು ತುಂಬಿದ್ದು ನಿಜ. ಗೊತ್ತಾದುದು ಒಂದು ಸರಳ ಘಟನೆಯಿಂದ. ಪಕ್ಕದ ಮನೆಯ ಮಗು ಇಷ್ಟು ದಿವಸವೂ ಅಂಕಲ್ ಎಂದು ಕರೆಯುತ್ತಿದ್ದವನು ಇವತ್ತು "ತಾತ" ಎಂದು ಕರೆದೊಡನೆ. ನಾನು ನೇರವಾಗಿ ಮನೆಯಲ್ಲಿರುವ ಕನ್ನಡಿಯ ಮುಂದೆ ನಿಂತು ನೋಡಿಕೊಂಡೆ. ಆಶ್ಚರ್ಯವಾಯಿತು! ಮಗು, ಇಷ್ಟು ಚಿಕ್ಕ ಮಗು, ನನ್ನ ವಯಸ್ಸನ್ನು ಅದೆಷ್ಟು ನಿಖರವಾಗಿ ಗುರ್ತಿಸಿತ್ತು ಎಂದು. ಮಗುವಿಗೆ ಒಂದು ಚಾಕಲೇಟು ಕೊಟ್ಟೆ. ಹೆಂಡತಿಯ ಕಡೆಗೊಂದು ದೃಷ್ಟಿ ಕೊಟ್ಟೆ.

ನನಗೆ ಅರವತ್ತು ವರ್ಷಗಳಾಯಿತು ಎಂದು ಮನಸ್ಸಿನಲ್ಲಿ ಅಂದುಕೊಂಡ ಕ್ಷಣ ನನ್ನ ಕಣ್ಣೆದುರು ಸುಳಿದಿದ್ದು ಒಂದು ಆಕೃತಿ ಮಾತ್ರ. ಬ್ರಹ್ಮ, ವಿಷ್ಣು, ಮಹೇಶ್ವರರಾರೂ ಅಲ್ಲ. ಅವರೇನಾದರೂ ಬಂದಿದ್ದರೆ ಅರವತ್ತರ ಮೇಲೆ ಆಧ್ಯಾತ್ಮ ಎನ್ನುವ ಹಾಗೆ, ಸಿಗಲಾರದ ಯಾವುದೋ ಒಂದು ಶಕ್ತಿಯ ಕಡೆ ನನ್ನ ಚಿಂತನೆ ಹರಿಸಬಹುದಿತ್ತು. ಇನ್ನು ದೇಶಕ್ಕಾಗಿ ದುಡಿದು ಮಡಿದಂಥ ಹಿರಿಯ ವ್ಯಕ್ತಿಗಳ ನೆನಪಾದರೂ

ಸುಳಿಯಬಹುದಿತ್ತು. ಅದ್ಯಾವುದೂ ಬಾರದೇ ನನ್ನ ಕಣ್ಣೆದುರು ಬಂದದ್ದು "ಎದುರು ಮನೆಯ ಮೀನಾ."

ಇಂದಿಗೆ ಸುಮಾರು ನಲವತ್ತು ವರ್ಷಗಳ ಹಿಂದಿನ ಮಾತಿರಬಹುದು. ನನಗಿನ್ನೂ ಎಳೆಯನ ಹುಮ್ಮಸ್ಸು. ಕೈಯಲ್ಲೊಂದು ಪೆನ್ನು, ಕಿಸೆಯಲ್ಲೊಂದು ಹಾಳೆ ಇದ್ದರೆ ಜಗತ್ತನ್ನೇ ಅಲ್ಲಾಡಿಸಿ ಬಿಡಬಲ್ಲೆ ಎನ್ನುವ ಮೂರ್ಖ ಕಲ್ಪನೆಗಳು. ಹೆಗಲಿಗೊಂದು ಜೋಳಿಗೆಯಂಥ ಚೀಲ ಹಾಕಿಕೊಂಡು ಜುಬ್ಬ ಧರಿಸಿ ಓಡಾಡಿದರೆ ಜನರು ನನ್ನನ್ನು ಕವಿಯೆಂದೋ, ಸಾಹಿತಿಯೆಂದೋ ಪರಿಗಣಿಸ ಬಹುದು ಎನ್ನುವಷ್ಟು ಇನ್ನೂ ಹುಚ್ಚು ಆಲೋಚನೆಗಳನ್ನು ಮಾಡುತ್ತಿದ್ದೆ. ಸಾಲದ್ದಕ್ಕೆ ನನ್ನ ಕಣ್ಣಿನ ದೃಷ್ಟಿ ಸರಿ ಇದ್ದರೂ, ನನ್ನ ಮುಖಕ್ಕೊಂದು ವಿದ್ವಾಂಸನಂತರ ಕಳೆ ಕೊಡುವುದೇನೋ ಎಂದು ಆಲೋಚಿಸಿ ಕನ್ನಡಕಧಾರಿಯಾದೆ. ನನ್ನ ಸಾಹಿತ್ಯದ ಉಮ್ಮಳಿಕೆಯನ್ನು ಪ್ರತಿ ದಿನ ರಾತ್ರಿ ೮ ರಿಂದ ೧೧ರ ವರೆಗೆ ಕಡ್ಡಾಯವಾಗಿ ಬರೆದು ಮುಗಿಸುತ್ತಿದ್ದೆ. ಈ ನನ್ನ ದೈನಂದಿನ ರೂಢಿಯಿಂದಲೇ ನನಗೆ ಸಂಪರ್ಕ ಬಂದುದು ಎದುರು ಮನೆಯ ಮೀನಾಳದು.

ನಾನು ಯಾವತ್ತೂ ಕಿಟಕಿಯಿಂದ ಎದುರು ಮನೆಯ ಕಡೆ ಇಣುಕಿ ನೋಡಿದವನಲ್ಲ. ನೋಡುವಷ್ಟು ಧೈರ್ಯವೂ ನನಗೆ ಇದ್ದಿಲ್ಲ ಎಂಬುದೂ ನಿಜವೆ. ಅಷ್ಟು ಹೇಳಿಕೊಟ್ಟ ಸುಸಂಸ್ಕೃತರ ಲಕ್ಷಣಗಳಲ್ಲಿ ಅದು ಬರುತ್ತಿರಲಿಲ್ಲವಾದ್ದರಿಂದ ನೋಡಬೇಕು ಎನಿಸಿದಾಗಲೆಲ್ಲಾ ಮನಸ್ಸಿಗೇ ಕೋಪ ಅಳುಕು, ಹಾಗಾಗಿ ಇಣುಕಿ ನೋಡುವುದು ಅಭ್ಯಾಸದಲ್ಲಾಗಲಿ ಅಥವಾ ಹವ್ಯಾಸದಲ್ಲಾಗಲಿ ರೂಪುಗೊಳ್ಳದೇ ನನ್ನಲ್ಲೇ ಉಳಿದು ಹೋಯಿತು.

ನಾನು ಕಡ್ಡಾಯವಾಗಿ ಬರೆದ ಎಲ್ಲ ಅನಿಸಿಕೆಗಳನ್ನೂ ಒಂದಲ್ಲಾ ಒಂದು ಪತ್ರಿಕೆಗೆ ಕಳುಹಿಸುತ್ತಿದ್ದೆ. ಅಚ್ಚಾಗುವುದಕ್ಕಿಂತ ಹೆಚ್ಚಾಗಿ ಮರಳಿ ನನಗೆ ಬರುತ್ತಿದ್ದುದೇ ಹೆಚ್ಚು. ಅಂಥಹದರಲ್ಲಿ ಅಪ್ಪಿತಪ್ಪಿ ಏನಾದರೂ ಒಂದು ಲೇಖನ ಅಚ್ಚಾದರೇ ಒಂದು ವಾರದವರೆಗೆ ಎತ್ತಿದ ಕತ್ತು ಇಳಿಯುತ್ತಿರಲಿಲ್ಲ. ಹೀಗೇ ಅಚ್ಚಾದ ಲೇಖನಕ್ಕೆ ಒಂದು ದಿನ ಓದುಗರೊಬ್ಬರಿಂದ ಪ್ರತಿಕ್ರಿಯೆಯ ಪತ್ರ ನನ್ನ ಬಳಿ ಬಂತು. ಪತ್ರ ಓದಿದೆ. ಬಹಳ ಹೊಗಳಿ ಬರೆದಿದ್ದರು. ಸಹಜವಾಗಿ ಸಂತೋಷಪಟ್ಟೆ. ಒಂದು ತಿಂಗಳ ಬಳಿಕ ನನ್ನ ಮತ್ತೊಂದು ಲೇಖನ ಅಚ್ಚಾದಾಗ ಇದೇ ಓದುಗರಿಂದ ಮತ್ತೆ ಒಂದು ಪತ್ರ ಬಂತು. ಇದರಲ್ಲಿ ತಮ್ಮ ಮನಸ್ಸಿನಲ್ಲಿದ್ದುದನ್ನು ನೇರವಾಗಿ ನನಗೆ ತಿಳಿಸಿದ್ದರು. "ಈ ರೀತಿ ಹಾಳು ಹರಟೆ ಬರೆಯುವುದನ್ನು ಬಿಟ್ಟು, ಸಮಾಜದಲ್ಲಿನ ಆಗುಹೋಗುಗಳ ಬಗ್ಗೆ ಸೃಜನಾತ್ಮಕವಾಗಿ ಬರೆದರೆ, ನಿಮಗೆ ಹೆಚ್ಚಿನ ಯಶಸ್ಸು ಸಿಗುವುದು ಖಂಡಿತ. ಆದ್ದರಿಂದ ಆ ದಿಶೆಯಲ್ಲಿ ನಿಮ್ಮ ಪ್ರಯತ್ನಗಳು ಕ್ರೋಢೀಕರಿಸಿದರೆ ಒಳ್ಳೇದು" ಎಂದು ಬರೆದಿದ್ದರು. ಪತ್ರ ಓದಿ ಸಿಟ್ಟು ಬಂದರೂ, ಯೋಚಿಸಿ ನೋಡಿದಾಗ ಅವರ ಸಲಹೆ ನಿಜವೆನಿಸಿತು. ನನ್ನನ್ನು ನಾನು ತಿದ್ದಿಕೊಂಡೆ. ನಂತರ ನನ್ನ ಎಲ್ಲ ಬರವಣಿಗೆಗಳು ಒಂದು ಹೊಸ ತಿರುವನ್ನು ಪಡೆದುಕೊಂಡವು. ನನ್ನ ಜೀವನದಲ್ಲಿಯೇ ಅದೊಂದು ಘಟ್ಟ ಎಂದು ಹೇಳಬೇಕು.

ಸಾಹಿತಿಗೆ ಅನುಗುಣವಾಗಿ, ಮನೆಯ ಬದಿಯಲ್ಲೇ ಇದ್ದಂಥ ಒಂದು ಶಾಲೆಯಲ್ಲಿ

ಶಿಕ್ಷಕನ ಕೆಲಸವೂ ದೊರೆಯಿತು. ಹಾಗೂ ಹೀಗೂ ಊಟ ಬಟ್ಟೆಗಳಿಗೆ ತಾಪತ್ರಯವಿರಲಿಲ್ಲ. ಹೇಗೋ ನಡೆದುಹೋಗುತ್ತಿತ್ತು.

ಒಂದು ದಿನ ನಮ್ಮ ತಾಯಿಯೊಡನೆ ಮಾತನಾಡುತ್ತಾ ಕುಳಿತಿದ್ದಾಗ, ಲೇಖನ ಒಂದರ ಬಗ್ಗೆ ತಮ್ಮ ಅಭಿಪ್ರಾಯ ಕೊಡುತ್ತಾ "ವೀಣಾಗೆ ಇದ್ಯಾಕೊ ಹಿಡಿಸಲಿಲ್ಲಾ ಕಣೊ" ಎಂದರು. "ಹೋಗಿಹೋಗಿ, ಆ ವೀಣಾಗೆ ಯಾಕಮ್ಮ ತೋರಿಸಲು ಹೋದೆ ನನ್ನ ಲೇಖನಾನ್ನ?" ನನ್ನ ತಾಯಿಗೆ ಪ್ರಶ್ನಿಸಿದೆ. "ಈ ಒಂದು ಲೇಖನಾ ಏನು? ನೀನು ಬರೆದ ಎಲ್ಲ ಲೇಖನಗಳನ್ನೂ ಬೇಡಿ, ಬೇಡಿ, ಓದಿಕೊಡುತ್ತಾಳೆ. ಕೆಲವಕ್ಕೆ ಚೆನ್ನಾಗಿದೆ ಎಂದು ಹೇಳುತ್ತಾಳೆ. ಇನ್ನೂ ಕೆಲವಕ್ಕೆ ಬರಿ ನಕ್ಕು ಇಟ್ಟು ಹೋಗುತ್ತಾಳೆ. ಕೆಲವನ್ನಂತೂ ನಾನು ಇಲ್ಲದಾಗ ಇಟ್ಟು ಏನೂ ಹೇಳದೆ ಹೋಗಿರುತ್ತಾಳೆ. ಅವಳು ಏನೂ ಹೇಳದೆ ಇಟ್ಟು ಹೋದ ಲೇಖನಗಳೇ ಹೆಚ್ಚಾಗಿ ನಿನಗೆ ವಾಪಸ್ ಬರುವಂಥಹವು." ನನಗೆ ಪರಮಾಶ್ಚರ್ಯವಾಯಿತು. ನನ್ನನ್ನು ಒಂದು ಬಾರಿಯೂ ಭೇಟಿ ಮಾಡದೇ ನನ್ನ ಎಲ್ಲಾ ಲೇಖನಗಳನ್ನೂ ನನ್ನ ತಾಯಿಯಿಂದ ಗಿಟ್ಟಿಸಿಕೊಂಡು ಓದುತ್ತಿದ್ದ ನಮ್ಮ ಎದುರು ಮನೆಯ ವೀಣಾ ನಸಗೊಂದು ಒಗಟಾದಳು. ಬರಬರುತ್ತಾ ನಾನೇ ನನ್ನ ತಾಯಿಗೆ ಲೇಖನಗಳನ್ನು ವೀಣಾಗೆ ಓದಲು ಕೊಟ್ಟು ಅವಳ ಅಭಿಪ್ರಾಯವನ್ನು ಪಡಿ ಎಂದು ಹೇಳಲಾರಂಭಿಸಿದೆ. ಅವಳು ಚೆನ್ನಾಗಿದೆ ಎಂದು ಹೇಳಿದ್ದುವೆಲ್ಲಾ ಅಚ್ಚಾಗುತ್ತಿದ್ದವು. ಏನೂ ಹೇಳದೇ ಇಟ್ಟು ಹೋದ ಲೇಖನಗಳು ಮೂಲೆಗುಂಪಾಗಿ ನನ್ನ ಟೇಬಲ್ಲಿನ ಮೇಲೆಯೇ ಬಿದ್ದಿರುತ್ತಿದ್ದವು. ವೀಣಾಳ ಮೇಲೆ ನನಗಷ್ಟು ವಿಶ್ವಾಸ ಬಂದಿತ್ತು.

ವೀಣಾ ಹಾಗೂ ನನ್ನ ಲೇಖನಗಳ ಮಧ್ಯೆ ಅಷ್ಟೊಂದು ಬಾಂಧವ್ಯ ಬೆಳೆದಿದ್ದರೂ ಅವಳ ಬಗ್ಗೆ ಹೆಚ್ಚು ವಿಷಯ ಕೇಳಿ ತಿಳಿದುಕೊಂಡಿರಲಿಲ್ಲಾ. ಅವಳು ನನ್ನ ಲೇಖನಗಳ ಬಗ್ಗೆ ಆಸಕ್ತಿ ತೋರುತ್ತಿರುವುದು ಗೊತ್ತಾದ ಮೇಲೆಯೇ ನನಗೆ ಅವಳ ಬಗ್ಗೆ ಆಸಕ್ತಿ ಹುಟ್ಟಿದುದು. ಅಲ್ಲಿಯವರೆಗೆ ಅವಳು ನನ್ನ ಪಾಲಿಗೆ "ಎದುರು ಮನೆಯ ವೀಣಾ" ಅಷ್ಟೇ.

ನನ್ನ ಎಲ್ಲ ಲೇಖನಗಳ ಬಗ್ಗೆ ನನ್ನ ತಾಯಿಯ ಮೂಲಕವೇ ತನ್ನ ಅಭಿಪ್ರಾಯವನ್ನು ತಿಳಿಸುತ್ತಿದ್ದ ವೀಣಾಳನ್ನು ಒಮ್ಮೆಯಾದರೂ ನಾನು ಭೇಟಿಯಾಗಿ ಮಾತನಾಡಿಸಬೇಕು ಎಂದು ಹಂಬಲಿಸುತ್ತಿದ್ದೆ. ಆ ಸುದೈವಾವಕಾಶ ಬಹಳ ಬೇಗನೇ ನನಗೆ ಲಭ್ಯವಾಯಿತು. ಎಂದಿಗಿಂತ ತುಸು ಮೊದಲೇ ಮನೆಗೆ ಬಂದ ನಾನು, ನನ್ನ ತಾಯಿಯೊಡನೆ ಕುಳಿತು ಮಾತನಾಡುತ್ತಿದ್ದ ವೀಣಾಳನ್ನು ನಮ್ಮ ಮನೆಯಲ್ಲೇ ಕಂಡೆ. ನನ್ನನ್ನು ಕಂಡೊಡನೆ ಕೈಯ್ಯಲ್ಲಿದ್ದ ಕೆಲವು ಪುಟಗಳನ್ನು ಮುಚ್ಚಿಡಲು ಪ್ರಯತ್ನ ಮಾಡಿದ ವೀಣಾ, ನಾನು ಅವುಗಳನ್ನು ಗಮನಿಸಿದ್ದು ಗೊತ್ತಾಗಿ ಅಲ್ಲಿಯೇ ಇದ್ದ ಮೇಜಿನ ಮೇಲೆ ಇಟ್ಟು, ಮನೆಗೆ ಹೊರಡಲು ಅನುವಾದಳು. ಸಿಕ್ಕ ಅವಕಾಶವನ್ನು ಬಿಟ್ಟುಬಿಡುತ್ತೇನೆಯೇ ನಾನು?

ವೀಣಾಗೂ ಕುಳಿತುಕೊಳ್ಳಲು ಹೇಳಿ, ಕುಶಲೋಪಚರಿಯನ್ನು ಕೇಳುತ್ತಾ, ಪ್ರಾಸಂಗಿಕವಾಗಿ ಸಾಹಿತ್ಯ, ಅದರ ಬೆಳವಣಿಗೆ, ಬೇರೆ ಬೇರೆ ಬರಹಗಾರರು ಎಂದು ಸಾವಧಾನವಾಗಿ ವಿಷಯ ಪ್ರಸ್ತಾಪಿಸುತ್ತಾ ಮಾತನಾಡಲು ಪ್ರಾರಂಭಿಸಿದೆ.

ವೇಳೆ ಹೋದದ್ದೇ ತಿಳಿಯಲಿಲ್ಲ. ಒಂದೂವರೆ ಗಂಟೆಯ ಸುದೀರ್ಘ ಚರ್ಚೆಯ ನಂತರ "ಅಪ್ಪ ಬರುವ ವೇಳೆ ಆಯಿತು. ನಾನಿನ್ನು ಹೋಗಿ ಬರುತ್ತೇನೆ" ಎಂದು ಹೇಳಿ ಮೀನಾ ಎದ್ದಾಗಲೇ ನನಗೆ ಸಮಯಪ್ರಜ್ಞೆ ಮೂಡಿದ್ದುದು.

ಈ ಭೇಟಿಯ ನಂತರ ಮೀನಾ ನಮ್ಮ ಮನೆಗೆ ಆಗಿಂದಾಗ ಬರತೊಡಗಿದಳು. ಸಲಿಗೆ ಜಾಸ್ತಿ ಆದಂತೆಲ್ಲಾ ನನ್ನನ್ನೇ ನೇರವಾಗಿ ಲೇಖನಗಳನ್ನು ಕೇಳಿ, ಓದಿ ಹಿಂದಿರುಗಿಸುತ್ತಿದ್ದಳು. ಯಾವಾಗಲೂ ಅವಳ ಅಭಿಪ್ರಾಯ ಸ್ಪಷ್ಟ ಹಾಗೂ ನೇರವಾಗಿರುತ್ತಿದ್ದವು.

ಹೀಗೇ ಕೆಲವು ಕಾಲ ಕಳೆದ ನಂತರ, ಅವಳ ಅಭಿರುಚಿಯನ್ನು ಚೆನ್ನಾಗಿ ಅರಿತಿದ್ದ ನಾನು, ಅದಕ್ಕೆ ತಕ್ಕಂತೆ ಬರೆಯಲು ಪ್ರಾರಂಭಿಸಿದೆ. ಬರಹಗಳನ್ನು ನೋಡಿದ ಮೇಲೆ ಸಂತೋಷ ವ್ಯಕ್ತಪಡಿಸುವ ಬದಲು ಮೀನಾ ಅವುಗಳನ್ನು ಬಹಳ ನಮ್ರತೆಯಿಂದ ತಿರಸ್ಕರಿಸಿದಳು. "ನಿಮ್ಮ ಮನಸ್ಸಿಗೆ ಅನಿಸಿದ್ದನ್ನು ಬರೆಯುವುದು ಬಿಟ್ಟು, ಈ ಬರಹಗಳು ಏಕೋ ಬೇರೆ ಯಾರನ್ನೋ ಒಲಿಸಲು ಬರೆದಿರುವಂತೆ ಕಾಣುತ್ತವೆ. ಇದು ನಿಮ್ಮ ಶೈಲಿ ಅಲ್ಲಾ" ಎಂದು ಹೇಳಬೇಕೇ. ಅವಳ ಈ ಮಾತಿನಲ್ಲಿ ನನ್ನ ಮನಸ್ಸಿನ ಇಂಗಿತವನ್ನು ಅವಳು ಅರಿತಂತೆ ತೋರುತ್ತಿತ್ತು.

ಬರುವ ಒಂದು ವರ್ಷದಲ್ಲಿ 'ಎದುರು ಮನೆಯ ಮೀನಾ' ನಮ್ಮ ತಾಯಿಯ ಮಾತಿನಲ್ಲಿ 'ನಮ್ಮ ಮೀನಾ' ಆಗತೊಡಗಿದಳು. ಇನ್ನರ್ಧ ವರ್ಷ ಕಳೆಯುವಷ್ಟರಲ್ಲಿ "ನಮ್ಮ ಮೀನಾ" ಹೋಗಿ "ನನ್ನ ಮೀನಾ" ಆದಳು.

ಮದುವೆಯಾದ ಮೇಲೆ, ಪ್ರಪ್ರಥಮವಾಗಿ ಅವಳು ನನಗೆ ಕೊಟ್ಟ ಉಡುಗೊರೆ ಏನೆಂದುಕೊಂಡಿರಿ? ಹಳೆಯ ಕಾಗದಗಳು. ತಾನು ನನಗೆ ಬರೆದ ಎಲ್ಲ ಕಾಗದಗಳ ಕಾಪಿ ಅವಾಗಿದ್ದವು. ಪತ್ರಗಳ ಸುರಳಿಯಲ್ಲಿ ಕಣ್ಣಾಡಿಸಿ ನೋಡಿದಾಗಲೇ ತಿಳಿಯಿತು. "ಈ ಹಾಳು ಹರಟೆಯನ್ನು ಬಿಟ್ಟು.... ಸೃಜನಾತ್ಮಕವಾಗಿ ಬರೆದರೆ...." ಎಂದು ಈ ಹಿಂದೆ ನನಗೆ ಬರೆದ ನನ್ನ ಓದುಗ ಇವಳೇ ಎಂದು ಇವಳಿಂದಲ್ಲವೇ ನಾನೊಂದು ತಿರುವು ಪಡೆದದ್ದು? ಪತ್ರಗಳನ್ನೆಲ್ಲಾ ಅವಳಿಗೇ ಹಿಂತಿರುಗಿಸಿ "ನೀನೇ ನನ್ನವಳಾದ ಮೇಲೆ ಈ ಪತ್ರಗಳು ನನಗೇಕೆ" ಎಂದೆ. ಅವಳು ಮುಗುಳು ನಗೆಯಿಂದ ಅವುಗಳನ್ನೆಲ್ಲಾ ಜೋಪಾನವಾಗಿ ಕಾಪಾಡಲು ಮರದ ಡಬ್ಬಿಯೊಂದರಲ್ಲಿ ಹಾಕಿ ಮೇಲಕ್ಕೆ ಎತ್ತಿಟ್ಟಳು.

ಈ ಘಟನೆ ನಡೆದು ಇಂದಿಗೆ ನಲವತ್ತು ವರ್ಷಗಳಾದರೂ, ನನ್ನ ಮನಸ್ಸಿನಲ್ಲಿ ಅಚ್ಚಳಿಯದೇ ಇನ್ನೂ ಹಸಿರಾಗಿಯೇ ಇದೆ. ಆ ಪತ್ರಗಳೆಲ್ಲಾ ಇನ್ನೂ ನಮ್ಮ ಸಾಹಿತ್ಯಕ ಪ್ರೇಮದ ಕಷ್ಟ-ನಿಷ್ಠುರಗಳಿಗೆ ಸಾಕ್ಷಿಯಾಗಿ ನಮ್ಮಲ್ಲಿಯೇ ಇವೆ. ನನ್ನ ಮಕ್ಕಳಿಗೆ ಅವೊಂದು ಹಾಳೆಯ ತುಣುಕುಗಳಾದರೇ, ನಮ್ಮೀರ್ವರಿಗೂ ಅವೊಂದು ಜೀವನಗಾಥೆ. ನಾನು ಬರೆದುದೆಲ್ಲವನ್ನೂ ಓದುವ ರೂಢಿ ಮೀನಾಗೆ ಇನ್ನೂ ಇದೆ. ಈಗ ಬರೆದುದನ್ನು ಸಹ ಓದಿದಳು. ಓದಿ "ನಿಮಗೆಲ್ಲೋ ಅರವತ್ತರ ಅರಳುಮರಳು ಇರಬೇಕು" ಎನ್ನಬೇಕೆ? ಅರೇ! ಅವಳಿಗೆ ಹೇಗೆ ಗೊತ್ತಾಯಿತು ನನಗೆ ಅರವತ್ತು ತುಂಬಿದೆ ಎಂದು?

ಅಜ್ಞಾನ

ಅಡ್ಯನಡ್ಕ ಕೃಷ್ಣಭಟ್ಟ
೨೩೮೬, ಎಂಟನೆಯ ಮುಖ್ಯರಸ್ತೆ
ವಿಜಯನಗರ ಎರಡನೆಯ ಹಂತ
ಮೈಸೂರು-೫೭೦೦೧೭

"ಅಜ್ಞಾನಿಗಳ ಕೂಡೆ ಅಧಿಕ ಪ್ರಸಂಗಕ್ಕಿಂತ ಸುಜ್ಞಾನಿಗಳ ಕೂಡೆ ಜಗಳ ಲೇಸು" ಎಂದು ಹಾಡಿದರು ಪುರಂದರದಾಸರು. ತಮಸೋಮಾ ಜ್ಯೋತಿರ್ಗಮಯಾ ಮೃತ್ಯೋರ್ಮಾ ಅಮೃತಂಗಮಯಾ ಎಂದರು ಉಪನಿಷದೃಷಿಗಳು. ಅಜ್ಞಾನವೆಂದರೆ ಕತ್ತಲೆ, ಸಾವು; ಜ್ಞಾನವೆಂದರೆ ಬೆಳಕು, ಬದುಕು. ಸಸ್ಯಕ್ಕೆ ಸೂರ್ಯನ ಬೆಳಕು ಹೇಗೋ ವ್ಯಕ್ತಿಗೆ ಜ್ಞಾನದ ಜ್ಯೋತಿ ಹಾಗೆ. ಜ್ಞಾನದ ಅಭಾವವೊಂದೇ ಅಜ್ಞಾನವಲ್ಲ—ಸಕಲ ಸಂಕಷ್ಟಗಳ ಆಕರವೇ ಅಜ್ಞಾನ. ವ್ಯಕ್ತಿಗೆ ಆಂತರಿಕ ಪ್ರೇರಣೆ ಮತ್ತು ಬಾಹ್ಯ ಪ್ರೋತ್ಸಾಹ ಒದಗಿದ ಹೊರತು ಕತ್ತಲಿನಿಂದ ಬೆಳಕಿನೆಡೆಗಿನ ಪಯಣ ಸಿದ್ಧಿಸದು.

ಜನರನ್ನು ಪೀಡಿಸುವ ಮೂರು ಮಹಾ ಅನಿಷ್ಟಗಳು ಯಾವುವು ಎಂಬ ಪ್ರಶ್ನೆ ಬಂತೆನ್ನಿ. ಆಗ ಸಾಮಾನ್ಯವಾಗಿ ಹೆಸರಿಸುವಂಥವು ಮೂರು: ಅಜ್ಞಾನ, ಅನಾರೋಗ್ಯ ಮತ್ತು ದಾರಿದ್ರ್ಯ. ಒಂದನ್ನೊಂದು ಹುಟ್ಟುಹಾಕಬಲ್ಲ ಈ ತ್ರಿವಳಿಯಲ್ಲಿ ಮೊದಲನೆಯದು ಅಜ್ಞಾನ, ಅವಿದ್ಯೆ, ಅಮತಿ ಎಂದೂ ಇದನ್ನು ಕರೆಯುವುದುಂಟು. ತಿಳುವಳಿಕೆ ಇಲ್ಲದಿರುವ ಒಟ್ಟು ಸ್ಥಿತಿ ಇದು.

ಅಜ್ಞಾನವನ್ನು ಕತ್ತಲಿಗೆ ಹೋಲಿಸುವುದುಂಟು. 'ಕತ್ತಲಿಸಿಂದ ಬೆಳಕಿನೆಡೆ ನಡೆಯೋಣ' ಎಂಬ ಸಂಕಲ್ಪದಲ್ಲಿ 'ಅಜ್ಞಾನದಿಂದ ಜ್ಞಾನದೆಡೆ ಸಾಗೋಣ' ಎಂಬ ಭಾವ ಅಂತರ್ಗತವಾಗಿದೆ. ಕರಿಕತ್ತಲಿನಲ್ಲಿ ದಾರಿ ಕಾಣಿಸುವುದಿಲ್ಲ; ದಿಕ್ಕು ತಿಳಿಯುವುದಿಲ್ಲ; ಮುಂದುವರಿಯಲು ಬೇಕಾದ ಯಾವ ಗುರುತುಗಳೂ ತೋರುವುದಿಲ್ಲ. ಇದರಿಂದ ನಡೆ ಕುಂಠಿತವಾಗುತ್ತದೆ, ಮನಸ್ಸು ತಬ್ಬಿಬ್ಬಾಗುತ್ತದೆ. ಮನಸ್ಸು ಅಜ್ಞಾನದಿಂದ ಇರುವಾಗಲೂ ಇದೇ ಅವಸ್ಥೆ.

ಆದರೆ ಪೂರ್ಣ ಕತ್ತಲೆಂಬುದು ಹೇಗೆ ವಿರಳವೋ ಪೂರ್ಣ ಅಜ್ಞಾನ ಎಂಬುದೂ ವಿರಳವೇ. ಹುಟ್ಟಿದಾರಭ್ಯ ವ್ಯಕ್ತಿಯೊಬ್ಬ ಒಳಗಾಗುವ ಅನೇಕ ಸನ್ನಿವೇಶಗಳು, ಅವನ ಸಂಪರ್ಕಕ್ಕೆ ಬರುವ ವ್ಯಕ್ತಿಗಳು ಮತ್ತು ವಸ್ತುಗಳು ತಮ್ಮ ತಮ್ಮ ಛಾಪನ್ನು ಬಿಡದಿರುವುದಿಲ್ಲ. ಇವೆಲ್ಲದರ ಒಟ್ಟು ಪರಿಣಾಮವಾಗಿ ಅಜ್ಞಾನದ ಗಾಢತೆ ಕಡಮೆಯಾಗುತ್ತದೆ. ಬೇರೆ ಬೇರೆ ವ್ಯಕ್ತಿಗಳಲ್ಲಿ ಬೇರೆ ಬೇರೆ

ಸಮುದಾಯಗಳಲ್ಲಿ ಇದರ ಮಟ್ಟ ಬೇರೆ ಬೇರೆ. ಅದು ಗಣನೀಯವಾಗಿ ಇಲ್ಲದಾಗಲು ಉದ್ದೇಶಪೂರ್ವಕವಾದ ಪ್ರಯತ್ನ, ಅಧ್ಯಯನ, ಆಲೋಚನೆಗಳು ಅಗತ್ಯ.

'ತಿಳುವಳಿಕೆ ಇಲ್ಲದಿರುವುದೇ ಪರಮ ಸುಖ, ಅಜ್ಞಾನವೇ ಆನಂದ' ಎಂದು ಅರೆಬರೆ ಖೇದದಿಂದ, ಕೆಲವೊಮ್ಮೆ ವ್ಯಂಗ್ಯದಿಂದ ಆಡುವ ಮಾತುಂಟು. ಅಪ್ರಿಯವಾದ ಸತ್ಯಗಳು ಎದುರಾದಾಗ, ವಾಸ್ತವತೆ ಮನಸ್ಸಿಗೆ ಮುದ ನೀಡದಿರುವಾಗ ಇಂಥ ಅನಿಸಿಕೆ ಉಂಟಾಗಬಹುದು. ಆದರೆ ಇಂಥ ಮಾತುಗಳು ಎಂದಿಗೂ ಅಜ್ಞಾನದ ಅಸ್ತಿತ್ವವನ್ನು ನ್ಯಾಯಯುತವಾದುದೆಂದು ಸಾಬೀತುಗೊಳಿಸಲಾರವು. ಏಕೆಂದರೆ ಎಲ್ಲಿ ಅಜ್ಞಾನವೇ ಆನಂದವಾಗಿರುವುದೋ ಅಲ್ಲಿ ವಿವೇಕ ಎಂಬುದೇ ತಪ್ಪೆನಿಸಬಹುದು. ಎಲ್ಲಿ ವಿವೇಕಯುತ ನಡವಳಿಕೆಯಾಗಲೀ ಕ್ರಿಯೆಗಳಾಗಲೀ ಇಲ್ಲವೋ ಅಲ್ಲಿ ಹಿತಕಾರಿತವಾದ ಪರಿಣಾಮವಾಗಲೀ ಫಲಿತಾಂಶಗಳಾಗಲೀ ಉಂಟಾಗವು.

ಅಜ್ಞಾನ ಮನೆಮಾಡಿದಲ್ಲಿ ವ್ಯಕ್ತಿಯೊಬ್ಬನ ದಿನನಿತ್ಯದ ಬದುಕಿಗೆ ಹೊಳವುಗಳನ್ನು ನೀಡುವ ವಿಸ್ಮಯ, ಕುತೂಹಲಗಳು ಹುಟ್ಟವು ; ಸೃಜನಶೀಲತೆ ಕಾಣಿಸದು. ಅಷ್ಟೇ ಅಲ್ಲ, ನಿತ್ಯಜೀವನದಲ್ಲಿ ಎದುರಿಸಬೇಕಾದ ಹಾಗೂ ಪರಿಹರಿಸಬೇಕಾದ ಚಿಲ್ಲರೆ ಸಮಸ್ಯೆಗಳೂ ಬೃಹದಾಕಾರವನ್ನು ತಾಳಿ ಬದುಕೇ ದುಸ್ಸಹ ಎನಿಸಬಹುದು.

ಅಜ್ಞಾನ ವ್ಯಕ್ತಿಗತ ಆಗಿರಲುಬಹುದು, ಸಮುದಾಯಕ್ಕೆ ಅಂಟಿದ್ದಾಗಿರಬಹುದು, ಪರಂಪರೆಯಿಂದ ಬಂದ ನಂಬಿಕೆಗಳಿಂದಾಗಿರಬಹುದು, ವರ್ತಮಾನಕಾಲದ ಅನಿವಾರ್ಯತೆಗಳಿಂದ ಹುಟ್ಟಿದ್ದಾಗಿರಬಹುದು, ತಾನೇ ಬೆಳೆಸಿದ್ದಾಗಿರಬಹುದು, ಇತರರು ಹೇರಿದ್ದಾಗಿರಬಹುದು. ಅದರ ಪರಿಣಾಮ ತೀರ ಅಲ್ಪಕಾಲದ್ದಾಗಿರಬಹುದು. ಇಲ್ಲವೇ ದೀರ್ಘಕಾಲೀನವಾಗಬಹುದು. ಇಂಥ ಅನೇಕ ಛಾಯೆಗಳ ಅಜ್ಞಾನ ಬದುಕಿನ ಸಂಕೀರ್ಣತೆಯನ್ನು ಹೆಚ್ಚಿಸುತ್ತಾ ಹೋಗುತ್ತದೆ.

ಇತರರಿಗೆ ಹೇಳಬೇಕೆನ್ನಿಸುವುದನ್ನು ಶಬ್ದಗಳಲ್ಲಿ ವ್ಯಕ್ತಪಡಿಸಲು ಆಗದಿರುವುದು ಭಾಷೆಯ ಅಜ್ಞಾನದಿಂದ. ಧನ, ಧಾನ್ಯ, ಸರಕು, ತಿನಿಸು, ಹಸು, ಹಾಲು—ಹೀಗೆ ಯಾವುದೇ ವಸ್ತುಗಳನ್ನು ಮಾರುವಾಗ ಅಥವಾ ಖರೀದಿ ಮಾಡುವಾಗ ಲೆಕ್ಕ ತಪ್ಪುವುದೇಕೆ? ಸರಳ ಅಂಕಗಣಿತದಲ್ಲಿ ಪರಿಶ್ರಮ ಇಲ್ಲದಿರುವುದರಿಂದ. ಆದ್ದರಿಂದ ಹಿಂದಿನಿಂದಲೇ ಬಂದ ಅನುಭವದ ಮಾತೊಂದು ಉಂಟು. 'ಒಂದಿಷ್ಟು ಲೆಕ್ಕ ಮತ್ತು ಭಾಷೆಯ ಜ್ಞಾನವಿದ್ದರೆ ಹೇಗೂ ದಿನಗಳೆಯಬಹುದು' ಎಂಬುದೇ ಅದರ ತಿರುಳು.

ಒಂದು ರಾಷ್ಟ್ರದಲ್ಲಿ ಹುಟ್ಟಿ ಬೆಳೆಯುವ ವ್ಯಕ್ತಿ ಹುಟ್ಟಿನಿಂದಲೇ ಆ ರಾಷ್ಟ್ರದ ನಾಗರಿಕನಾಗುತ್ತಾನೆ. ರಾಷ್ಟ್ರಜೀವನವನ್ನು ಸುಗಮಗೊಳಿಸುವುದಕ್ಕಾಗಿ ಆಯಾ ರಾಷ್ಟ್ರ ತನ್ನದೇ ಸಂವಿಧಾನ ಮತ್ತು ಕಾನೂನುಗಳನ್ನು ರೂಪಿಸುತ್ತದೆ. ಪ್ರತಿಯೊಬ್ಬ ನಾಗರಿಕನಿಗೆ ಅವನದೇ ಹಕ್ಕುಗಳಿರುತ್ತವೆ. ಹಕ್ಕುಗಳೊಂದಿಗೆ ಕೆಲವು ಕನಿಷ್ಠ ಜವಾಬ್ದಾರಿಗಳನ್ನೂ ಅವನು ನಿರ್ವಹಿಸಬೇಕಾಗುತ್ತದೆ. ಇವಾವುದೂ ತನಗೆ ತಿಳಿದಿಲ್ಲ ಎಂದು ಸ್ವೇಚ್ಛಾವೃತ್ತಿಯಿಂದಿರುವುದು ಯಾರಿಗೂ

ನಿಡುಗಾಲ ಸಾಧ್ಯವಿಲ್ಲ. ಕಾನೂನುಗಳ ಅಜ್ಞಾನವನ್ನು ರಾಷ್ಟ್ರ ಕ್ಷಮಿಸುವುದಿಲ್ಲ.

ಮನೆಬಿಟ್ಟು ನಗರಕ್ಕೆ ಹೋಗಬೇಕಾದ ವ್ಯಕ್ತಿಯೊಬ್ಬ ಬಸ್ಸನ್ನು ಹಿಡಿಯಬೇಕಾಗಿದೆ ಎಂದಿಟ್ಟುಕೊಳ್ಳಿ. ಬಸ್ಸಿನ ವೇಳೆ ಅವನಿಗೆ ಗೊತ್ತಿಲ್ಲ—ಅದು ಅವನ ಪಾಲಿನ ಅಜ್ಞಾನ. ಅವನು ಮೊದಲೇ ಹೋದರೆ ತುಂಬ ಹೊತ್ತು ಕಾದು ಕುಳಿತು ಬೇಸರಪಟ್ಟುಕೊಳ್ಳಬೇಕಾಗಬಹುದು. ವಿಳಂಬವಾದರೆ ಬಸ್ಸೇ ತಪ್ಪಿಹೋಗಬಹುದು. ಇಂಥ ಕಿರಿ ಕಿರಿ ಒಂದು ಹೊತ್ತಿಗೆ ಅಥವಾ ಒಂದು ದಿನಕ್ಕೆ ಸೀಮಿತವಾಗಿದ್ದು ಒಬ್ಬ ವ್ಯಕ್ತಿ ಮಾತ್ರ ಅನುಭವಿಸಬೇಕಾದದ್ದು.

ಜಲಮಟ್ಟದ ಅರಿವಿಲ್ಲದೆ ಒಂದು ಪ್ರದೇಶದಲ್ಲಿ ಎಲ್ಲಿ ಬೇಕಾದರಲ್ಲಿ ಯಾರು ಬೇಕೆಂದರವರು ತೂತು ಬಾವಿಗಳನ್ನು ಕೊರೆಯುತ್ತಾರೆ ಎಂದಿಟ್ಟುಕೊಳ್ಳಿ. ಕೋಟಿಗಟ್ಟಲೆ ವರ್ಷಗಳ ಹಿಂದೆ ಅಂತರ್ಜಲವಾಗಿ ಸಂಗ್ರಹವಾದ ನೀರು ಈಗ ಒಮ್ಮೆಗೇ ಬಳಕೆಗೆ ಬರುತ್ತದೆ. ನೀರಿನ ಮರುಪೂರಣ ಹೇಗೆಂದು ಗೊತ್ತಿಲ್ಲ. ಭೂಮಿಯ ಅಂತರಾಳ ಬತ್ತಿದಾಗ ನೀರಿನ ಸರಬರಾಜು ಹೇಗೆಂದು ಗೊತ್ತಿಲ್ಲ. ಇಂಥ ಅಜ್ಞಾನದ ಪರಿಣಾಮ ದಶಕಗಳ ಕಾಲ ಮುಂದುವರಿಯಬಹುದು; ಆ ಪರಿಣಾಮವನ್ನು ಒಂದು ಕಾಲಘಟ್ಟದಲ್ಲಿರುವ ಜನಸಮುದಾಯ ಮಾತ್ರವಲ್ಲದೆ ಕೆಲವು ಪೀಳಿಗೆಗಳು ಎದುರಿಸಬೇಕಾಗಬಹುದು. ಅರಣ್ಯದ ನಾಶ ಮತ್ತು ಉಪಯೋಗ, ನ್ಯೂಕ್ಲಿಯರ್ ಶಕ್ತಿಯ ಬಳಕೆ, ಕೈಗಾರಿಕೀಕರಣ ಮೊದಲಾದ ಚಟುವಟಿಕೆಗಳಲ್ಲೆಲ್ಲ ಮನುಷ್ಯನ ಅಜ್ಞಾನದ ಪ್ರಮಾಣ ಎಷ್ಟಿರಬಹುದು, ಅದರ ಪರಿಣಾಮ ಎಷ್ಟು ಗಾಢವಾಗಿರಬಹುದು ಎಂಬ ಸಂದೇಹಗಳು ಆಗಿಂದಾಗ ತಲೆ ಎತ್ತುತ್ತಿರುತ್ತವೆ.

ಹಳ್ಳಿಗಳಲ್ಲಿ ಮನೆ ಅಂಗಳವನ್ನು ಸೆಗಣಿಯಿಂದ ಸಾರಿಸುತ್ತಾರೆ. ಅದರಿಂದ ದೂಳು ಕಡಿಮೆಯಾಗುತ್ತದೆ, ಅಂಗಳ ಚೊಕ್ಕಟವಾಗುತ್ತದೆ. ಸೆಗಣಿ ಶುದ್ಧೀಕಾರಕ ಎಂಬ ಈ ನಂಬಿಕೆ ಇನ್ನೂ ಒಂದು ಹೆಜ್ಜೆ ಮುಂದೆ ಸಾಗಿ ಅರಿವಿಲ್ಲದ ಕ್ಷೇತ್ರವನ್ನು ಪ್ರವೇಶಿಸಬಹುದು. ಈಗ ತಾನೇ ಹುಟ್ಟಿದ ಮಗುವಿನ ಹೊಕ್ಕುಳ ಬಳ್ಳಿಯನ್ನು ಕತ್ತರಿಸಿ ಗಾಯಕ್ಕೆ ಸೆಗಣಿ ಸವರುವುದು ಇಂಥ ಒಂದು ಕ್ರಮ. ಧನುರ್ವಾತ ಸೋಂಕಿನ ಸಾಧ್ಯತೆ ಈ ಅಜ್ಞಾನಕ್ಕೆ ತೆರುವ ಬೆಲೆಯಾಗುತ್ತದೆ. ಭಾನಾಮತಿ ಮಾಡುವವರೆಂದು, ಮಾಟಗಾತಿಯರೆಂದು ವಿನಾ ಆರೋಪಕ್ಕೊಳಗಾಗಿ ನರಳುವ ಮುಗ್ಧ ವ್ಯಕ್ತಿಗಳು ಸಾಮುದಾಯಿಕ ಅಜ್ಞಾನದ ಕ್ರೌರ್ಯಕ್ಕೆ ದೃಷ್ಟಾಂತವಾಗುತ್ತಾರೆ.

ಅಜ್ಞಾನ ಸಂಪೂರ್ಣ ಮಾಯವಾಗಿರುವ ಸ್ಥಿತಿಯನ್ನು ವ್ಯಕ್ತಿಯಲ್ಲಾಗಲೀ ಸಮಾಜದಲ್ಲಾಗಲೀ ಕಲ್ಪಿಸುವುದು ಕಷ್ಟ. ಆದರೆ ಅಜ್ಞಾನದ ಬಿಗಿತ ನಮ್ಮನ್ನು ಉಸಿರುಕಟ್ಟಿಸುವಂತಿರಬಾರದು. ಇದಕ್ಕಾಗಿ ನಾವು ನಮ್ಮ ಬುದ್ಧಿಯನ್ನು ದುಡಿಸಿಕೊಳ್ಳಬೇಕು.

ನಾವೆಷ್ಟು ಪ್ರಾಮಾಣಿಕರು?

ಗೋಪಾಲ ಆಶ್ರಿತ
ರಮಾ ನಿಲಯ
ಜವಹರ್‌ನಗರ
ರಾಯಚೂರು–೫೮೪ ೧೦೧

ತಿರುವನಂತಪುರದ ಮಧ್ಯ ಬಜಾರದಲ್ಲಿನ ಒಂದು ದೊಡ್ಡ ಡಿಪಾರ್ಟ್‌ಮೆಂಟ್ ಸ್ಟೋರ್‌ನಲ್ಲಿ, ಕೆಲಸದಲ್ಲಿ ತೊಡಗಿದ್ದ ಅಶೋಕನ್ ಕುಟ್ಟಿಗೆ ಬೇಸಿಗೆಯ ಒಂದು ಮಂಗಳವಾರದ ಮಧ್ಯಾಹ್ನ ಅಂಗಡಿಯ ನೆಲದ ಮೇಲೆ ಒಂದು ಕಂದು ಬಣ್ಣದ ಪರ್ಸ್ ಬಿದ್ದದ್ದು ಕಂಡಿತು. ಅದರೊಳಗೆ ನೂರು ರೂಪಾಯಿಯ ಎರಡು ನೋಟುಗಳು ಹಾಗೂ ೫೦ ರೂಪಾಯಿಯ ಮೂರು ನೋಟುಗಳು–ಒಟ್ಟು ೩೫೦ ರೂ. ಇದ್ದವು. ಆ ಪರ್ಸನ್ನು ಎತ್ತಿಕೊಳ್ಳುತ್ತಿದ್ದಂತೆ "ನಾನು ಕೂಡಾ ಹಿಂದೆ ಒಮ್ಮೆ ನನ್ನ ಪರ್ಸನ್ನು ಕಳೆದುಕೊಂಡಿದ್ದೆ. ಆದರೆ ನನಗೆ ಮತ್ತೆ ಹಣ ದೊರೆಯಲಿಲ್ಲ" ಎಂಬುದು ಅವನ ನೆನಪಿಗೆ ಬಂತು. "ನಾನು ಮಾತ್ರ ಇದರ ಒಡೆಯನನ್ನು ಹುಡುಕಿ ತಲುಪಿಸಬೇಕು" ಎಂದು ಆತ ಅಂದುಕೊಂಡ.

ಎರಡು ಗಂಡು ಮಕ್ಕಳ ತಂದೆಯಾದ ೩೦ ವರ್ಷದ ಅಶೋಕನ್, ಬಹಳ ಕಷ್ಟಪಟ್ಟು ಜೀವನ ನಡೆಸುತ್ತಿದ್ದ. ಆದರೂ ಇಂದು ಅವನು ನೇರವಾಗಿ ಅಂಗಡಿಯ ಹಣಕಾಸು ವಿಭಾಗಕ್ಕೆ ಹೋಗಿ ಆ ಪರ್ಸನ್ನಿತ್ತ. ಆ ಗುಮಾಸ್ತ ಪರ್ಸಿನೊಳಗಿದ್ದ ವ್ಯಕ್ತಿಯ (ಮಗುವಿನ ಜೊತೆಗೆ ತೆಗೆಸಿಕೊಂಡ) ಭಾವಚಿತ್ರ ಮತ್ತು ದೂರವಾಣಿ ಸಂಖ್ಯೆಯನ್ನು ನೋಡಿ, ಸಂಪರ್ಕಿಸಿ, ಆ ಹಣವನ್ನು ಕಳೆದುಕೊಂಡ ವ್ಯಕ್ತಿಗೆ ಮರಳಿಸುವ ವ್ಯವಸ್ಥೆ ಮಾಡಿದ್ದ.

ಜಪಾನಿನ ಈಶಾನ್ಯ ಭಾಗದಲ್ಲಿ ಸುಮಾರು ೬೦೦೦ ಕಿಲೋ ಮೀಟರ್ ದೂರದಲ್ಲಿರುವ ಕಾಮಕುರಾಯೆಂಬ ಪುರಾತನ ರಾಜಧಾನಿಯಲ್ಲಿ ಒಬ್ಬ ಶ್ರೀಮಂತ ವರ್ತಕ ಬಹಳ ಅವಸರದಿಂದ ರೈಲು ನಿಲ್ದಾಣದ ಹತ್ತಿರದ ದೂರವಾಣಿ ಕೇಂದ್ರಕ್ಕೆ ಸಾಗಿದ್ದ. ಆಗ ಮಹಿಳೆಯೊಬ್ಬರ ಕರಿಯ ಚರ್ಮದ ಪರ್ಸೊಂದು ಕಟ್ಟಡದ ಸಮೀಪ ಬಿದ್ದಿದ್ದು ಅವನಿಗೆ ಕಂಡಿತು. ಆ ಪರ್ಸನ್ನು ತನ್ನ ಪ್ಯಾಂಟಿನ ಜೇಬಿನಲ್ಲಿ ತುರುಕಿಕೊಂಡು ಹೊರಟುಬಿಟ್ಟನು. ದಾರಿಯಲ್ಲಿ ಒಂದು ಪೋಲಿಸ್ ಠಾಣೆಯ ಹತ್ತಿರ ಸ್ವಲ್ಪ ಹೊತ್ತು

ಆಧಾರ: ೧೯೯೬ನೇ ಏಪ್ರಿಲ್ 'ರೀಡರ್ಸ್ ಡೈಜೆಸ್ಟ್' ಸಂಚಿಕೆಯಲ್ಲಿನ ಜೋಸೆಫ್ ರೀವ್ಸ್ ಅವರ "ಹೌ ಹಾನೆಸ್ಟ್ ಆರ್ ವಿ" ಲೇಖನ

ನಿಂತು, ಎದುರಿನ ಬ್ಯಾಂಕಿನ ಕಡೆ ನೋಡುತ್ತ ಸ್ವಲ್ಪ ಹೊತ್ತು ಕಾಲ ಕಳೆದನು. ಅನಂತರ ಪ್ರವಾಸಿಗಳ ಹಾಗೂ ನಿತ್ಯ ಓಡಾಡುವ ಜನರೊಡನೆ ಬೆರೆತು ಮಾಯವಾಗಿಬಿಟ್ಟನು. ಆ ಪರ್ಸ್ ಮರಳಿ ತನ್ನ ಒಡತಿಯ ಕೈ ಸೇರಲಿಲ್ಲ.

ಈ ಜನರು ಎತ್ತಿಕೊಂಡ ಪರ್ಸ್‌ಗಳು, ರೀಡರ್ಸ್ ಡೈಜೆಸ್ಟಿನವರು ಏಷ್ಯದ ಕೆಲವು ಭಾಗಗಳಲ್ಲಿ ಒಗೆದಂಥವು. ಪ್ರತಿಯೊಂದು ಪರ್ಸಿನಲ್ಲಿ ಸ್ಥಳೀಯ ವ್ಯಕ್ತಿಯೊಬ್ಬನ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ, ಕುಟುಂಬದವರ ಛಾಯಾಚಿತ್ರ, ಕೆಲವು ಕಾಗದಗಳು, ಗುರುತಿನ ಚೀಟಿಗಳ ಜೊತೆಗೆ ಸ್ವಲ್ಪ ನಗದು ಹಣ—(ರೂ. ೩೫೦ ರಿಂದ ಹಿಡಿದು ೧೮೦೦ ರ ವರೆಗೆ) ಸ್ಥಳೀಯ ಚಲಾವಣೆಯ ರೂಪದಲ್ಲಿ ಇಡಲಾಗಿತ್ತು.

ಇಂಥ ೧೮೦ ಪರ್ಸ್‌ಗಳನ್ನು ಏಷ್ಯದ ಅತಿ ಹೆಚ್ಚು ಜನಸಂಖ್ಯೆಯುಳ್ಳ ನೂರು ಮಹಾನಗರಗಳಲ್ಲಿ, ಐದು ದೊಡ್ಡ ಪಟ್ಟಣಗಳಲ್ಲಿ ಮತ್ತು ಆರು ಸಣ್ಣ ಸಮುದಾಯಗಳಲ್ಲಿ—ಪ್ರತಿಯೊಂದು ಊರಲ್ಲಿ ೧೦ ಪರ್ಸ್‌ಗಳನ್ನು—ಒಗೆದು ನೋಡಲಾಯಿತು. ಕೆಲವನ್ನು ಕಾಲ್ದಾರಿಗಳಲ್ಲಿ, ಅಂಗಡಿಗಳ ಸಂಕೀರ್ಣಗಳಲ್ಲಿ, ಆಸ್ಪತ್ರೆಗಳಲ್ಲಿ, ಫಲಾಹಾರ ಕೇಂದ್ರಗಳಲ್ಲಿ, ಪೊಲೀಸ್ ಠಾಣೆಗಳ ಹತ್ತಿರ, ರಾಷ್ಟ್ರಪತಿ ಭವನದ ಹತ್ತಿರ ಹಾಗೂ ಅಂಚೆ ಕಛೇರಿಯ ಹತ್ತಿರ ಕೆಡವಲಾಯಿತು. ಮತ್ತೆ ಕೆಲವನ್ನು ಮಂದಿರಗಳಲ್ಲಿ, ಪವಿತ್ರಸ್ಥಳಗಳಲ್ಲಿ, ಚರ್ಚ್‌ಗಳಲ್ಲಿ ಮತ್ತು ಮಸೀದಿಗಳಲ್ಲಿ ಕೆಡವಲಾಯಿತು. ಇನ್ನೂ ಕೆಲವನ್ನು ಗ್ರಂಥಾಲಯ, ಸಂಗ್ರಹಾಲಯ ಮತ್ತು ವಿಶ್ವವಿದ್ಯಾನಿಲಯದ ಪ್ರವಚನ ಕೋಣೆಗಳಲ್ಲಿ ಒಗೆದರು. ಅನಂತರ ಜನರ ಪ್ರತಿಕ್ರಿಯೆಗಾಗಿ ಕಾಯತೊಡಗಿದರು. ಯಾರಾದರೂ ಹುಡುಕಿ ತಂದು ಕೊಟ್ಟರೆ ಪರ್ಸಿನೊಳಗಿನ ಹಣವನ್ನೇ ಆ ವ್ಯಕ್ತಿಗೆ ಪ್ರತಿಫಲವಾಗಿ ನೀಡಲಾಯಿತು.

ಇದು ಅಚ್ಚುಕಟ್ಟಾದ ವೈಜ್ಞಾನಿಕ ಅಧ್ಯಯನವೊಂದಾಗಿರಲಿಲ್ಲವಾದರೂ ನಿಜ-ಜೀವನದಲ್ಲಿನ ಪ್ರಾಮಾಣಿಕತೆಯ ಪರೀಕ್ಷೆಯಾಗಿತ್ತು. ಸಾಮಾನ್ಯವಾಗಿ ಮಹಾನಗರಗಳಲ್ಲಿರುವ ಜನರಿಗಿಂತಲೂ ಸಣ್ಣ ಸಮೂಹಗಳಲ್ಲಿನ ಜನರು ತಮಗೆ ದೊರೆತ ಪರ್ಸ್‌ಗಳನ್ನು ಮರಳಿಸುತ್ತಾರೆಯೆ? ಏಷಿಯಾದ ವ್ಯಾಪಾರಿ ಕೇಂದ್ರಗಳಲ್ಲಿರುವ ಶ್ರೀಮಂತರು, ಓಣಿಗಳಲ್ಲಿ ಕಷ್ಟಪಡುವ ಜನರಿಗಿಂತಲೂ ಹೆಚ್ಚು ಪ್ರಾಮಾಣಿಕರಾಗಿರುತ್ತಾರೆಯೆ? ಗಂಡಸರಿಗಿಂತಲೂ ಹೆಂಗಸರು ಪ್ರಾಮಾಣಿಕರಾಗಿರುತ್ತಾರೆಯೆ? ತರುಣರಿಗಿಂತಲೂ ವೃದ್ಧರು ಪ್ರಾಮಾಣಿಕರೆ? ಎರಡು ದೇಶಗಳ ಜನರ ಪ್ರಾಮಾಣಿಕತೆಯಲ್ಲಿ ಅಂತರವುಂಟೆ?

ನಮ್ಮ ಪ್ರತಿಯೊಂದು ಪರ್ಸಿನ ಹಿಂದೆ ಒಂದು ಕಥೆ ಇದೆ. ಕೆಲವು ಪರ್ಸ್‌ಗಳ ಕಥೆಯಲ್ಲಿ ನೇರವಾಗಿ ಕಳ್ಳತನವಿದ್ದರೆ ಮತ್ತೆ ಕೆಲವು ಕಥೆಗಳಲ್ಲಿ ಚಪಲ ಹಾಗೂ ಪಾಪಪ್ರಜ್ಞೆ ಇತ್ತು. ಆದರೆ ಬಹಳಷ್ಟು ಪ್ರಸಂಗಗಳಲ್ಲಿ ಜನರಲ್ಲಿನ ಪ್ರಾಮಾಣಿಕತೆಯ ಅಂಶ ಗಮನಕ್ಕೆ ಬಂತು. ಏಷಿಯಾದ ಕೆಲವು ಸ್ಥಳಗಳಲ್ಲಿ ನಡೆಸಲಾದ "ಪರ್ಸ್ ಕಳೆದುಕೊಳ್ಳುವ" ಸಾಹಸಗಾಥೆಯ ಪರಿಣಾಮ ಹೀಗಿದೆ:

ಮಹಾನಗರಗಳು
(೧೦ ದಶಲಕ್ಷಕ್ಕೂ ಹೆಚ್ಚಿರುವ ಜನಸಂಖ್ಯೆ)

ನಗರ	ಮರಳಿಸಿದವರ ಸಂಖ್ಯೆ	ಮರಳಿಸದವರ ಸಂಖ್ಯೆ
ಸೋಲ್	೬	೪
ಮುಂಬಯಿ	೫	೫
ಮೆಟ್ರೊ ಮನಿಲಾ	೪	೬

ದ. ಕೊರಿಯಾದ ಕಛೇರಿಗಳು ಭ್ರಷ್ಟಾಚಾರಕ್ಕೆ ಹೆಸರಾಗಿವೆ. ಈ ಭ್ರಷ್ಟಾಚಾರವನ್ನು ಕೊನೆಗಾಣಿಸುವ ಪ್ರತಿಜ್ಞೆಯಿಂದ ಅಧ್ಯಕ್ಷ ಕಿಮ್ ಯಾಂಗ್ ಸ್ಯಾಮನ ಸರ್ಕಾರ ಅಧಿಕಾರಕ್ಕೆ ಬಂತು. ಅನೇಕ ರಾಜಕಾರಣಿಗಳು ಮತ್ತು ಉದ್ಯಮಿಗಳು ತಪ್ಪಿತಸ್ಥರೆಂಬುದು ಗೊತ್ತಿದೆ. ಆದರೂ ಸೋಲ್‌ನಲ್ಲಿನ, ಉಸಿರುಗಟ್ಟುವಂಥ ಒಂದು ಮಧ್ಯಾಹ್ನದ ಅನುಭವ ಈ ದೇಶದ ಭವಿಷ್ಯಕ್ಕೆ ನಾಂದಿಯಾಗುವುದರಲ್ಲಿ ಸಂದೇಹವಿಲ್ಲವೆಂದೆನಿಸುತ್ತದೆ. ರಾಷ್ಟ್ರಾಧ್ಯಕ್ಷರ ಅರಮನೆ—ಬ್ಲೂ ಹೌಸ್‌ನ ಒಂದು ಬದಿಯಿಂದ ಶಾಲೆಗೆ ಹೋಗುತ್ತಿದ್ದ ನಾಲ್ಕು ಬಾಲಕಿಯರಿಗೆ ಒಂದು ಪರ್ಸ್ ದಾರಿಯಲ್ಲೆ ಬಿದ್ದದ್ದು ಕಾಣಿಸಿತು. ಬಿಳಿ ಚಡ್ಡಿ ಹಾಗೂ ಕುಪ್ಪಸ, ಕಾಲಲ್ಲಿ ನೀಲಿ ಕಾಲು ಚೀಲ ಧರಿಸಿದ್ದ ೧೦ ವರ್ಷದ ಈ ಬಾಲಕಿಯರು ಹತ್ತಿರದ ಚೊಂಗ್ ಪೂನ್ ಎಲಿಮೆಂಟರಿ ಶಾಲೆಯ ವಿದ್ಯಾರ್ಥಿನಿಯರು. ಆ ಪರ್ಸನ್ನು ಮೊದಲು ಎತ್ತಿಕೊಂಡಿದ್ದ ಕಿಮ್ ಸೂಜಿ "೪೦,೦೦೦ ವೂನ್ !" ಎಂದು ಕೂಗಿದಳು. ಇದು ಸುಮಾರು ೧೪೦೦ ರೂಪಾಯಿಗೆ ಸಮನಾದ ಹಣವಾಗಿತ್ತು. "ಇಷ್ಟೊಂದು ಹಣ! ನಾವು ಯಾರನ್ನಾದರೂ ಕಂಡು, ಇವನ್ನೇನು ಮಾಡಬೇಕೆಂದು ಕೇಳೋಣ" ಎಂದಳು. ಇನ್ನೊಬ್ಬ ಬಾಲಕಿ ಹತ್ತಿರದಲ್ಲಿದ್ದ ಅಗ್ನಿಶಾಮಕ ದಳದ ಕೇಂದ್ರವನ್ನು ಪೋಲಿಸ್ ಠಾಣೆಯೆಂದು ತಿಳಿದು ಅದರೊಳಗೆ ಹೊರಟಳು. "ತಪ್ಪು ! ತಪ್ಪು !" ಎಂದು ಆಕೆಯ ಗೆಳತಿಯರು ನಗುತ್ತ ಹೇಳಿ, ಚೊಂಗನ್ ಪೋಲಿಸ್ ಠಾಣೆಯ ಕಡೆ ನಡೆದರು.

"ನಾವು ಈ ಪರ್ಸನ್ನು ಅದರ ಒಡೆಯನಿಗೆ ಆದಷ್ಟು ತೀವ್ರ ತಲುಪಿಸಬೇಕೆಂಬುದನ್ನು ಮಾತ್ರ ಯೋಚಿಸಿದೆ" ಎಂದು ಜಾಂಗ್–ಯಾ–ಜಿನ್ ಹೇಳುತ್ತಿದ್ದಂತೆ ಅವಳ ಗೆಳತಿ ಅದನ್ನು ಅನುಮೋದಿಸುವಂತೆ ತಲೆ ಅಲ್ಲಾಡಿಸಿದಳು. "ನಿಜವಾಗಿಯೂ ಅದು ನಮ್ಮದಾಗಿರಲಿಲ್ಲ" ಎಂದು ಹೊಂಗ್–ಸೊ–ಹಿ ಹೇಳಿದಳು. "ನಾವು ಪ್ರಾಮಾಣಿಕರಾಗಿರಬೇಕೆಂದು ಜೀಸಸ್ ಹೇಳಿದ್ದಾನೆ" ಎಂದು ಕಿಮ್ ಹಾಯಾಂಗ್ ಹೇಳಿದಳು. "ಒಂದು ಸಣ್ಣ ಸುಳ್ಳು ಕೊನೆಗೆ ದೊಡ್ಡ ಸುಳ್ಳಾಗುತ್ತದೆಂದು ನನ್ನ ತಂದೆ ತಾಯಿ ಹೇಳಿದ್ದಾರೆ" ಎಂದು ಕಿಮ್ ಸೂಜಿ ಮಾತು ಮುಂದುವರೆಸಿದಳು.

೧೦.೬ ದಶಲಕ್ಷ ಜನಸಂಖ್ಯೆಯಿರುವ ಸೋಲ್, ನಾವು ಪ್ರವಾಸಕ್ಕೆಗೊಂಡ ಅತಿ ದೊಡ್ಡ ಹಾಗೂ ಅತಿ ಶ್ರೀಮಂತ ನಗರಗಳಲ್ಲೊಂದಾಗಿತ್ತು. ನಮ್ಮ ಈ ಪರೀಕ್ಷಾಕ್ರಮ ವಕ್ರವಾಗದಿರಲೆಂದು, ನಾವು ಮುಂಬಯಿ ಮತ್ತು ಮನಿಲಾ ನಗರಗಳಲ್ಲಿ ಒಗೆದ ಪರ್ಸ್‌ಗಳಲ್ಲಿ ಸ್ವಲ್ಪ ಕಡಿಮೆ ಹಣ ಇಟ್ಟಿದ್ದೆವು. ಏಕೆಂದರೆ ಟೋಕಿಯೊದಂಥ ನಗರದಲ್ಲಿ ರೂ. ೧೪೦೦ಕ್ಕೆ ಇಬ್ಬರಿಗೆ ಮಾತ್ರ

ವ್ಯವಹಾರಿಕ ಊಟ ದೊರೆಯುತ್ತದೆ. ಆದರೆ ಇದೇ ಹಣ ಭಾರತದಲ್ಲಿ ಒಬ್ಬ ವ್ಯಕ್ತಿಯ ಒಂದು ತಿಂಗಳಿನ ಗಳಿಕೆಯಾಗಿದೆ.

ಈ ವಿಷಯದ ಬಗ್ಗೆ ನಾವು ತಲೆ ಕೆಡಿಸಿಕೊಂಡಿರಲಿಲ್ಲ. ಏಕೆಂದರೆ ಪರ್ಸ್ ಮರಳಿಸಿದ ಅನೇಕರು ಅದರೊಳಗಿನ ಹಣವನ್ನು ಎಣಿಸಿ ನೋಡಿರಲಿಲ್ಲ. ಉದಾ: ಮನಿಲಾದಲ್ಲಿ ಪರ್ಸ್ ಮರಳಿಸಿದ ಇಬ್ಬರು ವ್ಯಕ್ತಿಗಳಿಗೆ ಅದರೊಳಗೆ ೪೪೦ ಪೆಸೊ (ಸುಮಾರು ೬೬೦ ರೂಪಾಯಿಗೆ ಸಮವಾದ ಹಣ)ಗಳಿದ್ದುದು ತಿಳಿದಿರಲಿಲ್ಲ. "ನಾನು ಹಣದ ಬಗ್ಗೆ ಚಿಂತಿಸುವುದಿಲ್ಲ. ನನಗೆ ಆಹಾರ, ಆಶ್ರಯ ಮತ್ತು ಬಟ್ಟೆ ಇದೆ. ಅದೇ ನನಗೆ ಸಾಕು" ಎಂದು ಗೌತಮ ಪಟೋಲೆ ಎಂಬ ಛಾಯಾಚಿತ್ರಕಾರ ಹೇಳಿದ. ಮುಂಬಯಿಯ ಮಹಾತ್ಮಾಗಾಂಧೀ ರಸ್ತೆಯಲ್ಲಿರುವ ಜಹಾಂಗೀರ ಆರ್ಟ್ ಗ್ಯಾಲರಿಯಲ್ಲಿ ಆತನಿಗೆ ನಮ್ಮ ಪರ್ಸ್ ಸಿಕ್ಕಿತ್ತು. ಆ ನಗರದ ಉಳಿದ ಕೆಲವರಂತೆ ಇವನು ಕೂಡಾ ಮರಳಿಸುವಾಗ ಅದರೊಳಗೆ ೩೫೦ ರೂ. ಗಳಿದ್ದದ್ದನ್ನು ಅವನು ನೋಡಿರಲಿಲ್ಲ. "ನೀವು ಸಾಕಷ್ಟು ಹಣ ಪಡೆದು ಕೂಡಾ ಸಂತೋಷದಿಂದ ಇರಲಿಕ್ಕಿಲ್ಲ ....ಬಡವರು ಕೂಡಾ ಪ್ರಾಮಾಣಿಕರಾಗಿರಲು ಸಾಧ್ಯ...." ಎಂದು ಪಟೋಲೆ ಒತ್ತಿ ಹೇಳಿದ.

ಶ್ರೀಮಂತಿಕೆ ಅಥವಾ ಸಾಮಾಜಿಕ ಸ್ಥಾನಮಾನಕ್ಕೂ ಮತ್ತು ಪ್ರಾಮಾಣಿಕತೆಗೂ ಯಾವ ಸಂಬಂಧವಿಲ್ಲ. ಮುಂಬಯಿಯ ಶ್ರೀಮಂತ ಬಡಾವಣೆಯಾದ ಮಲ್‌ಬಾರ್ ಹಿಲ್ಸ್ ಹತ್ತಿರದ ಹ್ಯಾಂಗಿಂಗ್ ಗಾರ್ಡನ್ಸ್‌ನಲ್ಲಿ ಇಬ್ಬರು ಮಹಿಳೆಯರು—ಒಬ್ಬಾಕೆ ತಾಯಿ, ಇನ್ನೊಬ್ಬಾಕೆ ಅಜ್ಜಿ—ಒಬ್ಬ ಸಣ್ಣ ಹುಡುಗನ ಜೊತೆಗೆ ತಿರುಗಾಡುತ್ತ ಹೊರಟಾಗ ಅವರಿಗೊಂದು ಪರ್ಸ್ ಸಿಕ್ಕಿತು. ದಾರಿಯಲ್ಲಿ, ಸಮವಸ್ತ್ರ ಧರಿಸಿದ ಕೆಲವು ಪೋಲೀಸ್ ಪೇದೆಗಳನ್ನು ನೋಡಿದರು. ಅನಂತರ ಒಬ್ಬ ಹಿರಿಯ ವೃದ್ಧ—ಬಹುಶಃ ಆ ಹುಡುಗನ ಅಜ್ಜನಿರಬೇಕು—ನನ್ನನ್ನು ಭೇಟಿಯಾದರು. ಆ ಚಿಕ್ಕ ಬಾಲಕನಿಗೆ ಪ್ರಾಮಾಣಿಕತೆಯ ಪಾಠವನ್ನು ಕಲಿಸಲು ಇದೊಂದು ಒಳ್ಳೆಯ ಅವಕಾಶವಿತ್ತು. ಆದರೆ ಅವರೆಲ್ಲರೂ ಒಂದು ಸಾರಿಗೆ ಬಸ್ಸನ್ನು ಏರಿ ಹೊರಟುಬಿಟ್ಟರು. ಮತ್ತೆ ಅವರಿಂದ ನಮಗೆ ಯಾವ ಕರೆಯೂ ಬರಲಿಲ್ಲ.

ಮನಿಲಾದಲ್ಲಿ ಬೀಡಿ ಸಿಗರೇಟುಗಳನ್ನು ರಸ್ತೆಯಲ್ಲಿ ಮಾರುವವನೊಬ್ಬನಿಗೆ, ನಿನೊಯ್ ಅಕ್ವಿನೊ (ಹತ್ಯೆಗೀಡಾದ ವಿರೋಧ ಪಕ್ಷದ ನಾಯಕ)ನ ಮೂರ್ತಿಯ ಕಟ್ಟೆಯ ಹತ್ತಿರ ಒಂದು ಪರ್ಸ್ ಸಿಕ್ಕಿತು. ತಾನು ವ್ಯಾಪಾರ ಮಾಡುತ್ತಿದ್ದ ಆ ಓಣಿಯನ್ನು ಬಿಟ್ಟು ಹೊರಟ ಆ ವ್ಯಕ್ತಿ ಮತ್ತೆ ನಮ್ಮ ಕಣ್ಣಿಗೆ ಬೀಳಲಿಲ್ಲ.

ಫಿಲಿಪ್ಪೈನಿನ ಅಧ್ಯಕ್ಷರ ಕಛೇರಿಯಾದ ಮಾಲಕಾನಂಗ್ ಅರಮನೆಯ ಹೊರಗಡೆ, ಖಾಕಿ ಪ್ಯಾಂಟ್ ಧರಿಸಿ ಪುಸ್ತಕದ ಚೀಲ ಹೊತ್ತು ಹೊರಟಿದ್ದ ಇಬ್ಬರು ಶಾಲಾ ಮಕ್ಕಳಿಗೆ ಒಂದು ಪರ್ಸ್ ಸಿಕ್ಕಿತು. ಅವರು ಎಲ್ಲ ಕಡೆ ಕಣ್ಣು ಹಾಯಿಸಿದರು. ಅದರಲ್ಲಿ ಒಬ್ಬನು ಆ ಪರ್ಸನ್ನು ಎತ್ತಿಕೊಂಡು ತನ್ನ ಜೇಬಿಗೆ ಸೇರಿಸಿದನಲ್ಲದೆ, ಇಬ್ಬರೂ ಸದ್ದು ಮಾಡದೆ ಅಲ್ಲಿಂದ ಹೊರಟುಹೋದರು.

ಏಷಿಯಾದ ಅನೇಕ ದೇಶಗಳಲ್ಲಿ ಪೋಲೀಸರ ಪ್ರಾಮಾಣಿಕತೆಯ ಬಗ್ಗೆ ಅಷ್ಟೊಂದು ಒಳ್ಳೆಯ ಅಭಿಪ್ರಾಯವಿಲ್ಲ. ಮುಂಬಯಿಯ

ಕೊಲಾಬಾ ಪೊಲೀಸ್ ಠಾಣೆಯಲ್ಲಿ ಮತ್ತು ಮನಿಲಾದ ಫಿಲಿಪೈನ್ ರಾಷ್ಟ್ರೀಯ ಪೊಲೀಸ್ ಮುಖ್ಯ ಕಛೇರಿಯಲ್ಲಿ ಒಂದೊಂದು ಪರ್ಸನ್ನು ಕೆಡವಿದೆವು. ಈ ಎರಡೂ ಸ್ಥಳಗಳಲ್ಲಿನ ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಿಸಿದರು. ಮುಖ್ಯ ವ್ಯಕ್ತಿಗಳ ರಕ್ಷಣಾ ವಿಭಾಗದ ಫಿಲಿಪಿನೊ ಅಧಿಕಾರಿ ಮೊನೊಲಿಟೊರೇಸ್ (೫೧), ಅದನ್ನೆತ್ತಿಕೊಂಡು, ನೇರವಾಗಿ ನಡೆದು ಎದುರಿನ ಮೇಜಿನ ಮುಂದೆ ಕುಳಿತಿದ್ದ ಅಧಿಕಾರಿಯ ಕೈಗಿತ್ತನು. ಹೀಗೇಕೆ ನಿರ್ಧರಿಸಿದೆ ಎಂದು ಕೇಳಿದಾಗ ಅವನು "ಅದು ನನ್ನ ಚಾರಿತ್ರ್ಯದ ವಿಷಯ. ಪ್ರತಿಯೊಬ್ಬನೂ ಈ ರೀತಿ ಸಿಕ್ಕ ಹಣದ ಪರ್ಸನ್ನು ಮರಳಿಸಲಿಕ್ಕಿಲ್ಲ. ನನಗೆ ಮಾತ್ರ ಅದು ಸುಲಭವಾಗಿತ್ತು" ಎಂದು ಭುಜ ಹಾರಿಸುತ್ತ ಹೇಳಿದ.

ಮುಖ್ಯ ನಗರಗಳು
(೧.೫ ದಶಲಕ್ಷದಿಂದ ೭ ದಶಲಕ್ಷ ಜನಸಂಖ್ಯೆ)

ನಗರ	ಮರಳಿಸಿದವರ ಸಂಖ್ಯೆ	ಮರಳಿಸದವರ ಸಂಖ್ಯೆ
ಸಿಂಗಪೂರ್	೯	೧
ಇಂಚೊನ್, ಕೋರಿಯಾ	೮	೨
ಟೈಪೆ	೫	೫
ಬ್ಯಾಂಕಾಕ್	೫	೫
ಹಾಂಗ್‌ಕಾಂಗ್	೩	೭

ಸಿಂಗಪೂರಿನಲ್ಲಿ ಚಿವಿಂಗಮ್ ಮಾರುವುದನ್ನು ನಿಷೇಧಿಸಲಾಗಿದೆ ಮತ್ತು ವಿಧ್ವಂಸಕ ಕೃತ್ಯಗಳಲ್ಲಿ ತೊಡಗುವ ಯುವಕರನ್ನು ಬೆತ್ತದಿಂದ ಥಳಿಸಲಾಗುತ್ತದೆ. ಹೀಗಿದ್ದಾಗ ಕಳೆದ ಪರ್ಸ್‌ಗಳನ್ನು ಜನರು ಮರಳಿಸುತ್ತಾರೆಂದು ಯಾರಾದರೂ ಆಶಿಸುತ್ತಾರೆ. ಅಲ್ಲಿ ನಡೆದದ್ದು ಕೂಡಾ ಇದೇ ಆಗಿದೆ.

ಜಾಸ್ಮಿನ್ ಬಿನ್ ಅಬ್ದುಲ್ ರಷೀದ್ ಎಂಬ ೩೯ ವರ್ಷದ ದೂತನ ಪ್ರತಿ ತಿಂಗಳಿನ ಗಳಿಕೆ $ ೮೬೨ (೨೨೦೦೦ ರೂ.ಗಳು). ಸಿಂಗಪೂರ್ ಮುಖ್ಯ ಬೀದಿಯಲ್ಲಿನ ಸಿ ಆನ್ ಸಿಟಿ ವ್ಯಾಪಾರ ಕೇಂದ್ರದ ಬದಿಯಿಂದ ಹೋಗುತ್ತಿದ್ದಾಗ ದೊರೆತ ಪರ್ಸಿನಲ್ಲಿ ೭೦ ಸಿಂಗಪೂರ್ ಡಾಲರ್ ಇದ್ದವು. ಅದನ್ನು ಅವನು ಬಳಸಬಹುದಾಗಿತ್ತು. ಆದರೆ ಅವನು ಮಾತ್ರ ಕೂಡಲೇ ಹತ್ತಿರದ ಮಾಹಿತಿ ಕೇಂದ್ರಕ್ಕೆ ಹೋಗಿ ಪರ್ಸನ್ನು ಕೊಟ್ಟನು. ಬೆಳೆದ ಒಬ್ಬ ತರುಣ ಮಗ ಹಾಗೂ ಮಗಳ ತಂದೆಯಾದ ರಷೀದ್ "ದುಡ್ಡಿದ್ದರೆ ಒಳ್ಳೆಯದು. ಆದರೆ ಅದು ತಪ್ಪೆಂಬುದು ನನಗೆ ಗೊತ್ತಿತ್ತು. ಅದು ನನ್ನದಾಗಿರಲಿಲ್ಲವಲ್ಲ...." ಎಂದು ಹೇಳಿದನು.

ತಂತ್ರಜ್ಞಾನದ ಉದ್ಯಮವೊಂದರಲ್ಲಿ ಲೆಕ್ಕದ ಅಧಿಕಾರಿಯಾಗಿದ್ದ ರೊನಿ ಲೀಗೆ ಹಣದ ಕೊರತೆ ಇರಲಿಲ್ಲ. ಆದರೆ ಇತರರಿಗೆ ಅದರ ಕೊರತೆ ಇರುತ್ತದೆಂದು ಅವನಿಗೆ ಗೊತ್ತು. ೩೨ ವರ್ಷದ ಬ್ರಹ್ಮಚಾರಿ ಲೀಗೆ ಇಂಥ ಒಂದು ಪರ್ಸ್, ಸಿಂಗಪೂರಿನ ಹಣಕಾಸು ಸಂಸ್ಥೆಯ ಹತ್ತಿರ ಸಿಕ್ಕಿತು. ತನ್ನ ಮಧ್ಯಾಹ್ನದ ಊಟ ಮುಗಿಯುವವರೆಗೆ ತಡೆದು, ಆ ಹೊಟೆಲ್ಲಿನ ದೂರವಾಣಿಯನ್ನು ಬಳಸಿ ತನಗೆ ಸಿಕ್ಕ ಪರ್ಸ್ ಬಗ್ಗೆ ದೂರು ನೀಡಿದನು. "ಪರ್ಸ್ ಕಳೆದುಕೊಂಡ ವ್ಯಕ್ತಿಯ ಸ್ಥಿತಿಯಲ್ಲಿ ನನ್ನನ್ನಿರಿಸಿಕೊಂಡೆ" ಎಂದು ಹೇಳಿದನು.

ಹಾಂಗ್‌ಕಾಂಗಿನಲ್ಲಿ ಮಾತ್ರ ಇಡೀ ಏಷಿಯಾದಲ್ಲಿಯೇ ಮರಳಿಸಿದವರ ಸಂಖ್ಯೆ

ಗಿಂತ ಅತಿ ಕಡಿಮೆಯದಾಗಿತ್ತು; ಹತ್ತರಲ್ಲಿ ಮೂವರು ಮಾತ್ರ ಮರಳಿಸಿದ್ದರು. ಕ್ಯಾಲಿಫೋರ್ನಿಯಾದಲ್ಲಿ ಓದುತ್ತಿದ್ದು ಹಾಂಗ್‌ಕಾಂಗಿನಲ್ಲಿದ್ದ ತನ್ನ ತಂದೆತಾಯಿಗಳನ್ನು ಕಾಣಲು ಬಂದಿದ್ದ, ೨೪ ವರ್ಷದ ಚಿವು ಪಿಟ್ ಎಂಬ ಯುವಕ ಪರ್ಸ್ ಮರಳಿಸಿದವರಲ್ಲಿ ಒಬ್ಬನಾಗಿದ್ದನು. "ಇದು ನನ್ನ ಪರ್ಸ್ ಅಲ್ಲ. ನಾನು ಯಾವಾಗಲೂ ಸರಿಯಾದದ್ದನ್ನೇ ಮಾಡಬೇಕೆಂದು ನನ್ನ ಗುರುಗಳು ಮತ್ತು ತಂದೆ ತಾಯಿಗಳು ಮೊದಲಿನಿಂದ ಹೇಳಿದ್ದುಂಟು" ಎಂದು ಹೇಳಿದ. ಒಂದು ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದ ೨೦ ವರ್ಷದ ಚೀನೀ ಮಹಿಳೆ ಹಾಗೂ ೨೬ ವರ್ಷದ ಫಿಲಿಪಿನೊ ಕೆಲಸದಾಳು ಉಳಿದ ಎರಡು ಪರ್ಸ್‌ಗಳನ್ನು ಮರಳಿಸಿದ ವ್ಯಕ್ತಿಗಳಾಗಿದ್ದರು.

ಬ್ರಿಟಿಷ್ ಕಾಲೊನಿಗೆ ಬಂದಿದ್ದ ಅವು ಸಾಲ ವ್ಯಾಡರ್ ದೃಷ್ಟಿಯಲ್ಲಿ ಹಾಂಗ್‌ಕಾಂಗಿನಲ್ಲಿ ಅವಳು ಪ್ರತಿ ತಿಂಗಳು ಗಳಿಸುತ್ತಿದ್ದ ಹೆಚ್‌ಕೆ $ ೩೭೫೦ (ರೂ.೧೬೨೦೦). ಅವಳು ತನ್ನ ಹುಟ್ಟೂರಲ್ಲಿ ಗಳಿಸಬಹುದಾದ ಹಣಕ್ಕಿಂತ ಹೆಚ್ಚಿನದಾಗಿತ್ತು. ಮಧ್ಯಾಹ್ನದ ಊಟಕ್ಕೆ ಹೋಗುವ ಮುನ್ನ ನಡೆಯುವ ಪ್ರಾರ್ಥನಾ ಸಭೆಗೆ ಬಹಳ ಅವಸರದಿಂದ ಹೊರಟಾಗ ಚೌಕದ ಹತ್ತಿರ ಅವಳಿಗೆ ಪರ್ಸ್ ಸಿಕ್ಕಿತು. ಬಹಳಷ್ಟು ಸಮಯದ ನಂತರ ಅದನ್ನು ಮರಳಿಸಲು ಅವಳೊಂದು ಬಸ್ ಹತ್ತಿದಳು. ಆ ಪರ್ಸಿನಲ್ಲಿ ಹೆಚ್‌ಕೆ $ ೩೮೦ (ರೂ. ೧೮೦೦)—ಅವಳ ಎರಡೂವರೆ ದಿನಗಳ ಗಳಿಕೆಗೆ ಸಮನಾದಷ್ಟು—ಹಣವಿತ್ತು. "ನಾನು ಆ ಪರ್ಸ್‌ನಲ್ಲಿದ್ದ ಛಾಯಾಚಿತ್ರ ಮತ್ತು ಸಮಾಚಾರ ಪತ್ರಿಕೆಯಲ್ಲಿ ಬಂದಿದ್ದ ಜಾಹಿರಾತಿನ ತುಂಡನ್ನು ಕಂಡೆ. "ಈ ಮಹಿಳೆಗೆ ಒಂದು ಮಗು ಇದೆ. ಅವಳು ಕೆಲಸ ಹುಡುಕುತ್ತಿದ್ದಾಳೆ. ಅವಳಿಗೆ ಹಣದ ಅವಶ್ಯಕತೆ ಇದೆ" ಎಂದು ನನಗೆನಿಸಿತು. ನನ್ನ ಪಾಲಿಗೂ ಹಣ ಅಷ್ಟೇ ಮುಖ್ಯವಾಗಿದೆ. ಆದರೆ, ಯಾವುದು ನನ್ನ ಹಣವಲ್ಲವೊ ಅದನ್ನು ನನ್ನ ಹತ್ತಿರ ಇಟ್ಟುಕೊಳ್ಳುವ ಹಕ್ಕು ನನಗಿಲ್ಲವೆಂಬ ಪಾಠವನ್ನು ನನಗೆ ಕಲಿಸಿಕೊಡಲಾಗಿದೆ" ಎಂದು ಅವಳು ವಿವರಿಸಿದಳು.

ಇನ್ನೊಂದು ಆಶ್ಚರ್ಯದ ಸಂಗತಿಯೆಂದರೆ ಹಾಂಗ್‌ಕಾಂಗ್‌ನಲ್ಲಿ ನೆಲದ ಮೇಲೆ ಬಿದ್ದಿದ್ದ ಪರ್ಸ್‌ಗಳನ್ನು ಕಂಡ ಬಹಳಷ್ಟು ಜನರು ಉದ್ದೇಶಪೂರ್ವಕವಾಗಿ ಮುಂದೆ ನಡೆದು ಹೋದರು. ಇದಕ್ಕೆ ವ್ಯತಿರಿಕ್ತವಾಗಿ, ದಕ್ಷಿಣ ಕೋರಿಯಾದ ಎರಡನೇ ದೊಡ್ಡ ಬಂದರು ಪಟ್ಟಣವಾದ ಇಂಕಾನಿನ ಹತ್ತಿರದಲ್ಲಿ ಎಂಟು ಪರ್ಸ್‌ಗಳನ್ನು ಕೂಡಲೇ ಮರಳಿಸಿದ್ದರು. ೪೪ ವರ್ಷದ ಮುನ್‌ಹ್ವಾಂಗ್ ಸಿಓಕ್ ಎಂಬ ಸರ್ಕಾರಿ ನೌಕರನಿಗೆ ಅಂಚೆ ಕಛೇರಿಯ ಆವರಣದಲ್ಲೊಂದು ಪರ್ಸ್ ಸಿಕ್ಕಿತು. ಅವನು ಕೂಡಲೇ ರಸ್ತೆಯ ಇನ್ನೊಂದು ಬದಿಯಲ್ಲಿದ್ದ ತನ್ನ ಪರಿಚಯದ ರಕ್ಷಕ ದಳದ ಅಧಿಕಾರಿಗೆ ಅದನ್ನು ಒಪ್ಪಿಸಿದ. ಬೌದ್ಧಮತದ ಮುನ್ "ನಾನು ನನ್ನ ಮಕ್ಕಳಿಗೆ ಪ್ರಾಮಾಣಿಕರಾಗಿರಲು ಹೇಳಿಕೊಡುತ್ತೇನೆ....ಸುಳ್ಳು ಜನರೆಂದರೆ ನನಗೆ ಬಲು ತಿರಸ್ಕಾರ...."ಎಂದು ಹೇಳಿದ.

ಟೈಪೆ ಪಟ್ಟಣದ ಫಾರ್ಮೊಸಾ ಪ್ಲಾಸ್ಟಿಕ್ ಕಟ್ಟಡದ ಹತ್ತಿರದ ಬಸ್ ನಿಲ್ದಾಣದಲ್ಲಿ ಒಬ್ಬ ಬಡಕಲು ವೃದ್ಧನಿಗೆ ನಮ್ಮ ಒಂದು ಪರ್ಸ್ ಸಿಕ್ಕಿತು. ಒಂದೆರಡು ಸಲ ಅವನು

ತನ್ನ ಸುತ್ತ ಕಣ್ಣು ಹಾಯಿಸಿದ. ಅನಂತರ ಆ ಪರ್ಸನ್ನು ತನ್ನ ಜೇಬಿಗೆ ಸೇರಿಸಿಕೊಂಡು ಬಸ್ ಏರಿ ಹೋಗಿಬಿಟ್ಟನು. ಅವನಾಗಲಿ ಅಥವಾ ಪರ್ಸ್ ಆಗಲಿ ಮತ್ತೆ ನಮಗೆ ಕಾಣಸಿಗಲಿಲ್ಲ. ಆದರೆ ಅಲ್ಲಿಂದ ಅಷ್ಟೇನೂ ದೂರವಿರದ ಚಾಂಗ್‌ಗಂಗ್ ಆಸ್ಪತ್ರೆಯ ಆವರಣದಲ್ಲಿನ ದೂರವಾಣಿಯ ಹತ್ತಿರ ಬಿದ್ದಿದ್ದ ಪರ್ಸ್ ಎಚ್. ಸಿ. ಚಿವು ಎಂಬ ಮಹಿಳೆಯ ಕಣ್ಣಿಗೆ ಬಿತ್ತು. ತನ್ನ ಗೆಳತಿಗಾಗಿ ತುಂಬುತ್ತಿದ್ದ ಕಾಗದಗಳನ್ನು ಬದಿಗೊತ್ತಿ ಆ ಪರ್ಸನ್ನು ಆಸ್ಪತ್ರೆಯ ಸ್ವಾಗತ ಅಧಿಕಾರಿಗೆ ಕೊಟ್ಟು ತನ್ನ ಕೆಲಸ ಮುಂದುವರೆಸಿದಳು. ಬೌದ್ಧ ಮತದಲ್ಲಿ ಅಚಲ ನಂಬಿಕೆಯುಳ್ಳ ಹಾಗೂ ನಾಲ್ಕು ಬೆಳೆದ ಮಕ್ಕಳ ತಾಯಿಯಾದ ಚಿವು "ಒಂದು ಒಳ್ಳೆಯ ಕೆಲಸ ಮಾಡುವುದು ನನ್ನ ಕರ್ತವ್ಯ.... ನಾನು ಮಾಡಿದ ಈ ಕೆಲಸ ಸರಿಯಾದದ್ದೇ ...." ಎಂದು ಹೇಳಿದಳು.

ಬ್ಯಾಂಕಾಕಿನಲ್ಲಿರುವ ಥೈಲೆಂಡಿನ ಅತಿ ದೊಡ್ಡ ಹಣಕಾಸು ಸಂಸ್ಥೆಗಳಲ್ಲೊಂದಾಗಿರುವ ಕಿಯಾಟ್ನಾಕಿನ್ ಕಂಪೆನಿಯಲ್ಲಿ ಸಹಾಯಕ ವ್ಯವಸ್ಥಾಪಕ ನಿರ್ದೇಶಕನೊಬ್ಬನಿಗೆ, ಎವರ್ನ್ ಗ್ರ್ಯಾಂಡ್ ಹ್ಯಾಟ್ ಎಂಬ ಮಳಿಗೆಗಳ ಸಂಕೀರ್ಣದ ಆವರಣದಲ್ಲಿ, ಒಂದು ಪರ್ಸ್ ಸಿಕ್ಕಿತು. ಸಿನೀನಾಥ ತೇಜಗುಪ್ತಾ ತನ್ನ ಸಹಾಯಕನೊಬ್ಬನನ್ನು ಕರೆದು, ಆ ಪರ್ಸನ್ನು ಹತ್ತಿರದ ಉಪಹಾರ ಮಂದಿರದ ವ್ಯವಸ್ಥಾಪಕನಿಗೆ ಕೊಡುವಂತೆ ಹೇಳಿದ. "ಆ ಪರ್ಸ್ ಬೇರೊಬ್ಬರದು ಮತ್ತು ಅದನ್ನು ಮರಳಿಸಬೇಕೆಂದು ನನಗೆ ಆಗ ಅನಿಸಿತು" ಎಂದು ಹೇಳಿದಳು.

ಬ್ಯಾಂಕಾಕಿನ ಅಷ್ಟೊಂದು ಶ್ರೀಮಂತ ಪ್ರದೇಶವೆನಿಸದಂಥ ಪ್ಯಾಟಪಾಂಗ್ ರಸ್ತೆ ಮೇಲಿನ ನೈಟ್‌ಕ್ಲಬ್ ಹೊರಗೆ ಒಬ್ಬ ಟ್ರಕ್ ಚಾಲಕನಿಗೆ ನಮ್ಮ ಒಂದು ಪರ್ಸ್ ಸಿಕ್ಕಿತು. ಅವನು ಒಂದೆರಡು ಸಲ ಎರಡೂ ಬದಿಗೆ ಕಣ್ಣು ಹಾಯಿಸಿ, ಆ ಪರ್ಸನ್ನು ತನ್ನ ಜೇಬಿನಲ್ಲಿ ತುರುಕಿಕೊಂಡು ಟ್ರಕ್ಕಿನಲ್ಲಿ ಕುಳಿತು ಹೋಗಿಬಿಟ್ಟನು.

ಸಣ್ಣ ಪಟ್ಟಣಗಳು

(೮,೫೦,೦೦೦ಕ್ಕೂ ಕಡಿಮೆ ಜನಸಂಖ್ಯೆ)

ಪಟ್ಟಣ	ಮರಳಿಸಿದವರ ಸಂಖ್ಯೆ	ಮರಳಿಸದವರ ಸಂಖ್ಯೆ
ತಿರುವನಂತಪುರಂ (ಭಾರತ)	೮	೨
ಕಾಯಕುರಾ (ಜಪಾನ್)	೭	೩
ಚಿಯಾಂಗ್ ಮೈ (ಥೈಲ್ಯಾಂಡ್)	೬	೪
ಕಜಾಂಗ್ (ಮಲೇಶಿಯಾ)	೫	೫
ತೈನಾನ್ (ಟೈವಾನ್)	೫	೫
ಲಾಪು–ಲಾಪುನಗರ (ಫಿಲಿಪೈನ್ಸ್)	೪	೬

ಅತಿ ಹೆಚ್ಚು ಅಕ್ಷರಸ್ಥರಿರುವ ಹಾಗೂ ಸುಮಾರು ೨೦೦೦ ವರ್ಷಗಳಿಂದ ಬೇರೆ ಬೇರೆ ಸಂಸ್ಕೃತಿಗಳ ಪ್ರಭಾವಕ್ಕೊಳಗಾದ ಪರಂಪರೆಯ ಕೇರಳದ ರಾಜಧಾನಿಯಾದ ತಿರುವನಂತಪುರಮ್, ಪ್ರತಿಭಾವಂತ

ಹಾಗೂ ಪ್ರಾಮಾಣಿಕ ನಾಗರಿಕರ ತಾಣವಿರಬೇಕೆಂದು ನಮ್ಮ ಎಣಿಕೆಯಾಗಿತ್ತು. ಆದರೆ ನಮ್ಮ ಎಣಿಕೆ ತಪ್ಪಾಗಿರಲಿಲ್ಲವೆಂಬುದು ಸಿದ್ಧವಾಯಿತು ಕೂಡಾ. ಸದಾ ಚಟುವಟಿಕೆಯಲ್ಲಿರುವ ಈ ಪಟ್ಟಣದಲ್ಲಿ ಕೆಡವಿದ ಹತ್ತು ಪರ್ಸ್‌ಗಳಲ್ಲಿ ಎಂಟು ಮರಳಿ ಬಂದವು. ಜಾರ್ಜ್ ಮ್ಯಾಥಿವ್ (೧೯) ತಿರುವನಂತಪುರದ ಒಂದು ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿ. ತನ್ನ ತಂದೆ ಪ್ರತಿ ತಿಂಗಳು ಕಳಿಸುವ ೨೦೦೦ ರೂಪಾಯಿಯಲ್ಲಿ ಅವನು ತನ್ನ ಜೀವನ ನಡೆಸುತ್ತಿದ್ದಾನೆ. ಯುವಕರ ನಿಲಯದ ಮೆಟ್ಟಲುಗಳ ಮೇಲೆ ಅವನಿಗೆ ಪರ್ಸ್ ಸಿಕ್ಕಿತು. ಆ ಹಣವನ್ನು ಇಟ್ಟುಕೊಳ್ಳುವಂತೆ ಅವನ ಗೆಳೆಯರು ಒತ್ತಾಯಿಸಿದರು. ಅವನು ಒಪ್ಪಲಿಲ್ಲ. "ನನಗೇನೋ ಆಶೆಯಾಯಿತು .... ಈ ತಿಂಗಳು ನನ್ನ ಚೆಕ್ಕು ಬರುವಲ್ಲಿ ತಡವಾಗಿ ನನಗೆ ಅಡಚಣೆಯಾಗಿದೆ.... ಆದರೆ ಬೇರೆ ಯಾರದೋ ಹಣ ನನಗೆ ಬೇಕಿಲ್ಲ...." ಎಂದು ಅವನು ಹೇಳಿದ.

ಜಪಾನಿನ ಕಾಯಾಕುರಾದಲ್ಲಿನ ಯುದ್ಧ ದೇವತೆಯಾದ ಶಿಂಟೊ ಸ್ಮರಣಾರ್ಥ ನಿರ್ಮಿಸಲಾದ, ಹಂಚಿಮನ್ ಪವಿತ್ರಸ್ಥಳದ ಮೆಟ್ಟಲುಗಳ ಹತ್ತಿರ ಬಿದ್ದಿದ್ದ ಒಂದು ಪರ್ಸ್ ಕ್ಯೊಕೊ ಸಕಾಜುಮೆ ಎಂಬ ಸೌಂದರ್ಯ ಪ್ರಸಾಧನಕಾರ್ತಿ (ಸೌಂದರ್ಯ ತಜ್ಞೆ)ಗೆ ದೊರಕಿತು. ಅಂದವಾದ ರೇಷ್ಮೆ ಉಡುಪು ಧರಿಸಿದ್ದ ೪೯ ವರ್ಷದ ಈ ಮಹಿಳೆ ಸುಮಾರು ೩೭ ಮೆಟ್ಟಲುಗಳನ್ನು ಲಗುಬಗೆಯಿಂದ ಏರುತ್ತಿದ್ದಂತೆ, ಆ ಪರ್ಸನ್ನು ಎತ್ತಿ ಹಿಡಿದು "ಯಾರಾದರೂ ಈ ಪರ್ಸನ್ನು ಕಳೆದುಕೊಂಡಿರುವಿರಾ ?" ಎಂದು ಕೂಗುತ್ತ ಹೋದಳು.

ಆ ಪರ್ಸಿನ ಒಡೆಯ ಮೇಲಿರಬೇಕೆಂದು ಅವಳೇಕೆ ಊಹಿಸಿದಳು ? "ಆ ಪರ್ಸ್ ಒಣಗಿತ್ತು, ಹೊರಗೆ ಮಳೆ ಬರುತ್ತಲಿತ್ತು. ಬಹುಶಃ ಅದರ ಒಡೆಯ ಹತ್ತಿರದಲ್ಲಿರಬೇಕೆಂದೆನಿಸಿತು. ಅಲ್ಲದೆ ನಾನು ಮೊದಲನೇ ಸಲ ಏರಿ ಹೋದಾಗ ಅಲ್ಲಿ ಏನೂ ಇರಲಿಲ್ಲ. ಆನಂತರ ಅದು ಅಲ್ಲಿ ಬಿದ್ದಿರಬೇಕೆನಿಸಿತು" ಎಂದು ಅವಳು ಹೇಳಿದಳು.

ಥೈಲ್ಯಾಂಡಿನ ಚಿಯಾಂಗ್ ಮೈ ನಗರ ಬಹಳ ಹುಲುಸಾಗಿರುವ ಸ್ಥಳ. ಆದ್ದರಿಂದ ಇದನ್ನು "ಉತ್ತರದ ಗುಲಾಬಿ" ಎಂದು ಕರೆಯುತ್ತಾರೆ. ಈ ನಗರದ ಗಾಡ್ ಸುವನ್ ಕೇವ್ ಮಾರಾಟ ಕೇಂದ್ರದ ಹತ್ತಿರ ಒಬ್ಬ ಸ್ಥೂಲದೇಹದ ಮಹಿಳೆ ತನ್ನ ಮಗ ಹಾಗೂ ಮಗಳ ಜೊತೆ ಓಡಾಡುತ್ತಿದ್ದಂತೆ, ಆಕೆಯ ಮಗನಿಗೆ ಪರ್ಸ್ ಕಾಣಿಸಿತು. ಆ ತಾಯಿ ಅದನ್ನು ಎತ್ತಿಕೊಂಡು ತನ್ನ ಬ್ಯಾಗಿ ಪ್ಯಾಂಟಿನ ಜೇಬಿಗಿಳಿಸಿದಳು. ಆನಂತರ ತನ್ನ ಎರಡು ಮಕ್ಕಳ ಕೈಹಿಡಿದುಕೊಂಡು ಆ ಮಾರಾಟ ಕೇಂದ್ರದ ಹೊರಗೆ ನಡೆದಳಲ್ಲದೆ, ನಿಲ್ದಾಣದಲ್ಲಿ ಬಂದ ಮೊದಲನೇ ಬಸ್ಸನ್ನೇರಿ ಮಾಯವಾಗಿಬಿಟ್ಟಳು.

ತೈವಾನಿನ ಅತಿ ಪುರಾತನ ಪಟ್ಟಣ ಹಾಗೂ ಎರಡು ಶತಮಾನಗಳಿಂದ ರಾಜಧಾನಿಯಾಗಿರುವ ತೈವಾನಿನಲ್ಲಿ, ನಾಲ್ಕು ಜನರ ಒಂದು ಕುಟುಂಬ ಹುತಾತ್ಮರ ಸ್ಥಳವೊಂದಕ್ಕೆ ಬಂದಿತ್ತು. ತಮ್ಮ ಮೋಟಾರ್ ಸೈಕಲ್ ಏರಿ ಹೊರಡುತ್ತಿದ್ದಂತೆ ಅವರ ಒಂದು ಮಗುವಿಗೆ ನೆಲದ ಮೇಲೆ ಬಿದ್ದಿದ್ದ ಒಂದು ಪರ್ಸ್ ಕಾಣಿಸಿತು. ಕೂಡಲೇ ಕುಟುಂಬದ ಯಜಮಾನ ತನ್ನ ವಾಹನ ಹೊರಳಿಸಿದನು. ಒಂದು ಮಗು

ವಾಹನದಿಂದ ಹಾರಿ ಬಂದು ಆ ಪರ್ಸನ್ನು ಎತ್ತಿಕೊಂಡು ಮತ್ತೆ ವಾಹನವೇರಿದ ಕೂಡಲೇ, ವಾಹನದ ಗತಿ ಜೋರಾಯಿತು. ಮಕ್ಕಳು ತಮ್ಮ ಹಿಂದೆ ನೋಡುತ್ತಿದ್ದಂತೆ, ಜನಜಂಗುಳಿಯಲ್ಲಿ ಅವರು ಕರಗಿಹೋದರು.

ಆರ್ಥಿಕವಾಗಿ ಬೆಳೆಯುತ್ತಿರುವ ಸೆಬು ದ್ವೀಪದ ಹತ್ತಿರದಲ್ಲಿರುವ (ಫಿಲಿಪೈನದ) ಲಾಪು-ಲಾಪು ನಗರದಲ್ಲಿ ನಮಗೆ ಭೇಟಿಯಾದ ಮಹಿಳೆಗೆ ತನಗೆ ಸಿಕ್ಕ ಹಣದ ಅವಶ್ಯಕತೆಯಿತ್ತು. ೨೦ ವರ್ಷದ ಮೆರಿಲ್ ನೊವಾಲ್, ಗಾಯಿ ಸ್ಯಾವೊ ಡಿಪಾರ್ಟ್‌ಮೆಂಟ್‌ಸ್ಟೋರಿನಲ್ಲಿ, ಮಾರಾಟಗಾರ್ತಿಯಾಗಿ ಕೆಲಸ ಮಾಡಿ, ದಿನಕ್ಕೆ ೮೫ ಪೆಸೊ (ರೂ. ೧೨೦) ಗಳನ್ನು ಗಳಿಸುತ್ತಾಳೆ. ಅವಳ ತಂದೆ ವಿಮಾನಗಾರ; ತಾಯಿ ಗೃಹಿಣಿ. ೧೯೮೯ರಲ್ಲಿ ಒಬ್ಬ ತಮ್ಮ ಹಾಗೂ ೧೯೯೦ ರಲ್ಲಿ ಒಬ್ಬ ತಂಗಿಯ ಸಾವಿನಿಂದಾಗಿ, ಆ ಕುಟುಂಬ ಔಷಧೋಪಚಾರ ಹಾಗೂ ಸಂಸ್ಕಾರಕ್ಕಾಗಿ ಮಾಡಿದ ಸಾಲವನ್ನು ಇನ್ನೂ ತೀರಿಸುತ್ತಲೇ ಇದೆ.

ಹೀಗಿದ್ದಾಗಲೂ, ಆ ಯುವ ಮಹಿಳೆ ಸ್ವಲ್ಪವೂ ಸಂಕೋಚಪಡದೆ, ೪೪೦ ಪೆಸೊಗಳಿರುವ ಪರ್ಸನ್ನು ಅಂಗಡಿಯ ಮೇಲ್ವಿಚಾರಕನಿಗೆ ಒಪ್ಪಿಸಿದಳು. "ನನ್ನ ತಂದೆ ತಾಯಿಗಳಿಂದ ನಾನು ಕಲಿತ ಪಾಠ: ಯಾವುದು ನಿನ್ನದಲ್ಲವೊ, ಅದನ್ನು ನೀನು ಇಟ್ಟುಕೊಳ್ಳಬಾರದು... ನನಗೆ ಓಣಿಯಲ್ಲಿ ೨೫ ಸೆಂಟುಗಳು ಸಿಕ್ಕರೂ ನಾನು ಅದನ್ನು ಎತ್ತಿಕೊಳ್ಳುವುದಿಲ್ಲ. ನನ್ನ ತಂದೆಗೆ ಈ ವಿಷಯ ತಿಳಿದರೆ ನನಗೆ ಬಯ್ಯುತ್ತಾನೆಂಬ ಭಯ ನನಗಿದೆ. ಪ್ರಾಮಾಣಿಕತೆಯ ಬಗ್ಗೆ ಆತನು ಬಹಳ ಕಠಿಣವಾಗಿದ್ದಾನೆ" ಎಂದು ಹೇಳಿದಳು.

ನಮ್ಮ ಅನಿಸಿಕೆ :—ಏಷಿಯಾದಲ್ಲಿ ಒಗೆದ ೧೪೦ ಪರ್ಸ್‌ಗಳಲ್ಲಿ ೮೦ನ್ನು (೫೭%) ಮರಳಿಸಲಾಗಿತ್ತು. ಇಂಥವೇ ಪ್ರಯೋಗವನ್ನು ರೀಡರ್ಸ್ ಡೈಜೆಸ್ಟ್ ಯುರೋಪಿನಲ್ಲಿ ನಡೆಸಿದಾಗ ಹೆಚ್ಚು ಕಡಿಮೆ ಇದೇ ತೆರನಾದ ಫಲಿತಾಂಶ ಕಂಡು ಬಂತು. ಯುರೋಪಿನಲ್ಲಿ ಒಗೆಯಲಾದ ೨೦೦ ಪರ್ಸ್‌ಗಳಲ್ಲಿ ೧೧೬ (೫೮%) ಮರಳಿ ಬಂದವು. ಅಮೆರಿಕೆಯ ಸಂಯುಕ್ತ ಸಂಸ್ಥಾನದಲ್ಲಿ ಮರಳಿಸಲಾದ ಪರ್ಸ್‌ಗಳ ಸಂಖ್ಯೆ ಸ್ವಲ್ಪ ಹೆಚ್ಚಾಗಿತ್ತು—೧೨೦ರಲ್ಲಿ ೮೦ (೬೭%).

ಮರಳಿಸಿದ ಹಣವನ್ನು ಅವರ ಪ್ರಾಮಾಣಿಕತೆಯ ಪ್ರತಿಫಲವೆಂದು ನೀಡಿದಾಗಲೂ ಅಮೆರಿಕೆಯ ಒಬ್ಬ ವ್ಯಕ್ತಿ ಆ ಹಣವನ್ನು ತೆಗೆದುಕೊಳ್ಳಲು ಒಪ್ಪಲಿಲ್ಲ. ಯುರೋಪಿನಲ್ಲಿ ೪/೧ ಜನರು ಹಣ ತೆಗೆದುಕೊಳ್ಳಲು ಒಪ್ಪಲಿಲ್ಲ. ಆದರೆ ಏಷಿಯಾದಲ್ಲಿ ೭೨% ಜನರು (೮೦ರಲ್ಲಿ ೫೮ ಜನ) ಮರಳಿಸಿದ ಹಣವನ್ನು ಪ್ರತಿಫಲವಾಗಿ ತೆಗೆದುಕೊಳ್ಳಲು ನಿರಾಕರಿಸಿ ಚಕಿತಗೊಳಿಸಿದರು.

ಸೋಲ್‌ನ ಯೊನ್ಸೆ ವಿಶ್ವವಿದ್ಯಾಲಯದಲ್ಲಿ ಸಿರ್ಯಾಮಿಕ್ ಇಂಜಿನಿಯರಿಂಗ್ ವಿದ್ಯಾರ್ಥಿಯಾಗಿರುವ ೨೫ ವರ್ಷದ ಜುನ್ ಸುಂಗ್ "ನಾನೊಂದು ಸರಿಯಾದ ಕೆಲಸ ಮಾಡಿದ್ದಕ್ಕೆ ಪ್ರತಿಫಲವನ್ನು ತೆಗೆದುಕೊಳ್ಳಲಾರೆ" ಎಂದನು. ಹಣ ಸ್ವೀಕರಿಸಿದವರಲ್ಲಿ ಕೂಡಾ ಅನೇಕರು ಆ ಹಣವನ್ನು ದಾನ ಅಥವಾ ಧರ್ಮ ಸಂಸ್ಥೆಗೆ ನೀಡುವುದಾಗಿ ಹೇಳಿದರು.

ಏಷಿಯಾದಲ್ಲಿ ಕೆಲವು ರೋಚಕ ಫಲಿತಾಂಶಗಳು ಕಂಡು ಬಂದವು. ನಮಗೆ ದೊರೆತ ಪರ್ಸ್ ಮರಳಿಸಿದವರಲ್ಲಿ ೩/೨

ರಷ್ಟು ಜನರು ಗಂಡಸರಾಗಿದ್ದರು. ಅದಕ್ಕೆ ಕಾರಣ ಬಹುಶಃ ಸಾವು ಒಗೆದ ಸಮಯ. ದಿನದ ಕೆಲಸದ ಸಮಯದಲ್ಲಿ (ಕೆಲವು ನಗರಗಳಲ್ಲಿ) ಮಹಿಳೆಯರು ಮನೆಬಿಟ್ಟು ಕೆಲಸಕ್ಕೆ ಹೋಗುವುದಿಲ್ಲವೆಂಬ ಕಾರಣವೂ ಉಂಟು. ಅಲ್ಲದೆ ಒಂದು ಪರ್ಸ್ ಒಬ್ಬ ವ್ಯಕ್ತಿಯ ಕೈಗೆ ಸಿಕ್ಕಿತೆಂದರೆ, ಅದನ್ನು ಪಡೆದ ವ್ಯಕ್ತಿ ಗಂಡೋ ಅಥವಾ ಹೆಣ್ಣೋ ಎಂಬುದು ಮುಖ್ಯ ಅಂಶವಾಗಿರುವುದಿಲ್ಲ. ನಮ್ಮ ಅಧ್ಯಯನದ ಪ್ರಕಾರ, ತಮಗೆ ಸಿಕ್ಕ ಪರ್ಸ್‌ಗಳನ್ನು ಮರಳಿಸಿದ ವ್ಯಕ್ತಿಗಳಲ್ಲಿ ೫೮% ಮಹಿಳೆಯರಿದ್ದರೆ ಗಂಡಸರ ಸಂಖ್ಯೆ ೫೬% ಇತ್ತು.

ಅಂದರೆ ಏಶಿಯಾದ ಬೃಹತ್ ಮಹಾನಗರಗಳ ಜನರು, ಚಿಕ್ಕ ನಗರಗಳ ಜನರಿಗಿಂತ ಕಡಿಮೆ ಪ್ರಾಮಾಣಿಕರಾಗಿದ್ದಾರೆಯೆ? ಹಾಗೇ ಅನಿಸಿತು. ಮಹಾ ನಗರಗಳಾದ ಸೋಲ್, ಮುಂಬಯಿ ಮತ್ತು ಮನಿಲಾದಲ್ಲಿ ಮರಳಿಸಿದವರ (ಅತಿ ಕಡಿಮೆ ಪ್ರಮಾಣದ) ಸರಾಸರಿ ೫೦% ಆಗಿತ್ತು. ಬಹಳ ಉತ್ತಮ ಗತಿಯಲ್ಲಿ ಮರಳಿಸಲಾಗಿದ್ದುದು ಸಿಂಗಪೂರ, ಇಂಕಾನ (ಕೊರಿಯಾ), ತಿರುವನಂತಪುರ ಮತ್ತು ಕಾಯಕುರಾ (ಜಪಾನ್) ದಂಥ (೧೮,೦೦೦ ದಿಂದ ೨.೮ ದಶಲಕ್ಷ ಜನಸಂಖ್ಯೆಯುಳ್ಳ) ಸಣ್ಣ ಹಾಗೂ ಮಧ್ಯಮ ಪಟ್ಟಣಗಳಲ್ಲಿ.

ಏಶಿಯಾದ ಅನೇಕ ಬಡರಾಷ್ಟ್ರಗಳಲ್ಲಿನ ಜನರು, ಸುಧಾರಿಸಿದ ಜೀವನ ಮಟ್ಟವಿರುವ ಜನರಷ್ಟೇ ಪ್ರಾಮಾಣಿಕರಾಗಿ ಕಂಡರು. ಜಪಾನ್, ಹಾಂಗ್ ಕಾಂಗ್ ಮತ್ತು ಕೊರಿಯಾದಲ್ಲಿ ಮರಳಿಸಿದವರು ಸರಾಸರಿ ೬೦% (೪೦ರಲ್ಲಿ ೨೪). ಭಾರತ ಮತ್ತು ಫಿಲಿಪೈನ್ಸಿನಲ್ಲಿನ ಸರಾಸರಿ ೫೩% (೪೦ರಲ್ಲಿ ೨೧).

ಪರ್ಸ್ ಪರೀಕ್ಷೆಯನ್ನು ಈ ಮೊದಲು ಯುರೋಪ್ ಮತ್ತು ಅಮೆರಿಕಾದಲ್ಲೂ ನಡೆಸಲಾಯ್ತು. ಅದರ ಕೆಲವು ಫಲಿತಾಂಶಗಳು ಹೀಗಿವೆ:

ದೊಡ್ಡ ನಗರಗಳು	ಮರಳಿಸಿದವರು	ಮರಳಿಸದವರು
ಸಿಯಾಟಲ್ (ಯು.ಎಸ್.ಎ.)	೯	೧
ಲಂಡನ್ (ಇಂಗ್ಲೆಂಡ್)	೭	೩
ಲಿಸ್ಬನ್	೫	೫
ಮುಖ್ಯ ನಗರಗಳು		
ಒಡೆನ್ಸ್ (ಡೆನ್ಮಾರ್ಕ್)	೧೦	೦
ಲಾಸವೆಗಾಸ್ (ಯು.ಎಸ್.ಎ.)	೫	೫
ಲಮ್‌ಸಾನೆ (ಸ್ವಿಟ್ಸರ್‌ಲ್ಯಾಂಡ್)	೨	೮
ಸಣ್ಣ ಪಟ್ಟಣಗಳು		
ಲಾಹತಿ (ಫಿನ್‌ಲ್ಯಾಂಡ್)	೮	೨
ಕನ್ಕಾರ್ಡ್ (ಯು.ಎಸ್.ಎ.)	೮	೨
ವಿಮಾರ (ಜರ್ಮನಿ)	೨	೮

ಇನ್ನೂ ಕೆಲವು ರೋಚಕ ಅಂಶಗಳು

ಆಸ್ಪತ್ರೆಗಳಲ್ಲಿ 'ಕಳೆದ' ಪ್ರತಿ ೫ ಪರ್ಸ್‌ಗಳಲ್ಲಿ ೪ ಮರಳಿ ಬಂದವು. ಅದರಂತೆ ಬ್ಯಾಂಕು ಮತ್ತು ಅಂಚೆ ಕಛೇರಿಗಳಲ್ಲಿ (೧೩ ರಲ್ಲಿ ೧೦) ಹಾಗೂ ಹೋಟೆಲ್ಲುಗಳ (ಎಲ್ಲ ೪)ಗಳ ಆವರಣದಲ್ಲಿ ಕಳೆದ ಪರ್ಸ್‌ಗಳನ್ನು ಮರಳಿಸಲಾಗಿತ್ತು. ಪೋಲಿಸ್ ಠಾಣೆ (೩ ಪರ್ಸ್‌ಗಳು)ಗಳ ಹತ್ತಿರ, ಚರ್ಚ್, ಮಂದಿರ, ಪವಿತ್ರಸ್ಥಳ ಮತ್ತು ಮಸೀದಿಗಳ ಹತ್ತಿರ ಕಳೆದ ಪರ್ಸ್‌ಗಳೂ ಮರಳಿ ಬಂದಿದ್ದವು. ಇದಕ್ಕೆ ವ್ಯತಿರಿಕ್ತವಾಗಿ ಪುರಭವನ ಮತ್ತು ಪುರಸಭೆಯ ಕಟ್ಟಡಗಳಲ್ಲಿ ಒಗೆದ ೧೨ ಪರ್ಸ್‌ಗಳಲ್ಲಿ ೬ ಮಾಯವಾಗಿದ್ದವು. ಅದರಂತೆ ಓಣಿಗಳಲ್ಲಿ, ಜನ ಸೇರುವ ಮತ್ತು ವಿಹಾರ ಸ್ಥಳಗಳಲ್ಲಿ ಬಿಡಲಾದ ೧೩ ಪರ್ಸ್‌ಗಳಲ್ಲಿ ೧೧ ಮರಳಿ ಬರಲಿಲ್ಲ

ಗಲಭೆಗೆ ಹೆಸರಾದ ಸೋಲ್‌ನ ಯೊನ್ಸೆ ವಿಶ್ವವಿದ್ಯಾಲಯದಲ್ಲಿ, ಉತ್ತಮ ಇಟ್ಟಿಗೆಗಳಿಂದ ನಿರ್ಮಿಸಲಾದ ಟೈವಾನಿನ ಚೆಂಗ-ಕುಂಗ್ ವಿಶ್ವವಿದ್ಯಾಲಯದಲ್ಲಿ ಮತ್ತು ಮುಂಬಯಿಯ ಸಂತ ಝೇವಿಯರ್ ಕಾಲೇಜಿನ ಸಭಾಭವನದಲ್ಲಿ ೧೨ ಪರ್ಸ್‌ಗಳನ್ನು ಒಗೆದು ನೋಡಿದೆವು. ಈ ೧೨ ರಲ್ಲಿ ೮ ಪರ್ಸ್‌ಗಳನ್ನು —ಹಣ ಹಾಗೂ ಒಳಗಿದ್ದ ಕಾಗದಗಳೊಂದಿಗೆ— ಸುರಕ್ಷಿತವಾಗಿ ಮರಳಿಸಲಾಯಿತು. ಆದರೆ ಥೈಲ್ಯಾಂಡಿನ ಹಾರ್ವರ್ಡ್‌ಯೆಂದು ಪ್ರಸಿದ್ಧವಾಗಿರುವ ಚುಲಾಲೊಂಗ ಕಾರ್ನ್, ವಿಶ್ವವಿದ್ಯಾಲಯದ ಆವರಣದಿಂದ ಒಂದು ಪರ್ಸ್ ಕೂಡಾ ಮರಳಿ ಬರಲಿಲ್ಲ. ಅಲ್ಲಿ, ನಮ್ಮ ಎರಡೂ ಪರ್ಸ್‌ಗಳು ಮಾಯವಾದವು. ಆದರಲ್ಲಿ ಸಮವಸ್ತ್ರ ಹಾಗೂ ಪ್ರತಿಷ್ಠೆಯ ಸಂಕೇತವೆನ್ನಬಹುದಾದ ಥಳಕಿನ ಉಡುಪು ಧರಿಸಿದ ಹುಡುಗಿಯರು ಒಂದು ಪರ್ಸನ್ನೆತ್ತಿಕೊಂಡಿದ್ದರು.

ಯಾವುದೇ ಒಂದು ಪರ್ಸ್ ಮರಳಿಸಿದಾಗ, ಏಶಿಯಾದಲ್ಲೆಲ್ಲಾ ನಾವು ಪದೇ ಪದೇ ಕೇಳಿದ ಪ್ರತಿಕ್ರಿಯೆ: ಅದು ಸರಿಯಾದ ಕೆಲಸ. ನಮ್ಮ ನೈತಿಕ ಮಟ್ಟ ನಿರ್ಣಯಿಸುವಲ್ಲಿ, ನಮ್ಮ ಕುಟುಂಬ ಮತ್ತು ಧರ್ಮ ಎಂಥ ಪಾತ್ರ ವಹಿಸುತ್ತದೆಂಬುದು ಈ 'ಪರ್ಸ್ ಪರೀಕ್ಷೆ'ಯಿಂದ ಖಚಿತವಾಯಿತು. ಲಾಪು–ಲಾಪು ನಗರದ ಹೊರಗಿರುವ ಮ್ಯಾಕ್ಟನ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿನ ೪೨ ವರ್ಷದ ಹಿರಿಯ ಪೋಲೀಸ್ ಅಧಿಕಾರಿ ಫರ್ಡಿನ್ಯಾಂಡ್ ಕೆಹಿಲೊಗ್ ಅನೇಕ ಜನರ ಅಭಿಪ್ರಾಯವನ್ನೀ ಈ ರೀತಿ ಅರುಹಿದ: ನನ್ನದಲ್ಲದ್ದನ್ನು ನಾನು ತೆಗೆದುಕೊಳ್ಳಬಾರದೆಂದು ನನ್ನ ತಂದೆತಾಯಿಗಳು ಕಲಿಸಿದ್ದಾರೆ. ನಾನು ಕೂಡಾ ಇದೇ ಮೌಲ್ಯಗಳನ್ನು ನನ್ನ ಮಕ್ಕಳಿಗೆ ಕಲಿಸಲು ಪ್ರಯತ್ನಿಸಿದ್ದೇನೆ."

ಪರ್ಸ್ ಮರಳಿಸಿದ ಜನರಲ್ಲಿ ಅನೇಕರು ಭಗವಂತನಲ್ಲಿರುವ ತಮ್ಮ ನಂಬಿಕೆಯನ್ನು ಪ್ರತಿಪಾದಿಸಿದರು. ಮಲೇಶಿಯಾದ ಕಾಜಿಂಗ್‌ನಲ್ಲಿನ ಮಾರುಕಟ್ಟೆಯಲ್ಲಿ ತನ್ನ ಗಂಡನ ಜೊತೆ ಹಣ್ಣುಗಳ ವ್ಯಾಪಾರಮಾಡುವ ೨೦ ವರ್ಷದ ರೋಝಲ್ ಹಿಜಾ ಬಿಂತಿ ಸಹರ "ನಾನೊಬ್ಬ ಮುಸಲ್ಮಾನಳಾಗಿದ್ದರಿಂದ ಪ್ರಲೋಭನೆಯ ಬಗ್ಗೆ ತಿಳಿದಿದ್ದು, ಅದನ್ನು ಹೇಗೆ ಪರಿಹರಿಸಬೇಕು ಎಂಬುದೂ ನನಗೆ ಗೊತ್ತಿದೆ" ಎಂದಳು. ತಿರುವನಂತಪುರದಲ್ಲಿರುವ ೬೨ ವರ್ಷದ ನಿವೃತ್ತ ಕೃಷಿ

ಅಧಿಕಾರಿ ಮೈಕೆಲ್‌ರಂಥ ಅನೇಕ ಜನರು ತಮ್ಮ ಪ್ರಾರ್ಥನಾ ಮಂದಿರಗಳಿಗೆ ಹೋಗಿ ಸಹಾಯ ಕೋರಿದರು. ಆ ನಗರದ ಅತಿ ಭವ್ಯ ಹಾಗೂ ಐತಿಹಾಸಿಕ ಕಟ್ಟಡವಾದ ಸಂತ ಜೋಸೆಫ್ ಕೆಥೆಡ್ರಲ್ಲಿನ ಪಾದ್ರಿ "ಅವನು ನನ್ನಲ್ಲಿಗೆ ಬಂದು 'ಪೂಜ್ಯ ತಂದೆ, ದಯವಿಟ್ಟು ಇದರ ಒಡೆಯನನ್ನು ಕಂಡು ಹಿಡಿಯಿರಿ' ಎಂದನು."—ಎಂದು ಹೇಳಿದ. ಇನ್ನು ಪರ್ಸ್‌ಗಳನ್ನು ತಮ್ಮ ಹತ್ತಿರ ಉಳಿಸಿಕೊಂಡ ಅಲ್ಪ ಸಂಖ್ಯಾತರಲ್ಲಿ ಪ್ರತಿಯೊಬ್ಬನಿಗೆ ಆತ್ಮಸಾಕ್ಷಿಯುಂಟೆಂಬುದು ನಮ್ಮ ಅರಿವಿಗೆ ಬಂತು. ಹೆಚ್ಚು ಕಡಿಮೆ ಇವರೆಲ್ಲರೂ ಪರ್ಸನ್ನೆತ್ತಿಕೊಳ್ಳುವಾಗ ಮುಚ್ಚುಮರೆ ಮತ್ತು ತಪ್ಪಿತಸ್ಥಭಾವ ಅವರ ದೃಷ್ಟಿಯಲ್ಲಿದ್ದುದೇ ಅದರ ಚಿಹ್ನೆಯಾಗಿತ್ತು. ತಾವು ಮಾಡುತ್ತಿರುವುದು ತಪ್ಪೆಂಬುದು ಅವರಿಗೆ ತಿಳಿದಿತ್ತು.

ಜಪಾನಿನ ಕಾಮಕುರಾದಲ್ಲಿನ ಚಸಿ ಮಂದಿರದಲ್ಲಿ, ಮಹಿಳೆಯರು ಮೃತರ ಸದ್ಗತಿ ಹಾಗೂ ಹುಟ್ಟಲಿರುವ ಮಗುವಿನ ಆರೋಗ್ಯಕ್ಕಾಗಿ ಪ್ರಾರ್ಥಿಸಲು ಹೋಗುತ್ತಾರೆ. ಪ್ರಾರ್ಥನಾ ಚಕ್ರದ ಹಿಂದೆ ಬಿದ್ದಿದ್ದ ನಮ್ಮ ಒಂದು ಪರ್ಸ್ ಈಕೊ ಕುನಿಯೋಷಿಗೆ ಸಿಕ್ಕಿತು. ಆ ಪರ್ಸನ್ನೇಕೆ ಅಷ್ಟು ಅವಸರದಿಂದ ಮರಳಿಸಿದೆಯೆಂದು ಕೇಳಿದಾಗ ಆಕೆ "ಹಾಗೆ ಮಾಡಬೇಕೆಂದು ನಾನು ಚಿಕ್ಕವಳಿದ್ದಾಗಿನಿಂದಲೂ ಕಲಿಸಿದ್ದಾರೆ. ಬಹಳಷ್ಟು ಜಪಾನಿಯರು ಹೀಗೆಯೇ ಮಾಡುತ್ತಾರೆಂದು ನನಗೆನಿಸುತ್ತದೆ" ಎಂದಳು.

ಅವಳು ಹೇಳಿದ್ದು ಸರಿಯೆಂದೇ ನಮ್ಮ ಅನುಭವಕ್ಕೆ ಬಂತು. ಅನೇಕ ಜಪಾನೀಯರಷ್ಟೇ ಅಲ್ಲ, ಇತರ ಅನೇಕ ಜನರ ಬಗ್ಗೆ ಕೂಡಾ ಇದೇ ಅನುಭವ ಬಂದಿದೆ.



ಅನಕ್ಷರಸ್ಥರು ಯಾವ ರಾಜಕೀಯ ಪಕ್ಷಕ್ಕೂ ಸೇರಿದವರಲ್ಲ;
ಅವರಿಗೆ ಮೊದಲು ಅಕ್ಷರ ಕಲಿಸಬೇಕು.

—ಲೆನಿನ್

ಡಾ|| ಕೆ. ಕೃಷ್ಣಮೂರ್ತಿ—ನಾ ಕಂಡಂತೆ

ಡಾ|| ಕೆ. ಲೀಲಾಪ್ರಕಾಶ್
ಸಂಖ್ಯೆ ೬, ಜೆ.ಟಿ.ಕೆ ಬಡಾವಣೆ
ಮೈಸೂರು-೫೭೦ ೦೦೯

ಸಂಸ್ಕೃತ ಕನ್ನಡ ಸಾಹಿತ್ಯ ದಿಗ್ಗಜ, ಅಸೀಮ ಸೌಂದರ್ಯಾರಾಧಕ, ಕಲಾತಪಸ್ವಿ ಡಾ|| ಕೆ. ಕೃಷ್ಣಮೂರ್ತಿಯವರು (ಜನನ ೨೧-೭-೨೩) ದಿನಾಂಕ ೧೪-೭-೯೭ ರಂದು ನಮ್ಮನ್ನು ಅಗಲಿದರು. ಅವರ ಮಗಳು ಮತ್ತು ಶಿಷ್ಯೆ ಅವರನ್ನು ಹತ್ತಿರದಿಂದ ಹೀಗೆ ಕಂಡಿದ್ದಾರೆ.

ಮಾಂಸವಿಲ್ಲದ ಕೃಶಕಾಯದ ಹುಡುಗನೊಬ್ಬ ದಾರಿದೀಪದಡಿ ರಾತ್ರಿಯವರೆಗೆ ಓದುತ್ತಾ ಜಗತ್ತಿಗೆ ದಾರಿದೀಪವಾಗುವನೆಂದು ಅಂದು ಅರಿತಿದ್ದವರಾರು? 'ಉದ್ಧರೇದಾತ್ಮನಾತ್ಮಾನಂ' ಎಂಬಂತೆ ತನ್ನ ಅಗಾಧ ಪರಿಶ್ರಮದಿಂದ ಮೇರುಶೃಂಗವನ್ನೇರಿದ ಮಹಾ ದಾರ್ಶನಿಕ, ಕವಿ, ವಿಮರ್ಶಕರಾದ ಕೆ. ಕೃಷ್ಣಮೂರ್ತಿಯವರು ಇಂದು ನಮ್ಮೊಂದಿಗಿಲ್ಲ. ಆದರೆ ಅವರ ಎಪ್ಪತ್ತಕ್ಕೂ ಹೆಚ್ಚು ಹೆಬ್ಬೊತ್ತಿಗೆಗಳು ಮುನ್ನೂರಕ್ಕೂ ದಾಟಿದ ಅವರ ಸಂಶೋಧನಾತ್ಮಕ ಲೇಖನಗಳು ಇಂದು ನಮ್ಮನ್ನು ಕಾವ್ಯಲೋಕದ ಚರಮಸೀಮೆಯನ್ನು ತಲುಪಿಸಲು ಅಮರ ಸ್ಥಾಯಿಯಾಗಿ ಉಳಿದಿವೆ.

ವಿದ್ವಾಂಸ ಕೃಷ್ಣಮೂರ್ತಿ ಸಂಸ್ಕೃತ, ಕನ್ನಡ, ಆಂಗ್ಲ ಸಾರಸ್ವತಲೋಕದ ಮಹನೀಯರಿಗೆಲ್ಲ ಚಿರಪರಿಚಿತರು. ಅತಿ ದುಃಸಾಧ್ಯದ ಮಾರ್ಗವಾದ ಸ್ವಾಧ್ಯಾಯನದ ಮಾರ್ಗದಲ್ಲಿ ಉಪಕ್ರಮಿಸಿ ಗುರುಗಳಿಗೆ ಗುರುಗಳಾಗಿ ಕಾವ್ಯಮೀಮಾಂಸೆಯಲ್ಲಿ ಬರುವ ಕಗ್ಗಂಟುಗಳನ್ನು ಬಿಡಿಸುವುದರಲ್ಲಿ ನೆರವಾದವರು ಶಾರದಾಸೇವೆಯೇ ಅವರ ಉಪಾಸನೆ. ಚಿಂತನೆ, ಮಂಥನಗಳೇ ಅವರ ಊಟ–ಉಪಾಹಾರ. ಇಂತಹ ಧೀಮಂತ ಪುರುಷನ ಹೆಮ್ಮೆಯ ಪುತ್ರಿಯಾಗಿ ಪಂಡಿತ ಪ್ರಪಂಚಕ್ಕೆ ಅಪರಿಚಿತವಾದ ಅವರ ಇನ್ನೊಂದು ಮುಖವನ್ನು ತೋರಬಯಸುತ್ತೇನೆ.

ಅದೇಕೋ ನಾನರಿಯೆ ಬಾಲ್ಯದಿಂದಲೇ ನಾನು ತಂದೆಯವರ ಆರಾಧಕಳಾಗಿದ್ದೆ. ಅವರನ್ನು ಕಂಡುಹೋಗಲು ಬರುತ್ತಿದ್ದ ಅಸಂಖ್ಯಾತ ಮಹನೀಯರನ್ನು ಕಂಡಾಗ ಇವರು ಇಷ್ಟುದೊಡ್ಡವರೇ ಎಂದು ಮನ ಪುಲಕಿತವಾಗುತ್ತಿತ್ತು. ನನಗೆ ಸುಮಾರು ಐದಾರು ವರ್ಷಗಳಿರಬಹುದು ಬೆಳಗ್ಗೆ ೫-೬ಕ್ಕೆ ಬೇಂದ್ರೆಯವರು ಮನೆಗೆ ಬಂದು "ನೋಡ್ರೀ ಕೃಷ್ಣಮೂರ್ತಿ ಮುಂಜಾನೇನೆ ಬಂದು ನಿಮಗೆ ತ್ರಾಸ ಕೊಡ್ತಿದ್ದೀನಿ, ಏನ್ ಮಾಡ್ಲೀ ನಾ ಯಾರ ಮುಂದ

ಎಷ್ಟು ಒದರಿದ್ರೂ ನಿಮ್ಮಂಥ್ಹಗ ನನ್ನ ವಿಚಾರ ಅರ್ಥಮಾಡ್ಕೊಳ್ಳದಿಲ್ರಿs. ಈ ಹುಚ್ಚ ಮಂದೀs' ಎಂದು ಪೀಠಿಕೆ ಶುರುಮಾಡಿದ ಬೇಂದ್ರೆ ಮನೆ ಬಿಟ್ಟು ಹೊರಟಾಗ ೯–೩೦ ದಾಟಿತ್ತು. ಅವರು ಬಂದರೆ ನಮಗೆಲ್ಲಾ ಬಲು ಹಿಗ್ಗು ಅವರ ಕಂಚಿನಕಂಠ ಆಪ್ಯಾಯಮಾನವಾಗಿರುತ್ತಿತ್ತು. ಆದರೆ ನಮ್ಮ ಅಜ್ಜಿಯವರು "ಕಿಟ್ಟಣ್ಣ ಯೂನಿವರ್ಸಿಟಿಗೆ ಹೋದ ಹಾಗೆ! ಬೇಂದ್ರೆ ಭಾಷಣ ಶುರು ಮಾಡಿದ ಮೇಲೆ" ಎಂದು ಕೊರಗುತ್ತಿದ್ದರು. ನಮ್ಮ ತಂದೆಯವರಿಗೆ ವಿದ್ವಾಂಸರೊಂದಿಗೆ ಗಂಟೆಗಟ್ಟಲೆ ಚರ್ಚಿಸುವಾಗ, ಓದುವಾಗ, ಬರೆಯುವಾಗ ಮಾತ್ರ ಅವರ ಅನಾರೋಗ್ಯ ಪರಕಾಯ ಪ್ರವೇಶ ಮಾಡುತ್ತಿತ್ತು. ಗುಳಿಗೆ ಕೊಡುವುದು, ಕಾಫಿಕೊಡುವುದು, ನಶ್ಯದಡಬ್ಬಿ ತಂದು ಕೊಡುವುದು, ವಾಕಿಂಗ್‌ಸ್ಟಿಕ್ ಕೊಡುವುದು, ಈ ಸಣ್ಣಪುಟ್ಟ ಕೆಲಸಗಳನ್ನು ಮಾಡಿ ಅವರು ಭೇಷ್ ಎಂದರೆ ಏನೋ ಜೀವನದಲ್ಲಿ ಸಾಧಿಸಿದ ಹಾಗೆ ಎಂದು ತಿಳಿದ ನಾವು ಅಕ್ಕತಂಗಿಯರು ಅದನ್ನು ಕೊಡಲು ಪೈಪೋಟಿ ಮಾಡುತ್ತಿದ್ದೆವೆಂದರೆ ಯಾರಿಗಾದರೂ ಆಶ್ಚರ್ಯವಾದೀತು.

ಅವರು ವಿಶ್ವವಿದ್ಯಾಲಯದಿಂದ ಬರುವ ವಿಷಯ ಗೊತ್ತಾದೊಡನೆ ಇಲಿ ಬಿಲ ಸೇರುವ ಹಾಗೆ ರೂಮನ್ನ ಸೇರುತ್ತಿದ್ದೆವು. ಏನಾದರೂ ನಮ್ಮ ಕೈಲಿ ಕಥೆ ಪುಸ್ತಕವನ್ನೋ, ರೇಡಿಯೋ ಹಾಕಿದ್ದೊ ಗೊತ್ತಾದರೆ ಅವರ ಕೆಂಡಾಮಂಡಲ ಕೋಪಕ್ಕೆ ಗುರಿಯಾಗಬೇಕಾಗುತ್ತಿತ್ತು. ನಮ್ಮ ತಾಯಿಯವರಾದರೋ ಸಹನೆಯ ಸಾಕಾರ ಮೂರ್ತಿ, ತಂದೆಯವರು ಎಷ್ಟೇ ರೇಗಲಿ, ಎಷ್ಟು ಮುತುವರ್ಜಿ ವಹಿಸಿ ಮಾಡಿದ ಊಟ–ತಿಂಡಿಯನ್ನು ನೂಕಲಿ ಎಂದೂ ಬೇಸರಿಸಿಕೊಂಡು ಎರಡು ಮಾತನಾಡಿದವರಲ್ಲ. ಎಲ್ಲಿಯವರೆಗೆ ಅವರು ತಂದೆಯವರ ಬಗ್ಗೆ ಸೇವೆ ಮಾಡುತ್ತಿದ್ದರೆಂದರೆ ಕಾಲಿನ ಚಪ್ಪಲಿಯನ್ನು ತೊಟ್ಟು ಬಸ್‌ಸ್ಟಾಪಿನಲ್ಲಿ ಬಸ್ ಬರುವವರೆಗೆ ಕಾದಿದ್ದು ಬಸ್ ಹತ್ತಿಸಿ ಬರುತ್ತಿದ್ದರು.

ಅನೇಕವೇಳೆ ತಂದೆಯವರು ನಾಲ್ಕಕ್ಕೆ ಬರಬೇಕಾದವರು ಐದುವರೆಯಾದರೂ ಬರದಿದ್ದರೆ ನಮ್ಮ ತಾಯಿಯವರು ಹೇಳುತ್ತಿದ್ದುದು ಉಂಟು ಒಂದು ಲೈಬ್ರರಿಯಲ್ಲಿ ಯಾವುದೋ ಪುಸ್ತಕ ಹಿಡಿದು ಕುಳಿತಿರಬೇಕು ಇಲ್ಲವೇ ಯೋಚನೆಮಾಡುತ್ತಾ ಯಾವುದೋ ಸ್ಟಾಪ್‌ನಲ್ಲಿ ಬಸ್ಸಿನಿಂದ ಇಳಿದು ನಡೆದು ಬರತ್ತಿರಬೇಕು, ಬಂದ ಮೇಲೆ ವಿಚಾರಿಸಿದರೆ ಎರಡರಲ್ಲಿ ಒಂದು ಸರಿಯಾಗಿರುತ್ತಿತ್ತು.

ನಮ್ಮ ಮನೆಗೆ ಬಂದು ಹೋಗದ ಅತಿಥಿಗಳಿರಲಿಲ್ಲವೆಂದರೆ ತಪ್ಪಾಗಲಾರದು. ಒಂದು ದಿನ ಕಣವಿಯವರು ಅಂಗ್ಲವಿಷಯದ ಮಾಹಿತಿ ತಿಳಿಯಲು ಬಂದರೆ ಮಗದೊಮ್ಮೆ ಜವಳಿಯವರು ಕನ್ನಡ ವಿಷಯ ಚರ್ಚಿಸಲು ಬರುತ್ತಿದ್ದರು. ಇನ್ನೊಮ್ಮೆ ತತ್ವಶಾಸ್ತ್ರ ಪರಾಮರ್ಶಿಸಲು ದೊಡ್ಡ ಪ್ರೊಫೆಸರ್ ಬರುತ್ತಿದ್ದರು, ಮತ್ತೊಮ್ಮೆ ಸಂಸ್ಕೃತ ವಿಷಯದ ಬಗ್ಗೆ ಮಾತನಾಡಲು ಶ್ಯಾನುಭೋಗರೋ, ಮಲ್ಲೆದೇವರೋ ಬರುತ್ತಿದ್ದರು. ಯಾರೇ ಬಂದರೂ ನಮಗೆಲ್ಲಾ ಪರಮಾನಂದ. ಏಕೆಂದರೆ ಅವರಿಗೆಲ್ಲ ಕೊಡಲು ನಮ್ಮ ತಾಯಿಯವರು ವಿಧವಿಧವಾದ ಖಾದ್ಯ ತಯಾರಿಸುತ್ತಿದ್ದರು ಮತ್ತು ಆ ಅತಿಥಿಗಳ

ಮುಖವನ್ನೊಮ್ಮೆ ನೋಡಿ ತಿಂಡಿ-ಕಾಫಿ ನೀಡಿಬರುವ ಮೆಹರಬಾನಿ ಬೇರೆ ಸಿಕ್ಕುತ್ತಿತ್ತು. ಅವತ್ತೇನಾರೂ ತಂದೆಯವರು "ಇವಳು ನನ್ನ ಮಗಳು ಲೀಲಾ" ಎಂದು ಪರಿಚಯಿಸಿಬಿಟ್ಟರಂತು ಸ್ವರ್ಗಕ್ಕೆ ಮೂರೇ ಗೇಣು ಉಳಿಯುತ್ತಿತ್ತು. ತಂದೆಯವರು ಬಂದ ಅತಿಥಿಗಳಿಗೆ ಕರ್ಣ ರಸಾಯನ ಉಣಿಸುವಲ್ಲಿ ಸಫಲರಾದರೆ ತಾಯಿಯವರು ಜಿಹ್ವೆಗೆ ಪರಮರಸಾಯನ ಉಣಿಸುತ್ತಿದ್ದರು.

ಆಕಾಶವಾಣಿಯಲ್ಲಿದ್ದ ಪ್ರತಿಯೊಬ್ಬರು ತಂದೆಯವರ ಚಿರಪರಿಚಿತರೇ, ಅದರಲ್ಲಿ ವಿಶೇಷವಾಗಿ ವಾಮನರಾವ್, ಎನ್. ಕೆ. ಯಾಮಿನಿಮೂರ್ತಿ, ಎಸ್. ಕೃಷ್ಣಮೂರ್ತಿ ಇವರನ್ನು ಅವರ ಆಪ್ತವಲಯದಲ್ಲಿ ಸೇರಿಸಬಹುದು. ೧೯೭೮ರ ಮುಂಜಾನೆ ೬ ಗಂಟೆಗೆ ಸ್ವತಃ ಆಕಾಶವಾಣಿಯ ಡೈರೆಕ್ಟರ್ ಮನೆಗೆ ಬಂದರು, "ಅಭಿನಂದನೆಗಳು" ಎಂದು ಹೇಳಿದರು. ತಂದೆಯವರು ಊರಲ್ಲಿಲ್ಲ; ನಾನು ಮತ್ತು ತಾಯಿಯವರು ದಿಙ್ಮೂಢರಾದೆವು. ಆಗ ನಾನು "ಯಾವುದೋ ಪ್ರಶಸ್ತಿ ಬಂದಿರಬೇಕಲ್ಲವೆ" ಎಂದಾಗ "ಯಾವುದೋ ಪ್ರಶಸ್ತಿ ಅಲ್ಲಮ್ಮಾ ದೊಡ್ಡ ರಾಷ್ಟ್ರಪತಿ ಪ್ರಶಸ್ತಿಯೇ" ಬಂದಿದೆ ಎಂದು ಹೆಮ್ಮೆಯಿಂದ ನುಡಿದಾಗ ನಾವು ಅನುಭವಿಸಿದ ಸಂಭ್ರಮ ಹೇಳತೀರದು.

ನಾವು ಎಂಟುಜನ ಹೆಣ್ಣುಮಕ್ಕಳ ನಂತರ ಒಬ್ಬನೆ ಒಬ್ಬ ತಮ್ಮ ಜನಿಸಿದ್ದ. ಆತನೂ ತಾಯಿಯ ಗುಣವನ್ನು ರೂಪವನ್ನು ಎರಕಹೊಯ್ದುಕೊಂಡಿದ್ದ. ೮ ವರ್ಷಕ್ಕೆ ಉಪನಯನವನ್ನು ತಂದೆಯವರು ಶಾಸ್ತ್ರೋಕ್ತವಾಗಿ ನೆರವೇರಿಸಿದ್ದರು. ಆ ಚಿಕ್ಕ ವಯಸ್ಸಿನಲ್ಲಿಯೇ ಮಂತ್ರಗಳನ್ನೆಲ್ಲ ಸ್ಫುಟವಾಗಿ ಹೇಳುತ್ತಿದ್ದ. ಅವನ ಮೇಲೆ ತಂದೆಯವರು ಬಹಳ ಆಸೆಯನ್ನಿರಿಸಿಕೊಂಡಿದ್ದರು, ಅವನಿಗೆ ಸೈಕಲ್ ಹೇಳಿಕೊಡಲು ತಾವೂ ಅವನೊಂದಿಗೆ ೫-೬ ಕಿ. ಮೀಟರ್ ಕ್ರಮಿಸುತ್ತಿದ್ದರು. ೧೯೭೩ ಮೇ ತಿಂಗಳಲ್ಲಿ ಈ ಸುಂದರ ಸಂಸಾರವನ್ನು ನುಚ್ಚುನೂರು ಮಾಡುವ ಘಟನೆ ನಡೆಯಿತು. ಕಾವೇರಿಯ ಸುಳಿಯಲ್ಲಿ ನನ್ನ ತಮ್ಮ ಹಾಗೂ ತಂಗಿಯರು ದೇವರಿಗೆ ಪ್ರಿಯರಾದರು. "ಪುತ್ರ ಶೋಕಂ ನಿರಂತರಂ" ಎಂಬಂತೆ ಮೊದಲೇ ಕೃಶರಾದ ಅವರು ಇನ್ನೂ ಕುಗ್ಗಿಹೋದರು. ಇನ್ನಷ್ಟು ವ್ಯಗ್ರರಾದರು. ಮನೆಯಲ್ಲಿ ಆ ಮಕ್ಕಳನ್ನು ಜ್ಞಾಪಿಸುವ ಒಂದೂ ಭಾವಚಿತ್ರ ಇರಕೂಡದೆಂದು ಆಗ್ರಹಮಾಡಿದರು. ಪೂಜೆ ಅಭಿಷೇಕಗಳನ್ನು ಸಂಪೂರ್ಣವಾಗಿ ತೊರೆದರು. ಮಲಗುವಾಗ, ನಿತ್ಯಕರ್ಮಗಳನ್ನು ತೀರಿಸುವಾಗ ಮಾತ್ರ ಅವರ ದರ್ಶನ ಮಾಡಬಹುದಾಗಿತ್ತು. ಇನ್ನೆಲ್ಲ ವೇಳೆಯನ್ನು ಗ್ರಂಥಾಲಯದಲ್ಲೇ ಕಳೆಯತೊಡಗಿದರು.

ಆ ದುರ್ಮರಣದಿಂದಾಗಿ ನಾನು ಮನೆಗೆ ಕೊನೆಯವಳಾದೆ. ಅದುವರೆಗೆ ತಂದೆಯವರೊಂದಿಗೆ ಮಾತನಾಡಲು ಅಂಜಿ ಸಾಯುತ್ತಿದ್ದ ನಾನು ಸ್ವಲ್ಪ ಸ್ವಲ್ಪವಾಗಿ ಮಾತನಾಡಲು ಕಲಿತೆ, ಘೋರ ವ್ಯಾಘ್ರರೂಪದ ತಂದೆಯ ಹಿಂದೆ ಅತಿ ಭಾವುಕರಾದ ಪ್ರೀತಿಪಾತ್ರರಾದ ಮನೋಕ್ಲೇಶದಲ್ಲಿ ತೊಳಲಾಡುವ ಮೂರ್ತಿಯನ್ನು ಕಂಡೆ. ಹೇಗಾದರೂ ಅವರಿಗೆ ಸಂತೋಷ ತರಬೇಕು ಮಗನಿಲ್ಲವೆಂಬ ಅವರ ಕೊರಗು ದೂರಾಗಬೇಕೆಂದು ಸಂಕಲ್ಪಮಾಡಿದೆ. ಹೀಗಾಗಿ

ನಾನು ಎಂ.ಎ, ಪಿಹೆಚ್.ಡಿ., ಪದವಿಗಳನ್ನು ಮಾಡಲು ಸಾಧ್ಯವಾಯಿತು. (ಡಾ|| ಕೆ. ಕೃಷ್ಣಮೂರ್ತಿ ಚಿನ್ನದ ಪದಕ ಪಡೆದ ಮೊದಲ ಅಭ್ಯರ್ಥಿ ನಾನು.) ಚಿನ್ನದ ಪದಕಗಳನ್ನು, ರ್‍ಯಾಂಕ್ ಪಡೆಯಲು ಸಾಧ್ಯವಾಯಿತು. ನನ್ನಲ್ಲಿ ಯಾವತ್ತೂ ಹೇಳುವದಿತ್ತು "ಲೀಲು ನೀನು ತುಂಬಾ ವಿಷಯದಲ್ಲಿ ಗಮನಹರಿಸ್ತಿಯಾ ಆದ್ದರಿಂದ ಒಂದು ವಿಷಯದಲ್ಲಿ ಕೇಂದ್ರೀಕರಿಸಲಾಗುತ್ತಿಲ್ಲ ಎಲ್ಲವನ್ನು ಬಿಡು ಒಂದನ್ನು ಹಿಡಿ! ನಾವ್ಯಾರೂ ಸಂಸ್ಕೃತವನ್ನು ತೆಗೆದುಕೊಳ್ಳಲು ಅವರು ಎಂದೂ ಪ್ರೋತ್ಸಾಹಿಸಲಿಲ್ಲ. "ನಾ ಇಷ್ಟೆಲ್ಲ ಓದಿ ಕೆಲಸಕ್ಕೆ ಕಷ್ಟಪಟ್ಟಿದ್ದೇ ಸಾಕು ನಿಮಗ್ಯಾರಿಗೂ ಈ ನೋವು ಬೇಡ" ಎನ್ನುವರು. ಅವರಿಗರಿವಿಲ್ಲದಂತೆ ಬಿ.ಎ ಯಲ್ಲಿ ಮೈನರ್ ಸಂಸ್ಕೃತ ತೆಗೆದುಕೊಂಡೆ. ಅವರು ಸಂಪಾದಿಸಿದ ಪಠ್ಯ ಗ್ರಂಥಗಳನ್ನು ನಾ ಓದುವಂತಾಯ್ತು. ಆಗೆಲ್ಲ ಅಂದುಕೊಂಡಿದ್ದುಂಟು "ಮನೆಯಲ್ಲಿ ಕಂಡು ಬರುವ ಸಾಮಾನ್ಯರಲ್ಲಿ ಸಾಮಾನ್ಯನಾದ ಕೃಷ್ಣಮೂರ್ತಿಯೇ ಬೇರೆ ವಿದ್ವಾಂಸ ಕೃಷ್ಣಮೂರ್ತಿಯೇ ಬೇರೆ" ಎಂದು.

ಡಾ|| ಕೆ. ಕೆ. ಎನ್ನುವ ವ್ಯಕ್ತಿ ಸಂಸ್ಕೃತ ವಿದ್ವಲ್ಲೋಕದ ಅವಿಸ್ಮರಣೀಯ ಪರಮಹಂಸರೆನ್ನುವ ಅರಿವಾದದ್ದು ಸಂಸ್ಕೃತ ಎಂ.ಎ ಓದುವಾಗ. ನಾನು ಎಂ.ಎ ಪರೀಕ್ಷೆ ಕಟ್ಟಿದಾಗ ತುಂಬುಗರ್ಭಿಣಿ, ಹಾಗಾಗಿ ಪ್ರಶಾಂತಿನಿಲಯಕ್ಕೆ ತಂದೆ ಮನೆಗೆ ಹೋಗಿದ್ದೆ ಅವರ ಕೈಲಿ ಧ್ವನ್ಯಾಲೋಕ, ಕಾವ್ಯಪ್ರಕರವನ್ನು ಕಲಿಯುವ ಪರಮ ಸೌಭಾಗ್ಯ ನನಗೆ ದೊರೆಯಿತು. ನಾವು ಮಕ್ಕಳು ಭಯಪಡುವುದಿರಲಿ ಅವರ ಶಿಷ್ಯರೂ ನಮಗಿಂತ ಹೆಚ್ಚಾಗಿ ಭಯ ಭಕ್ತಿ ಗೌರವಗಳನ್ನು ಹೊಂದಿದ್ದರ ಕಾರಣವಿಷ್ಟೇ ಅವರ ನಿಶಿತಮತಿ, ಪ್ರಖರಪ್ರತಿಭೆ ವಿಸ್ಮಯ ಹುಟ್ಟಿಸುವ ಅಗಾಧಸ್ಮರಣೆಯಿಂದಾಗಿ ದೂರ ನಿಲ್ಲುವಂತಾಗುತ್ತಿತ್ತೆಂದರೆ ಉತ್ಪ್ರೇಕ್ಷೆಯಾಗಲಾರದು.

ಅವರು ನನಗೆ ಮೆಚ್ಚಿನ ತಂದೆಯಷ್ಟೇ ಅಲ್ಲ ಮಾರ್ಗದರ್ಶಕರೂ ಆಗಿದ್ದರು. ನಾನು ಮೈಸೂರಿನಲ್ಲಿ ಬಂದು ನೆಲೆಸಿದ ಮೇಲೆ ಅವರೊಂದಿಗೆ ನನ್ನ ಸಾಂಗತ್ಯ ಹೆಚ್ಚಾಯಿತು. "ಅಂದಿನ ಕೆಲಸ ಅಂದೇ ಮುಗಿಸಬೇಕು; ಸಾಧ್ಯವಾದರೆ ಈ ಕ್ಷಣವೇ ಮುಗಿಸಬೇಕು ಎನ್ನುವುದು ಅವರ ಪ್ರವೃತ್ತಿ". ನಾನು ಪಿಹೆಚ್.ಡಿಯನ್ನು ಮಾಡುವಾಗಿನ ಸಮಯದಲ್ಲಿ ಏನಾದರೂ ಬರೆದುಕೊಂಡು ಹೋಗಿ ತೋರಿಸಿದರೆ ನಿರ್ದಾಕ್ಷಿಣ್ಯವಾಗಿ ಮುಖದಮೇಲೆ ಎಸೆಯುತ್ತಿದ್ದರು. ಗ್ರಂಥಾಲಯದಲ್ಲಿ ಆ ವಿಷಯಕ್ಕೆ ಸಂಬಂಧಪಟ್ಟ ಬೇರೆ ನಿಯತಕಾಲಿಕೆಗಳನ್ನು ಗ್ರಂಥಗಳನ್ನು ಅವಲೋಕಿಸಿ ಮತ್ತೊಮ್ಮೆ ಪೂರ್ತಿ ಬರೆದು ತೋರಿಸಬೇಕಾಗುತ್ತಿತ್ತು. ಆಗ ವಿಮರ್ಶಕ ಕೃಷ್ಣಮೂರ್ತಿ ಜಾಗೃತರಾಗುತ್ತಿದ್ದರೂ, ಸಣ್ಣ ತಪ್ಪಿನ ಖಂಡನೆ ಮಂಡನೆಯಾಗುತ್ತಿತ್ತು.

ತಂದೆಯವರು ೧೯೮೭ ರಲ್ಲಿ ಪುನಃ ಮೈಸೂರಿಗೆ ಬಂದು ನೆಲೆಸಿದ ಮೇಲೆ ಅವರು ಅನೇಕ ಸನ್ಮಿತ್ರರೊಡನೆ ಕಳೆಯುವ ಸಂದರ್ಭ ಒದಗಿತು. ಪ್ರೊ|| ಸಿ. ಡಿ. ನರಸಿಂಹಯ್ಯ, ಪ್ರೊ|| ವೆಂಕಟಾಚಲಶಾಸ್ತ್ರಿ, ಪ್ರೊ|| ದೇ. ಜವರೇಗೌಡ, ಮತ್ತೂರು ಕೃಷ್ಣಮೂರ್ತಿ, ಜಿ. ಟಿ. ನಾರಾಯಣರಾವ್,

ಪ್ರೊ॥ಎಸ್.ರಾಮಚಂದ್ರರಾವ್, ಪ್ರೊ॥ರಾ. ಸತ್ಯನಾರಾಯಣ, ಪ್ರೊ॥ ಚನ್ನಕೇಶವ, ಎಚ್. ವಿ. ನಾಗರಾಜರಾವ್, ಡಿ. ವಿ. ಕೆ. ಮೂರ್ತಿ, ಸುಜನಾ, ಫಿಲಿಯೋಜಾ ದಂಪತಿಗಳು, ಪ್ರೊ॥ ಶಂಕರನಾರಾಯಣರಾವ್ ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಸಂಸ್ಕೃತ ವಿಭಾಗಕ್ಕೆ ಯಾವ ವಿದ್ವಾಂಸರೇ ಬರಲಿ ತಂದೆಯವರನ್ನು ಕಾಣದೆ ಹಿಂದಿರುಗುತ್ತಿರಲಿಲ್ಲ.

ಪ್ರೊ॥ ಕೃಷ್ಣಮೂರ್ತಿಯವರಿಗೆ ಅವರ ಜೀವನದಲ್ಲಿ ಪ್ರಭಾವ ಬೀರಿದ ವ್ಯಕ್ತಿಗಳೆಂದರೆ, ಆಂಗ್ಲ ಅಧ್ಯಾಪಕರಾಗಿದ್ದ ಪ್ರೊ॥ ರೋಲೋ ಅವರು ಹಾಗೂ ಎ.ಆರ್. ಕೃಷ್ಣಶಾಸ್ತ್ರಿಗಳು. ಅವರ ಪ್ರೇರಣೆಯಿಂದಲೇ ಪ್ರಬುದ್ಧ ಕರ್ನಾಟಕದಲ್ಲಿ ಬರೆಯುವಂತಾದದು. ಬಾಗಲಕೋಟೆಯಲ್ಲಿ ಅವರು ಸ್ವಶ್ರಮದಿಂದ ೩ ತಿಂಗಳಲ್ಲಿ ಪಿಎಚ್.ಡಿ., ಮುಗಿಸಲು ಸಾಧ್ಯವಾಯಿತೆಂದರೆ ಪ್ರೊ॥ ಕೆ. ಆರ್. ಶ್ರೀನಿವಾಸಯ್ಯಂಗಾರರ ಪ್ರೇರಕ ಶಕ್ತಿಯಿಂದಲೇ. ಹಾಗೆಯೇ ಪ್ರೊ॥ ಹಿರಿಯಣ್ಣನವರ ಮಾರ್ಗದರ್ಶನವೂ ಇವರು ದಾರ್ಶನಿಕರಾಗಲು ನೆರವಾದವು. ಪ್ರೊ॥ ಎಚ್. ಎಂ. ಶಂಕರನಾರಾಯಣರಾಯರು ಬೆನ್ನುತಟ್ಟಿ ಪ್ರೋತ್ಸಾಹಿಸಿ, ನೀನು ಅಲಂಕಾರ ಶಾಸ್ತ್ರದ ಯಾವುದೇ ಗ್ರಂಥವನ್ನು ಅನುವಾದ ಮಾಡು ನಾನು ಅಚ್ಚು ಹಾಕಿಸುತ್ತೇನೆ ಎಂದು ಭರವಸೆ ನೀಡಿದ್ದರಿಂದಲೇ ಕನ್ನಡ ಸಾಹಿತ್ಯಲೋಕ ಸಂಸ್ಕೃತದ ಪ್ರಮುಖವಾದ ಸಮಗ್ರ ಅಲಂಕಾರ ಗ್ರಂಥಗಳ ಸಮರ್ಥ ಅನುವಾದ ಕಾಣುವಂತಾಯಿತು. ಕವಿ ಕುವೆಂಪುರವರಿಗೂ ತಂದೆಯವರನ್ನು ಕಂಡರೆ ಪರಮಾದರ, ತಮ್ಮ ಸನ್ಮಾನ ಗ್ರಂಥದಲ್ಲಿ ಡಾ॥ ಕೆ. ಯವರ ಕಂದಪದ್ಯ ಇರಲೇಬೇಕೆಂದು ಆಗ್ರಹಮಾಡಿ ಬರೆಸಿಕೊಂಡರು. ಕನ್ನಡ ಕೀರಾತಾರ್ಜುನೀಯವನ್ನು ಮೊದಲು ಪಠ್ಯ ಗ್ರಂಥ ಎಂದು ಪ್ರಕಟಿಸಿ ಅನಂತರ ಇವರ ಕೈಲಿ ಬರೆಸಿದವರು.

ತಂದೆಯವರು ಒಂದು ಸಲ ಬರೆದ ಮೇಲೆ ಆಗಿಹೋಯಿತು, ಅವರು ಎಂದಿಗೂ ಎರಡು ಬಾರಿ ಬರೆದವರಲ್ಲ ತಿದ್ದಿದವರಲ್ಲ. ಅಷ್ಟು ಅಚ್ಚುಕಟ್ಟಾಗಿ ಬರೆಯುವರು. ವಿಮರ್ಶೆ, ಕರಡುಗಳನ್ನು ತಿದ್ದುವದು ಅವರಿಗೆ ಪರಮಹವ್ಯಾಸ, ಮತ್ತೊಬ್ಬರ ದೋಷಗಳನ್ನು ಆಮೂಲಾಗ್ರವಾಗಿ ಪರೀಕ್ಷಿಸುವುದೆಂದರೆ ವಿದ್ವಾಂಸರಿಗೆ ಪರಮಪ್ರಿಯವೆಂದು ತೋರುತ್ತದೆ. ಅವರ ಶಿಷ್ಯಕೋಟಿ ಬಹಳ ಹಿರಿದು. ಅದರಲ್ಲಿಯೂ ಅವರ ಅಚ್ಚುಮೆಚ್ಚಿನ ಶಿಷ್ಯರೆಂದರೆ ರಾ. ಗಣೇಶ್, ಎಚ್. ವಿ. ನಾಗರಾಜರಾವ್ ಹಾಗೂ ಕುಮಾರ ನಿಜಗುಣರು, ಇವರ ದಿಶೆಯಲ್ಲಿಯೇ ಅವರು ಶಾಸ್ತ್ರ ಪ್ರಾವೀಣ್ಯವನ್ನು ಪಡೆದವರಷ್ಟೇ ಅಲ್ಲ ಅವರ ಅನುಕರಣೀಯ ವಿಧೇಯತೆಯು ಅವರನ್ನು ಆಕರ್ಷಿಸುತ್ತಿತ್ತು.

ತಂದೆಯವರಿಗೆ ರಾಜ್ಯ, ರಾಷ್ಟ್ರ, ಅಕಾಡೆಮಿಗಳಿಂದ ಅನೇಕ ಪ್ರಶಸ್ತಿಗಳು ಬಂದಿರಬಹುದು. ಆದರೆ ಅವರಿಗೆ ಅತ್ಯಂತ ಸಂತಸತಂದ ಕ್ಷಣಗಳೆಂದರೆ ಲಂಡನ್ನಿನ ಭಾರತೀಯ ವಿದ್ಯಾಭವನದಲ್ಲಿ ಸಂಸ್ಕೃತದ ನಿಯೋಗಕ್ಕೆ ನೇತೃತ್ವವಹಿಸಿ ಆ ಸಮ್ಮೇಳನದಲ್ಲಿ ಭಾಗವಹಿಸಿದ್ದು, ಅಲ್ಲಿ 'ಸಂದರ್ಶಕ ಪ್ರಾಧ್ಯಾಪಕರೆಂದು' ಮನ್ನಣೆ ಪಡೆದದ್ದು ಹಾಗೂ ಅವರ ೭೦ನೆಯ ವರ್ಷದ ಸಂದರ್ಭ

ದಲ್ಲಿ ಅವರ ಅಭಿಮಾನಿ ಮಿತ್ರರು, ವಿದ್ವಾಂಸರು ಸೇರಿ ಅರ್ಪಿಸಿದ 'ಅಭಿಜ್ಞಾನ' (ಕನ್ನಡ) 'ಆನಂದಭಾರತಿ' (ಇಂಗ್ಲಿಷ್ ಹಾಗೂ ಸಂಸ್ಕೃತ) ಗ್ರಂಥಗಳಿದುರು ಯಾವುವು ಸಾಟಿಯಾಗಲಾರವು. ಅಂದು ತುಂಬಿದ ಸಭೆಯಲ್ಲಿ ಡಾ|| ಕೆ. ಕೆ. ಯವರು ಭಾವುಕರಾಗಿ "ನಾ ವ್ಯಾಸಂಗ ಮಾಡಿದ ಊರಿನಲ್ಲಿ ಕೆಲಸ ದೊರೆಯದಿದ್ದರೂ ೨೫-೩೦ ವರ್ಷಗಳವರೆಗೆ ಮೈಸೂರಿಗೆ ಪರಕೀಯ ನಾಗಿಯೇ ಉಳಿದಿದ್ದರೂ ಇಂದು ನನ್ನನ್ನು ಅಭಿನಂದಿಸುವ ಸನ್ಮಾನಿಸುವ ವಿದ್ವಾಂಸ ವೃಂದ ಮೈಸೂರಿನಲ್ಲಿ ಇದೆಯಲ್ಲ ಎಂದು ಅಮಿತಾನಂದವಾಗುತ್ತಿದೆ" ಎಂದು ನುಡಿದಿದ್ದನ್ನು ಸ್ಮರಿಸಬಹುದು. "ಇದು ನನ್ನ ಜೀವನದಲ್ಲಿ ಅವಿಸ್ಮರಣೀಯವಾದ ದಿನ" ಎಂದು ಸಂತಸಪಟ್ಟಿದ್ದರು.

ಡಾ|| ಕೆ. ಕೆ. ಯವರ ಅಲಂಕಾರ ಗ್ರಂಥಗಳ ಅನುವಾದವೇ ಇರಲಿ, ಸ್ವಂತ ರಚನೆಗಳಿರಲಿ, ಆಂಗ್ಲ ಭಾಷೆಯ ಕೃತಿಗಳಿರಲಿ, ವಿದ್ವಲ್ಲೇಖನಗಳೇ ಇರಲಿ ಎಲ್ಲೆಡೆಗೂ ನಾವು ಕಾಣುವುದು ಯಾರೂ ಅನ್ವೇಷಿಸದ ಹೊಸ ವಿಷಯಗಳನ್ನು ನಿರೂಪಿಸುವ ಸಂಶೋಧಕ ಮನೋಭಾವವನ್ನು ಹಾಗೂ ಒಂದೊಂದು ಕೃತಿಯಲ್ಲೂ ಅವರ ಪ್ರತಿಭೆ ಭೂಮಿಯನ್ನು ಸೀಮೋಲ್ಲಂಘನೆ ಮಾಡಿ ಗಗನಗಾಮಿಯಾಗಿ ವಿಹರಿಸುತ್ತಿತ್ತು.

ತಂದೆಯವರ ಏಕಾಗ್ರಚಿತ್ತತೆ ಮೈನವಿರೇಳಿಸುವಂತಹದು. ಒಂದು ಬಾರಿ ಕುಮಟಿಯಲ್ಲಿ ನನ್ನ ಅಕ್ಕ ಅಸ್ವಸ್ಥಳಾದ್ದರಿಂದ ವೈದ್ಯರಿಗೆ ತಾವೆ ಸ್ವತಃ ಹೋಗಿ ತಿಳಿಸಿ ಬಂದರು. ಅವರು ಬಂದಿರೆ ಗೊತ್ತಾಗಲಿ ಎಂದು ವರಾಂಡದಲ್ಲಿ ಓದಲು ಕುಳಿತರು. ಬಂದ ವೈದ್ಯರು ೪-೫ ಬಾರಿ ಕದ ತಟ್ಟಿದರು. ಏನೂ ಉತ್ತರ ಬರದೆ ಇದ್ದದ್ದರಿಂದ ಹಿಂಬಾಗಿಲಿಂದ ಬಂದರು. ಆಗ ತಾಯಿಯವರು "ಯಾಕೆ ಯಜಮಾನ್ರು ಅಲ್ಲೇ ಇದ್ರಲ್ಲಾ ಬಾಗಿಲು ತೆಗಿಲಿಲ್ವಾ" ಎಂದು ಕೇಳಿದ್ದಕ್ಕೆ, ಬಾಗಿಲು ತಟ್ಟಿದೆ. "ಕೃಷ್ಣಮೂರ್ತಿಯವರ ದೇಹ ಮಾತ್ರ ಇಲ್ಲಿತ್ತು, ಅವರು ಧ್ಯಾನಾಸಕ್ತರಾಗಿದ್ದರು, ತಪಸ್ಸು ಎನ್ನುವುದನ್ನು ಸ್ವತಃ ದರ್ಶಿಸುವ ಭಾಗ್ಯ ನನ್ನದಾಯಿತು" ಎಂದು ನುಡಿದರು.

ಹಾಗೆಯೇ ತಂದೆಯವರಿಗೆ ಯಾವುದಾದರೂ ಒಂದು ಟಪಾಲು ಬಂದಿತೆಂದರೆ ಆ ಕ್ಷಣವೇ ಆ ವಿಷಯವಾಗಿ ಗ್ರಂಥಾಲಯಕ್ಕೆ ಹೋಗಿ ಟಿಪ್ಪಣಿ ಪುಸ್ತಕದಲ್ಲಿಯೇ ಮಾಡಿಕೊಂಡು ತತ್‌ಕ್ಷಣವೇ ಬರೆದು ಮರುಟಪಾಲಿಗೆ ಕಳಿಸುವವರೆಗೆ ಸಮಾಧಾನವಿರುತ್ತಿರಲಿಲ್ಲ. ಹಾಗೆಯೇ ಹಣ ವ್ಯಯ ಮಾಡುವುದರಲ್ಲಿಯೂ ಅಗತ್ಯಕ್ಕಿಂತ ಹೆಚ್ಚಾಗಿ ಖರ್ಚು ಮಾಡುತ್ತಿರಲಿಲ್ಲ. ಆದರೆ ಮಾಡುವ ಕರ್ತವ್ಯವೊಂದನ್ನೂ ಮುಂದೂಡುತ್ತಿರಲಿಲ್ಲ.

ಭಾರತೀಯ ವಿದ್ಯಾಭವನದ ಆಶ್ರಯದಡಿ ಬಂಕಿಮಚಂದ್ರ 'ಕೃಷ್ಣಚರಿತ'ದ ಸಂಪೂರ್ಣ ಅನುವಾದವನ್ನು ಮಾಡಿ ಮುಗಿಸಿದರು. ಅವರು ಆಸ್ಪತ್ರೆಗೆ ಸೇರುವ ಮೊದಲು ಕಾಣೆಯವರ ಧರ್ಮಶಾಸ್ತ್ರದ ಮುನ್ನುಡಿಗಳನ್ನೆಲ್ಲಾ ಅನುವಾದಿಸಿ ಕೊಟ್ಟರು. ಹಿಡಿದ ಕೆಲಸದ ಛಲ ಬಿಡದೇ ಅನಾರೋಗ್ಯದಲ್ಲಿಯೂ ಮಾಡಿ ಮುಗಿಸುತ್ತಿದ್ದುದು ಅವರ ವಿಶೇಷ.

"ಅಣ್ಣಾ ಯಾವುದಾದ್ರು ವಿಹಾರ ಪ್ರದೇಶಕ್ಕೆ ಕರೆದುಕೊಂಡು ಹೋಗಿ, ನೀವು ಮೀಟಿಂಗ್ ಸೆಮಿನಾರ್ ಅಂತ ಎಲ್ಲ ಕಡೆ ಹೋಗಿಬರ್ತೀರಿ" ಅಂದರೆ ನಸುನಗುತ್ತಾ "ಅದಕ್ಕೆ ನಿಮ್ಮನ್ನ ಕರಕೊಂಡು ಹೋಗಿಲ್ಲಾ ಹೋಗಿಲ್ಲಾಮ್ಮ;" "ಎಲ್ಲಾ ಕಡೇ ಅದೇ ಆಕಾಶ, ಅದೇ ಭೂಮಿ, ಅದೇ ನೀರು, ಜನ, ಮಾತು, ಕಟ್ಟಡ ಮಾತ್ರ ಸ್ವಲ್ಪ ವ್ಯತ್ಯಾಸ" ಅಷ್ಟೇ ಎನ್ನುತ್ತಿದ್ದರು.

ಧ್ವನ್ಯಾಲೋಕ ಲೋಚನದಲ್ಲಿ ಡಾ|| ಕೆಯರೀ ಸ್ವತಃ ಬರೆದಿರುವ ಪದ್ಯ :

ಆರಾಗರ್ಣತ್ತಮುಕಾವ್ಯ ಸಾರಸುಧೆಯೊಳ್
ಸಂಪ್ರೀತಿ ಶಾಸಿರ್ಪುದೋ
ಆರಾಗರ್ಣನ್ನತವಾಗ್ವಿಚಾರವಿಧಿಯೊಳ್
ಲೋಲಂ ಸದಾ ಮಾನಂ ।
ಆರಾಗಾರ್ಣವಗಮ್ಯಂಟೊ ರಾಗಮಧಿಕಂ
ಸಾರಸ್ವತಾಲೋಕದೊಳ್
ಪಾರಾವಾರಮುವರ್ಗಿದೊ ರಸಮಾಯಂ
ಭದ್ರಂ ಶುಭಂ ಮಂಗಳಂ. ||



'ಶಿಕ್ಷಣದಂತೆ, ಸಾಕ್ಷರತೆ ಐತಿಹಾಸಿಕ ಬದಲಾವಣೆಯ ಒತ್ತಡವನ್ನು ತರುವುದಿಲ್ಲ. ಅದು ಬಿಡುಗಡೆಯ ಸಾಧನೆ ಮಾತ್ರವೇ ಅಲ್ಲ, ಎಲ್ಲಾ ಸಾಮಾಜಿಕ ಬದಲಾವಣೆಗೆ ಅಗತ್ಯವಾದ ಉಪಕರಣ.'

—(ಪರ್ಸಿಪೊಲಿಸ್ ಘೋಷಣೆ, ೧೯೭೫)

ದೇಶದಲ್ಲಿ ರಾಜಕೀಯ ನಿರ್ಧಾರದಿಂದ ಮಾತ್ರ ಅನಕ್ಷರತೆಯ ಮೇಲೆ ಜಯಗಳಿಸಲು ಸಾಧ್ಯ.

—(ಯುನೆಸ್ಕೊ)

ಕಾಲರಾ ರೋಗ

ಡಾ|| ಸ. ಜ. ನಾಗಲೋಟಿಮಠ
೨೫, "ಶಾಂತಾ" ಬಸವ ಕಾಲನಿ
ಬೆಳಗಾವಿ-೧೦

ಕಾಲರಾ ರೋಗವು ಇಡೀ ಜಗತ್ತನ್ನೇ ಹಲವಾರು ಸಲ ನಡುಗಿಸಿತ್ತು. ಎಲ್ಲ ದೇಶಗಳಲ್ಲೂ ಇದು ಆಮಂತ್ರಿಸದ ಅತಿಥಿಯಾಗಿ ನಡೆಯುತ್ತಿತ್ತು. ಲಕ್ಷಗಟ್ಟಲೇ ಜನರು ಸಾಯುತ್ತಿದ್ದರು. ಅಲ್ಲಿಂದ ರೋಗವು ಮುಗ್ಗಲಿನ ದೇಶಗಳಲ್ಲಿ ಸೇರುತ್ತಿತ್ತು. ಯಾತ್ರಿಕರ ಕರುಳಲ್ಲಿ ಕುಳಿತುಕೊಂಡು ದೇಶದಿಂದ ದೇಶಕ್ಕೆ ಚಲಿಸುತ್ತಿತ್ತು. ಒಂದೇ ಸಲ ಹತ್ತಾರು ದೇಶಗಳಲ್ಲಿ ಪಿಡುಗಿನ ರೂಪವನ್ನು ಕಂಡು ತಾಂಡವ ನೃತ್ಯವಾಡುತ್ತಿತ್ತು. ಎಲ್ಲ ಪಿಡುಗುಗಳೂ ಅಲ್ಲಿಂದಲೇ ಪ್ರಾರಂಭವಾಗುವವೆಂಬ ಭೀತಿ ಇತ್ತು. ಕರ್ನಾಟಕದಲ್ಲಿ ದುರ್ದೈವದಿಂದ ಈ ರೋಗವು ಬೆಂಗಳೂರಿನಲ್ಲಿ ತಳ ಊರಿದೆ ಎಂದು ತಿಳಿದು ಬಂದಿದೆ. ಕರ್ನಾಟಕದ ಹತ್ತಾರು ಪ್ರದೇಶಗಳಲ್ಲಿ ಈ ರೋಗ ಪ್ರತಿ ವರ್ಷ ಉಪಟಳವನ್ನು ತೋರಿಸದೇ ಬಿಡದು.

ಮುಂಮುವರೆದ ದೇಶಗಳಲ್ಲಿ ಇಂದು ನೀರು ಪೂರೈಕೆ ಸುರಕ್ಷಿತವಾಗಿದೆ. ಇದರಿಂದ ಕಾಲರಾ ರೋಗವು ಆ ದೇಶಗಳಿಂದ ನಿರ್ಮೂಲವಾಗಿದೆ. ಯಾವ ದೇಶಗಳಲ್ಲಿ ಇಂದಿಗೂ ಸುರಕ್ಷಿತ ನೀರು ಸರಬರಾಜು ಇಲ್ಲವೋ ಅಲ್ಲಿ ಕಾಲರಾ ರೋಗ ಬೇರು ಬಿಟ್ಟಿದೆ.

ಭಾರತದಲ್ಲಿ ಜಾತ್ರೆಗಳು ಬಹು ಪ್ರಸಿದ್ಧ. ಜಾತ್ರೆಗಳೆಂದರೆ ಕಾಲರಾ ರೋಗಕ್ಕೂ ಬಲು ಹಿಗ್ಗು. ಜಾತ್ರೆಗಳನ್ನು ನೋಡಲು ಜನರನ್ನು ಭೇಟಿಯಾಗಲು ಕಾಲರಾ ತಪ್ಪದೇ ಬರುತ್ತಿತ್ತು. ಅನೇಕ ಸಲ ಕಾಲರಾ ರೋಗವನ್ನು ಪ್ರತಿಬಂಧಿಸಲು ಜಾತ್ರೆಗಳನ್ನೇ ರದ್ದು ಪಡಿಸಬೇಕಾಗುತ್ತಿತ್ತು. ಭಾರತದ ಪರಿಸ್ಥಿತಿಯಲ್ಲಿ ಹೇಳುವಂಥ ಬದಲಾವಣೆ ಸುಧಾರಣೆಗಳೇ ಇಲ್ಲವೆಂದು ಒಪ್ಪಿಕೊಳ್ಳಬೇಕಾಗುತ್ತದೆ.

ಈ ರೋಗಕ್ಕೆ ಕಾರಣವೆಂದರೆ 'ಕಾಲರಾ ವಿಬ್ರಿಯೊ' ಎಂಬ ರೋಗಾಣು. ಇವುಗಳಲ್ಲಿ ಹಲವಾರು ಉಪಜಾತಿಗಳಿದ್ದರೂ ಎಲ್ಲವೂ ಮಾನವನನ್ನು ಪ್ರೀತಿಸುತ್ತವೆ. ಇವುಗಳು ಡೊಂಕಾಗಿದ್ದು ನೋಡಲು ಅರ್ಧವಿರಾಮದ ಆಕಾರ ಪಡೆದಿರುತ್ತವೆ. ಇವುಗಳಿಗೆ ಬಾರು ಕೋಲಿನಂಥ ಅಂಗವಿದ್ದು ರೋಗಾಣುವಿನ ಚಲನೆಯನ್ನು ಅದು ನೋಡುತ್ತದೆ. ದ್ರವದಲ್ಲಿ ಕಾಲರಾ ರೋಗಾಣುವಿನ ಚಲನೆ ಅತಿ ವೇಗವಾಗಿರುತ್ತದೆ. ಈ ರೋಗಾಣುವು ಕೇವಲ ಮಾನವರನ್ನು ಮಾತ್ರ ಪೀಡಿಸು

ತ್ತವೆ. ಅಂದರೆ ಬೇರೆ ಪ್ರಾಣಿಗಳಲ್ಲಿ ಇದರ ತೊಂದರೆ ಇಲ್ಲ. ರೋಗಾಣುವು ಕೆರೆ, ಭಾವಿ, ಹೊಂಡ, ಹೊಳೆ, ಹಳ್ಳಗಳ ನೀರಿನಲ್ಲಿ ಸ್ವತಂತ್ರವಾಗಿ ಬದುಕಲು ಕಲಿತಿದೆ.

ಮಾನವನ ದೇಹವನ್ನು ಈ ರೋಗಾಣುವು ಅನ್ನ ಮಾರ್ಗವಾಗಿ ಸೇರುತ್ತದೆ. ಕಶ್ಮಲಗೊಂಡ ನೀರು, ಪೇಯ ಹಾಗೂ ಆಹಾರ ಪದಾರ್ಥಗಳ ಮೂಲಕ ಕರುಳನ್ನು ಸೇರಿ ರೋಗವನ್ನು ಹುಟ್ಟಿಸುತ್ತದೆ. ರೋಗಿಯ ಪ್ರಮುಖ ಲಕ್ಷಣಗಳೆಂದರೆ ವಾಂತಿ ಹಾಗೂ ಬೇಧಿ. ಬೇರೆ ತೊಂದರೆಗಳು ಕಡಿಮೆ. ವಾಂತಿ ಬೇಧಿಗಳಿಂದ ರೋಗಿಯ ದೇಹದಲ್ಲಿಯ ನೀರು ಲವಣಗಳು ಕಡಿಮೆಯಾಗಿ ರೋಗಿ ಮರಣ ಹೊಂದುವನು. ಕಾಲರಾ ರೋಗಾಣುವು ಅಪ್ಪಿ ತಪ್ಪಿಯೂ ದೇಹದ ಅಂಗಾಂಗಗಳಲ್ಲಿ ಕಾಲಿಡುವುದಿಲ್ಲ. ಅದು ಕೇವಲ ಕರುಳಿನ ನಾಳ ರಂಧ್ರದಲ್ಲಿ ತನ್ನ ನೃತ್ಯವನ್ನು ಮಾಡುತ್ತದೆ. ಒಂದುಪಕ್ಷ ರೋಗಿಯ ದೇಹದ ನೀರು ಹಾಗೂ ಲವಣಗಳ ಪ್ರಮಾಣವನ್ನು ಸರಿಯಾಗಿಟ್ಟುಕೊಂಡರೆ ರೋಗಿಯು ಮರಣ ಹೊಂದುವುದಿಲ್ಲ. ಕಾಲರಾ ರೋಗಾಣು ಅವನನ್ನು ಏನೂ ಮಾಡದು. ರೋಗಾಣುಗಳನ್ನು ನಾಶ ಮಾಡುವಂಥ ಮದ್ದುಗಳು ಸಾಕಷ್ಟು ಇವೆ. ಆದರೆ ಅವುಗಳ ಬಳಕೆ ಅಷ್ಟು ಉಪಯುಕ್ತವಿಲ್ಲ. ಯಾಕೆಂದರೆ ರೋಗಾಣು ಕೇವಲ ಕರುಳಿನ ನಾಳರಂಧ್ರದಲ್ಲಿ ಮಾತ್ರ ಇರುತ್ತದೆ. ರೋಗಿಯ ಮಲ ಹಾಗೂ ವಾಂತಿಯಲ್ಲಿ ಅಸಂಖ್ಯ ರೋಗಾಣು ವಿಸರ್ಜಿಸಲ್ಪಡುತ್ತವೆ. ಈ ಪದಾರ್ಥಗಳು ನೀರಿನ ಹೊಂಡ, ಕೆರೆ, ಭಾವಿ, ಹಳ್ಳ, ಹೊಳೆಗಳನ್ನು ತಲುಪಿದರೆ ಸಾಕು ಆ ನೀರಿನಲ್ಲಿ ರೋಗಾಣು ವಿಪುಲವಾಗಿ ಬೆಳೆದು, ಜನರು ನೀರು ಕುಡಿದಾಗ ಅವರ ಅನ್ನ ಮಾರ್ಗವನ್ನು ಸೇರಿ ರೋಗ ತರುತ್ತದೆ.

ಮೇಲೆ ಹೇಳಿದಷ್ಟು ಕಾಲರಾ ರೋಗದ ಬಗ್ಗೆ ಸಾಕು. ಕಾಲರಾ ರೋಗಾಣುಗಳ ಜಾಣತನದ ಬಗ್ಗೆ ವಿಚಾರಿಸೋಣ. ಈ ರೋಗಾಣುವಿನ ತಲೆಯಲ್ಲಿ ಯಾವ ಕೆಟ್ಟ ವಿಚಾರಗಳೂ ಇಲ್ಲ. ಅದರ ಒಂದೇ ಒಂದು ಯೋಚನೆಯೆಂದರೆ ತನ್ನ ಪೀಳಿಗೆಯನ್ನು ಮುಂದುವರೆಸುವದು. ದಯಾಮಯನಾದ ದೇವರು ಅದಕ್ಕೆ ಜನ್ಮಕೊಟ್ಟಿದ್ದಾನೆ. ಅವನನ್ನು ನೆನೆಸಿ ತನ್ನ ಸಂತತಿಯನ್ನು ಬೆಳೆಸುವದು ಅದರ ಧ್ಯೇಯ.

ಕಾಲರಾ ರೋಗಾಣು ಸ್ವತಂತ್ರವಾಗಿ ಪರಿಸರದಲ್ಲಿಯ ನೀರಿನಲ್ಲಿ ಬೆಳೆಯುತ್ತ ತನ್ನಷ್ಟಕ್ಕೆ ತಾನಾಗಿ ಬದುಕುತ್ತಿರುತ್ತದೆ. ಅದು ಯಾರ ಸಂಪರ್ಕವನ್ನು ಪಡೆಯಲು ಆಸೆ ಪಡುವುದಿಲ್ಲ. ಮಾನವನು ತನ್ನ ತೃಷೆಗಾಗಿ ಈ ಜೀವಿಯು ವಾಸಿಸುತ್ತಿದ್ದ ನೀರನ್ನು ಕುಡಿಯುತ್ತಾನೆ. ಅಲ್ಲಿಂದಲೇ ಈ ಯುದ್ಧ ಪ್ರಾರಂಭ. ಕಾಲರಾ ರೋಗಾಣುವು ದೇಹವನ್ನು ಕುಡಿಯುವ ನೀರಿನೊಡನೆ ಇಲ್ಲವೆ ಕಶ್ಮಲಗೊಂಡ ನೀರಿನ ಸಂಪರ್ಕ ಪಡೆದ ಪೇಯಗಳೊಂದಿಗೆ ಜಠರ ಸೇರುವುದು. ಜಠರದಲ್ಲಿಯ ಆಮ್ಲವು ಈ ಜೀವಿಯನ್ನು ಸಂಹರಿಸಲು ಪ್ರಯತ್ನಿಸುವುದು. ಅಂಥ ಪ್ರಯತ್ನದಲ್ಲಿ ಅನೇಕ ಕಾಲರಾ ರೋಗಾಣುಗಳು ಮರಣ ಹೊಂದುವವು, ಉಳಿದ ಜೀವಿಗಳು ಹಾಗೂ ಹೀಗೂ ತಪ್ಪಿಸಿಕೊಂಡು ತಾವು ಬಂದ ಆಹಾರ ಪೇಯಗಳೊಡನೆ ಕರುಳನ್ನು ಸೇರುತ್ತವೆ.

ಸೇರುವಾಗ ಜಠರದ ಆಮ್ಲತೆ ಅದರ ಬೆನ್ನು ಹತ್ತಿ ಬಂದಿರುತ್ತದೆ. ಅಷ್ಟರಲ್ಲಿ ರೋಗಾಣುವಿನ ಪ್ರಾರ್ಥನೆ ದೇವರಿಗೆ ಮುಟ್ಟಿ ಕರುಳಿಗೆ ಪಿತ್ತರಸವು ಬಂದು ಸೇರುತ್ತದೆ. ಪಿತ್ತರಸ ಹಾಗೂ ಮೇದೋಜೀರಕದ ಸ್ರವಿಕೆಗಳು ಕ್ಷಾರವಾಗಿದ್ದು ಜಠರದ ಆಮ್ಲತೆಯನ್ನು ನಿರ್ನಾಮ ಮಾಡಿಬಿಡುತ್ತವೆ. ರೋಗಾಣುವಿನ ಬದುಕಿಗೆ ಬೇಕಾದುದು ಇದೆ. ಮತ್ತೊಮ್ಮೆ ದೇವರಿಗೆ ನಮಸ್ಕರಿಸಿ ರೋಗಾಣು ಸುತ್ತಲೂ ನೋಡುತ್ತದೆ. ಎಲ್ಲ ಕಡೆಗೂ ಕರುಳಿನ ಭಿತ್ತಿ ಕಾಣುತ್ತದೆ. ತಾನು ಸ್ವತಂತ್ರವಾಗಿ ಬಾಳುತ್ತಿದ್ದಾಗ ಇದ್ದ ವಿಶಾಲತೆ ಇಲ್ಲಿ ಇಲ್ಲ. ಇದು ತನಗೊಂದು ಜೇಲು ಎಂಬುದನ್ನು ತಿಳಿದುಕೊಳ್ಳುತ್ತದೆ. ಹೇಗಾದರೂ ಮಾಡಿ ಹೊರ ಹೋಗಲೇಬೇಕು. ತಾನು ಸಣ್ಣ ಸಂಖ್ಯೆಯಲ್ಲಿದ್ದರೆ ತನಗೆ ಉಳಿಗಾಲವಿಲ್ಲ ಎಂದು ತಿಳಿದು ತಕ್ಷಣ ತನ್ನ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುತ್ತದೆ. ರೋಗಾಣುವಿನ ಸಂಖ್ಯೆ ಹೆಚ್ಚಾದಂತೆ ತನ್ನ ಬಳಗದವರಿಗೆ ಈಜಾಡಲು ಓಡಾಡಲು ನೀರು ಕಡಿಮೆ ಎಂಬುದು ಅದರ ಗಮನಕ್ಕೆ ಬರುತ್ತದೆ. ಆಗ ತನ್ನ ದೇಹದಿಂದ ಒಂದು ಪದಾರ್ಥವನ್ನು ತಯಾರಿಸಿ ಅದನ್ನು ಕರುಳಿನ ಲೋಳ್ಪರೆಯ ಮೇಲೆ ಎಸೆಯುವುದು. ಈ ಪದಾರ್ಥವು ಒಂದು ವಿಷವಾಗಿರುತ್ತದೆ. ಅದು ಒಂದು ರೀತಿಯಲ್ಲಿ 'ಜಲಜನಕ' ಬಾಂಬ್ ಎಂದೇ ಕರೆಸಿಕೊಳ್ಳಲು ಯೋಗ್ಯ. ಈ ವಿಷಪದಾರ್ಥ ಕರುಳಿನ ಲೋಳ್ಪರೆಯ ಮೇಲೆ ತನ್ನ ಕಾರ್ಯ ನಡೆಸಿ ರೋಗಾಣುವಿಗೆ ಬೇಕಾದ ನೀರು ಹಾಗೂ ಲವಣಗಳನ್ನು ನಾಳ ರಂಧ್ರದಲ್ಲಿ ಸುರಿಯುವಂತೆ ಮಾಡುವುದು. ಲೋಳ್ಪರೆಯ ಜೀವಕಣಗಳು ಮಾನವನ ಜೀವಕಣಗಳು. ಅವನಿಗೆ ವಿಧೇಯವಾಗಿ ಅವನಿಗೆ ಬೇಕಾದ ಕಾರ್ಯವನ್ನು ಮಾಡಬೇಕು. ಇದರ ವ್ಯತಿರಿಕ್ತವಾಗಿ ರೋಗಾಣುವಿನ ವಿಷದ ಪರಿಣಾಮದಿಂದ ಕರುಳು ಲೋಳ್ಪರೆಯ ಜೀವಕಣಗಳು ತನ್ನ ಮಾಲಿಕನನ್ನು ಮರೆತು ರೋಗಾಣುವಿನ ಆಜ್ಞಾಧಾರಕವಾಗಿ ಅವುಗಳಿಗೆ ಬೇಕಾದ ನೀರು ಲವಣಗಳನ್ನು ಕರುಳಿನ ನಾಳರಂಧ್ರದಲ್ಲಿ ಸುರಿಯತೊಡಗುವುವು. ಒಂದು ರೀತಿಯಿಂದ ಮಳೆಗಾಲದ ಮಳೆಯಂತೆ ಆಗುವುದು. ದೇಹದಲ್ಲಿ ಎಷ್ಟು ನೀರಿದೆ. ಎಷ್ಟು ಲವಣವಿದೆ ಎಂಬುದನ್ನು ಗಣಿಸುವುದೇ ಇಲ್ಲ. ರೋಗಾಣುವಿಗೆ ಬೇಕು. ಮುಗಿಯಿತು. ತನ್ನ ನಿಜವಾದ ಮಾಲಿಕನು ತೊಂದರೆಯಲ್ಲಿ ಸಿಕ್ಕರೂ ಸಹ ಲೆಕ್ಕಿಸದೇ ರಕ್ತದಲ್ಲಿಯ ನೀರು ಲವಣಗಳನ್ನು ಹೀರಿ ಹೀರಿ ರೋಗಾಣುವಿನ ಕಡೆಗೆ ತಳ್ಳುವುದು. ಹೀಗೆ ಬರುತ್ತಿರುವ ನೀರಿನಲ್ಲಿ ರೋಗಾಣುವಿನ ಸಂತತಿಯು ವಂಶವೃದ್ಧಿ ಮಾಡತೊಡಗುವುದು. ತನ್ನನ್ನು ನುಂಗಿ ತೊಂದರೆ ಕೊಟ್ಟ ಮಾನವನಿಗೆ ರೋಗಾಣು ತೊಂದರೆ ಕೊಡುವ ಗೋಜಿಗೇ ಹೋಗುವುದಿಲ್ಲ. ಅದು ತನಗೆ ಬೇಕಾದ ಆಹಾರ, ನೀರು ಲವಣಗಳನ್ನು ಮಾತ್ರ ಆಮಂತ್ರಿಸಿದವನಿಂದ ತೆಗೆದುಕೊಳ್ಳುತ್ತವೆ. ನೀರು ಹಾಗೂ ಲವಣಗಳು ಮಾನವನಿಗೆ ಬೇಕಾಗಿರಬಹುದು. ಆದರೆ ಆಮಂತ್ರಿತವಾದ ಈ ಬ್ಯಾಕ್ಟೀರಿಯಾಗಳಿಗೂ ಬೇಕು. ಕಾರಣ ತಮಗೆ ಬೇಕಾದ ಪದಾರ್ಥಗಳನ್ನು ಮಾತ್ರ ಈ ಜೀವಿ ಯಾವ ತಡೆ ಇಲ್ಲದೇ ಹೀರಿಕೊಳ್ಳುವುದು. ಲೋಳ್ಪರೆಯು ತನ್ನ ಜೀವ

ಕಣಗಳಿಂದ ಗಾಮೊಗ್ಲೊ ಬುಲಿನ 'ಎ' ಎಂಬ ಸೂಕ್ಷ್ಮ ಜೀವಿ ನಾಶಕವನ್ನು ಸಾಮಾನ್ಯವಾಗಿ ಸ್ರವಿಸುತ್ತದೆ. ಇದರ ತೊಂದರೆಯನ್ನು ತಪ್ಪಿಸಲು ಕಾಲರಾ ರೋಗಾಣುವು ಇದು ಸ್ರವಿಸಲ್ಪಡದಂತೆ ಆಜ್ಞೆ ಕೊಡುತ್ತದೆ.

ಮುಂದಿನ ಯೋಜನೆ ಎಂದರೆ ಆಮಂತ್ರಿಸಿದ ಮಾನವನ ದೇಹದಿಂದ ಹೊರ ಬೀಳಬೇಕು. ಮಾನವನ ಅನ್ನನಾಳದಲ್ಲಿ ಸಿಲುಕಿಕೊಂಡ ಈ ಜೀವಿಗೆ ಎರಡೇ ದಾರಿ ಒಂದು ಗುದಮಾರ್ಗ ಎರಡನೆಯದು ಬಾಯಿಯ ಮಾರ್ಗ. ಸೂಕ್ಷ್ಮ ಜೀವಿಯು ಈಗ ಎರಡೂ ಮಾರ್ಗಗಳಿಂದ ಹೊರಡಲು ಯತ್ನಿಸುತ್ತವೆ. ತನ್ನಲ್ಲಿಯ ಬೇರೆ ವಿಷವನ್ನು ಕರುಳಿನ ಭಿತ್ತಿಯಲ್ಲಿರುವ ಸ್ನಾಯುಗಳ ಮೇಲೆ ಚೆಲ್ಲುತ್ತದೆ. ಆಗ ಕರುಳಿನ ಸ್ನಾಯುಗಳು ತಮ್ಮ ಕೆಲಸವನ್ನು ಮರೆತು ಸೂಕ್ಷ್ಮ ಜೀವಿಯ ಗುಲಾಮನಂತೆ ಕಾರ್ಯ ಪ್ರಾರಂಭಿಸುತ್ತವೆ. ಸ್ನಾಯುಗಳು ವಿಪರೀತ ಆಕುಂಚನ ಹೊಂದುತ್ತ ಕರುಳಿನ ನಾಳ ರಂಧ್ರದಲ್ಲಿ ಶೇಖರಗೊಂಡ ದ್ರವವನ್ನೂ ದ್ರವದಲ್ಲಿ ಈಜುತ್ತಿರುವ ಸೂಕ್ಷ್ಮ ಜೀವಿಗಳನ್ನು ಜೋರಿನಿಂದ ತಳ್ಳಲು ಪ್ರಾರಂಭಿಸುತ್ತವೆ. ಈ ಕಾರ್ಯದಲ್ಲಿ ಜಠರದ ಸ್ನಾಯುಗಳೂ ಸಹ ಕಾರ್ಯ ಮಾಡುತ್ತವೆ. ಇದರಿಂದ ಕರುಳಿನಲ್ಲಿಯ ದ್ರವವು ಜಠರವನ್ನು ಸೇರುವುದು. ಜಠರವು ಹೀಗೆ ಬಂದ ದ್ರವವನ್ನು ಜೋರಿನಿಂದ ಅನ್ನನಾಳದ ಮಾರ್ಗವಾಗಿ ಹೊರ ದಬ್ಬುತ್ತದೆ. ಇದನ್ನೇ ನಾವು ವಾಂತಿ ಎನ್ನುತ್ತೇವೆ. ಹೊರ ಬರುವ ದ್ರವವು ಯಾವ ರೀತಿಯಿಂದಲೂ ಜಠರವನ್ನು ಪೀಡಿಸದು ಆದರೂ ಜಠರ ದ್ರವವನ್ನು ಹೊರತಳ್ಳಿಬಿಡುವುದು. ಯಾಕೆಂದರೆ ಆಜ್ಞೆ ಸೂಕ್ಷ್ಮ ಜೀವಿಯದು. ಜಠರವು ಯಾವ ವಿಚಾರ ಮಾಡದೇ ತನಗೆ ಬಂದ ಆಜ್ಞೆಯನ್ನು ಪಾಲಿಸುವದು.

ಇನ್ನು ಉಳಿದ ಭಾಗದ ಕರುಳು ತನ್ನಲ್ಲಿಯ ದ್ರವಪದಾರ್ಥವನ್ನು ಜೋರಿನಿಂದ ತಳ್ಳುತ್ತ ಗುದಮಾರ್ಗದ ಕಡೆಗೆ ಓಡಿಸುವುದು. ದ್ರವವು ಒಳ್ಳೆಯ ವೇಗದಿಂದ ಓಡುತ್ತ ಗುದದ್ವಾರದಿಂದ ಹೊರಗೆ ಚಿಮ್ಮಲ್ಪಡುವುದು. ಇದನ್ನೇ ನಾವು ಬೇಧಿ ಎನ್ನುವೆವು. ಕರುಳೂ ಸಹ ರೋಗಾಣುವಿನ ಗುಲಾಮನಂತೆ ವರ್ತಿಸುವುದು. ಅದೂ ಸಹ ತನ್ನ ತಲೆಯನ್ನು ಓಡಿಸುವ ಗೋಜಿಗೆ ಹೋಗುವುದಿಲ್ಲ. ಗುದಮಾರ್ಗದಲ್ಲಿ ಗುದದ್ವಾರ ಇರುವುದು. ಇದು ಗುದಮಾರ್ಗವನ್ನು ಸದಾ ಮುಚ್ಚಿರುತ್ತದೆ. ಮಲವಿಸರ್ಜನೆಯ ಸಮಯದಲ್ಲಿ ಮಾತ್ರ ಸಡಿಲಾಗಿ ಮಲವು ಹೊರ ಹೋಗುವಂತೆ ಮಾಡುವುದು. ಇದರ ತಡೆಯನ್ನು ನಿವಾರಿಸಲು ಕಾಲರಾ ಸೂಕ್ಷ್ಮಾಣುವು ತನ್ನ ಪ್ರಭಾವ ಬೀರಿ ಈ ದ್ವಾರವು ಸದಾ ತೆರೆದಿರುವಂತೆ ಆಜ್ಞೆ ಮಾಡುತ್ತದೆ. ಹೀಗಾಗಿ ಮಾನವನು ಮಲವಿಸರ್ಜನೆಯನ್ನು ತನಗೆ ಗೊತ್ತಿಲ್ಲದಂತೆಯೇ ಮಾಡಬೇಕಾಗುತ್ತದೆ. ಅಂದರೆ ಕರುಳಿನ ನೀರು ಬಿಟ್ಟುಬಿಡದೇ ಸೋರುತ್ತ ಹೋಗುವುದು. ಹೀಗೆ ಸೂಕ್ಷ್ಮಾಣುವು ತಾನು ಹೊರಬೀಳಲು ಅನ್ನಮಾರ್ಗದ ಎರಡೂ ತುದಿಗಳನ್ನು ಬಳಸುತ್ತದೆ.

ಇನ್ನೂ ಒಂದು ಕಾರ್ಯವನ್ನು ಸೂಕ್ಷ್ಮಾಣು ಸಾಧಿಸುತ್ತದೆ. ಅದೆಂದರೆ ಜಠರದ ಆಮ್ಲರಸವು ಸ್ರವಿಸದಂತೆ ಮಾಡುತ್ತದೆ. ಇದನ್ನು ಮಾಡುವುದರಿಂದ ಜಠರದ

ಮಾರ್ಗವಾಗಿ ಪ್ರಯಾಣಿಸಬೇಕಾದ ಸೂಕ್ಷ್ಮ ಜೀವಿಗಳು ಯಾವ ಆತಂಕವಿಲ್ಲದೇ ದಾಟುವುವು.

ಮಾನವನ ದೇಹದಿಂದ ನಿಸರ್ಗದಲ್ಲಿ ಸೇರಿದ ಮೇಲೆ ಸೂಕ್ಷ್ಮ ಜೀವಿಗಳು ತಮ್ಮ ಪಾಡಿಗೆ ತಾವು ಜೀವಿಸುತ್ತವೆ.

ಕರುಳು ಮಾನವನದು. ಜಠರ ಮಾನವನದು, ಗುದಮಾರ್ಗ ಮಾನವನದು. ಅವುಗಳ ಮೇಲೆ ಮಾನವನು ಅಷ್ಟಿಷ್ಟು ಅಧಿಕಾರ ನಡೆಸಲು ಸಾಧ್ಯ. ಆದರೆ ಕಾಲರಾ ರೋಗಾಣುವು ಮಾತ್ರ ತನ್ನ ಬುದ್ಧಿಮತ್ತೆಯಿಂದ ತನ್ನ ದಬ್ಬಾಳಿಕೆಯನ್ನು ನಡೆಸುತ್ತದೆ. ತನಗೆ ಏನೇನು ಬೇಕು ಅದನ್ನು ದಬ್ಬಾಳಿಕೆಯಿಂದ ದುಡಿಸಿಕೊಳ್ಳುತ್ತದೆ. ತನ್ನ ಪೀಳಿಗೆಯನ್ನು ವೃದ್ಧಿಸಿಕೊಳ್ಳುತ್ತದೆ. ಇಷ್ಟೆಲ್ಲ ಮಾಡಿ ಕರುಳಿನಿಂದ ಹೊರಗೆ ನೆಗೆದುಬಿಡುತ್ತದೆ. ಈ ರೋಗಾಣುವಿನ ಜಾಣತನ ಪ್ರಶಂಸನೀಯ.



ಸಾಕ್ಷರತೆ ಶಿಕ್ಷಣದ ಆರಂಭವೂ ಅಲ್ಲ ಅಂತ್ಯವೂ ಅಲ್ಲ; ಸ್ತ್ರೀ ಪುರುಷರನ್ನು ಸುಶಿಕ್ಷಿತರನ್ನಾಗಿ ಮಾಡುವ ಸಾಧನೆಗಳಲ್ಲಿ ಒಂದು.

ನಮಗೆ ಅತಿಮುಖ್ಯವಾಗಿ ಬೇಕಾದ ಕೈಗಾರಿಕೆ ಮತ್ತು ಬೇಸಾಯುಗಳು ಸಾಕಷ್ಟು ಬೆಳೆಯಬೇಕಾದರೆ ಜನತಾ ಶಿಕ್ಷಣದ ಹಿನ್ನೆಲೆ ಇರಬೇಕಾಗುತ್ತದೆ.

—ಗಾಂಧೀಜಿ

ಜೈವತಂತ್ರ ವಿದ್ಯೆಯ ಉಪಯೋಗಗಳು

ಡಾ|| ಟಿ. ಪಿ. ಕೃಷ್ಣಕಾಂತ್
ವಿಜ್ಞಾನಿ
ಸಿ.ಎಫ್.ಟಿ.ಆರ್.ಐ
ಮೈಸೂರು-೫೭೦೦೧೩

ಮಾನವನ ಚರಿತ್ರೆಯಲ್ಲಿ ಹಲವಾರು ರೀತಿಯ ಕ್ರಾಂತಿಗಳು ಉದ್ಭವಿಸಿ ಅವುಗಳಿಂದ ಜೀವನಮಟ್ಟ ಬಹಳವಾಗಿ ಸುಧಾರಿಸಿದೆ. ಇತ್ತೀಚಿಗಿನ ವೈಜ್ಞಾನಿಕ ಸಂಶೋಧನೆಗಳಿಂದ ಇದು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಆಗಿದೆ ಎನ್ನಬಹುದು. ಈ ದಿಶೆಯಲ್ಲಿ ಜೈವತಂತ್ರ ವಿದ್ಯೆ (ಬಯೋಟೆಕ್ನಾಲಜಿ) ಒಂದು ಮುಖ್ಯ ಹೆಜ್ಜೆ.

ಜೀವರಸಾಯನಶಾಸ್ತ್ರ, ಎಂಜಿನಿಯರಿಂಗ್ ಮತ್ತು ಮೈಕ್ರೋಬಯಾಲಜಿ ಮುಂತಾದ ವಿಜ್ಞಾನ ವಿಭಾಗಗಳನ್ನು ಆಧರಿಸಿ ಒಟ್ಟಾಗಿ ಸೂಕ್ಷ್ಮಜೀವಿಗಳ ಸಾಮರ್ಥ್ಯವನ್ನು ಯುಕ್ತವಾಗಿ ಉಪಯೋಗಿಸಿಕೊಳ್ಳಲು ಅಥವಾ ಹೆಚ್ಚುಮಾಡಲು ಬಳಸಿಕೊಳ್ಳುವುದಕ್ಕೆ ಜೈವತಂತ್ರ ವಿದ್ಯೆ ಎಂದು ಹೇಳಬಹುದು. ಅಂದರೆ ಈ ಸಾಧನಗಳನ್ನು ಒಂದಲ್ಲ ಒಂದು ರೀತಿಯಲ್ಲಿ ಬೇಕಾದ, ನಿರ್ದಿಷ್ಟವಾದ ಪರಿಣಾಮ ಮತ್ತು ಫಲವನ್ನು ಪಡೆಯಲು ಉಪಯೋಗಿಸುತ್ತಾರೆ.

ಈ ತಂತ್ರವಿದ್ಯೆಯನ್ನು ಕ್ರಿ.ಪೂ. ೬೦೦೦ ವರ್ಷಗಳಷ್ಟು ಹಿಂದೆಯೇ ಬೀರ್‌ಪೇಯ ತಯಾರಿಸಲು ಉಪಯೋಗಿಸುತ್ತಿದ್ದ ವಿಷಯವನ್ನು ಬಾಬಿಲೋನಿಯದಲ್ಲಿ ದೊರೆತ ಒಂದು ಫಲಕದಲ್ಲಿ ಉಲ್ಲೇಖಿಸಿದೆ. ಪ್ರಸಕ್ತ ಶತಮಾನ ಜೈವತಂತ್ರ ವಿದ್ಯೆಗೆ ಸುಗ್ಗಿ ಹಂಗಾಮು ಎನ್ನಬಹುದು. ಇದು ಬಳಕೆ ಆಗುವ ಕೆಲವು ವಿಭಾಗಗಳು :

೧. ಜೆನೆಟಿಕ್ ಇಂಜಿನಿಯರಿಂಗ್ ರೀಕಾಂಬಿನೆಂಟ್ ಅಥವಾ ಡಿಎನ್‌ಎ ಟೆಕ್ನಾಲಜಿ	—	ಜೀನುಗಳ ತಾಂತ್ರಿಕತೆ ಅಥವಾ ಪುನಸ್ಸಂಯೋಜಿತ ಡಿಎನ್‌ಎ ತಂತ್ರ
೨. ಎನ್‌ಝೈಮ್ ಟೆಕ್ನಾಲಜಿ	—	ಕಿಣ್ವ ತಂತ್ರವಿದ್ಯೆ
೩. ಪ್ಲಾಂಟ್‌ಟಿಷ್ಯೂ ಕಲ್ಚರ್	—	ಸಸ್ಯ ಅಂಗಾಂಶ ಕೃಷಿ
೪. ಇಂಡಸ್ಟ್ರಿಯಲ್ ಮೈಕ್ರೋ-ಬಯಾಲಜಿ	—	ಕೈಗಾರಿಕಾ ಸೂಕ್ಷ್ಮಜೀವ ವಿಜ್ಞಾನ
೫. ಇತರೆ ಸಾಧನಗಳು		

೧. ಜೆನೆಟಿಕ್ ಇಂಜಿನಿಯರಿಂಗ್—ಜೀನ್ ತಂತ್ರವಿದ್ಯೆ

ಜೆನೆಟಿಕ್ ಇಂಜಿನಿಯರಿಂಗ್‌ನಲ್ಲಿ ಡಿಎನ್‌ಎ ಮುಖ್ಯಪಾತ್ರ ವಹಿಸಿದೆ. ಜೀವಕೋಶದ ಕ್ರೋಮೋಸೋಮ್ ಮತ್ತು ಸೂಕ್ಷ್ಮಜೀವಿಗಳ ಪ್ಲಾಸ್ಮಿಡ್‌ನಲ್ಲಿ ಡಿಎನ್‌ಎ ಇರುತ್ತದೆ. ಜೀವಕೋಶದ ಜೈವಿಕ ಕ್ರಿಯೆಗಳನ್ನು ಇದು ನಿಯಂತ್ರಿಸುತ್ತದೆ ಮತ್ತು ಇದರ ಆನುವಂಶಿಕಗುಣಗಳು ಒಂದು ಕೋಶ ಅರ್ಧವಾಗಿ ಎರಡಾಗಿ ವಿಭಜನೆಗೊಂಡಾಗ ಎಲ್ಲಾ ಕೋಶಗಳಿಗೂ ಬದಲಾವಣೆಯಿಲ್ಲದೇ ವರ್ಗಾಯಿಸಲ್ಪಡುತ್ತದೆ.

ಮುಖ್ಯವಾಗಿ ಡಿಎನ್‌ಎ ನಾಲ್ಕು ನ್ಯೂಕ್ಲಿಯೋಟೈಡ್ ಬೇಸ್‌ಗಳಿಂದ ರಚಿತವಾಗಿದೆ. ಇವುಗಳೆಂದರೆ ಅಡೆನೈನ್ ಗುವಾನೈನ್ ಸೈಟೋಸಿನ್ ಮತ್ತು ಥೈಮಿನ್ ಜೀವಕೋಶದಲ್ಲಿ ಡಿಎನ್‌ಎದಿಂದ ಆರ್‌ಎನ್‌ಎ ಉತ್ಪತ್ತಿಯಾಗುವುದು. ಆರ್‌ಎನ್‌ಎಯಿಂದ ಪ್ರತಿ ಮೂರು ನ್ಯೂಕ್ಲಿಯೋಟೈಡ್‌ಗೆ ಒಂದರಂತೆ ಅಮೈನೋ ಆಮ್ಲ ಕ್ರಮವಾಗಿ ಜೋಡಣೆಯಾಗಿ ಪ್ರೋಟೀನ್ ಉಂಟಾಗುತ್ತದೆ ಅಥವಾ ಪರೋಕ್ಷವಾಗಿ ಮತ್ತೊಂದು ಜೀವರಾಸಾಯನಿಕ ವಸ್ತುವಿನ ಉತ್ಪತ್ತಿಗೆ ಕಾರಣವಾಗುತ್ತದೆ. ಕೋಶದಲ್ಲಿ ಸಾಮಾನ್ಯವಾಗಿ ಡಿಎನ್‌ಎ ದ್ವಿಗುಣವಾಗುವಿಕೆ ಅಥವಾ ಅದರಿಂದ ಜೀವರಾಸಾಯನಿಕ ಉತ್ಪಾದನೆ ಎಲ್ಲವೂ ನಿಯಂತ್ರಣದಲ್ಲಿರುತ್ತದೆ. ಅದಕ್ಕೆ ಬೇಕೆನಿಸಿದಾಗ ಮಾತ್ರ ಈ ಕಾರ್ಯ ನಿರ್ವಹಿಸುತ್ತದೆ. ಉದಾಹರಣೆಗೆ ಒಂದು ಹಾರ್ಮೋನಿನ ಉತ್ಪಾದನೆಯು ಡಿಎನ್‌ಎಯಿಂದ ಒಂದು ನಿರ್ದಿಷ್ಟ ಪ್ರಮಾಣ ಮತ್ತು ಸಮಯದಲ್ಲಿ ಮಾತ್ರ ಉಂಟಾಗುತ್ತದೆ. ಹಾಗಿದ್ದಲ್ಲಿ ಈ ಹಾರ್ಮೋನನ್ನು ನಿರಂತರವಾಗಿ ಯಾವ ತಡೆಯೂ ಇಲ್ಲದೆ, ಅದರ ಉತ್ಪತ್ತಿಗೆ ಕಾರಣವಾದ ಡಿಎನ್‌ಎ ತುಣುಕನ್ನು ಬೇರೆಮಾಡಿ, ಮತ್ತೊಂದು ಮಾಧ್ಯಮದಲ್ಲಿಟ್ಟು ಹೆಚ್ಚಾಗಿ ಉತ್ಪತ್ತಿ ಮಾಡಲು ಸಾಧ್ಯವೇ? ಉತ್ತರ ಜೆನೆಟಿಕ್ ಇಂಜನಿಯರಿಂಗ್‌ನಿಂದ ಸಾಧ್ಯ ಇದರ ಬಗ್ಗೆ ಸ್ವಲ್ಪ ತಿಳಿಯೋಣ.

ಈ ಹಾರ್ಮೋನಿಗೆ ಕಾರಣವಾದ ಡಿಎನ್‌ಎ ತುಣುಕನ್ನು ಗುರ್ತಿಸಿ, ಹೊರತೆಗೆಯಲಾಗುತ್ತದೆ. ಸೂಕ್ಷ್ಮಜೀವಿಗಳಲ್ಲಿ ಡಿಎನ್‌ಎ ಕ್ರೋಮೋಸೋಮ್‌ನಲ್ಲಿ ಅಲ್ಲದೆ, ಪ್ಲಾಸ್ಮಿಡ್ ಎಂಬ ಕಣದಲ್ಲಿ ಕೂಡ ಇರುತ್ತದೆ. ಪ್ಲಾಸ್ಮಿಡ್‌ನಲ್ಲಿ ಡಿಎನ್‌ಎ ವೃತ್ತಾಕಾರವಾಗಿರುತ್ತದೆ. ಈ ವೃತ್ತಾಕಾರದ ಡಿಎನ್‌ಎಯನ್ನು ಕತ್ತರಿಸಿ ಮೇಲೆ ಹೇಳಿದ ಹಾರ್ಮೋನ್‌ಗೆ ಕಾರಣವಾದ ಡಿಎನ್‌ಎಯ ತುಣುಕನ್ನು ಸೇರಿಸಿ ಪುನಃ ವೃತ್ತಾಕಾರವನ್ನು ಪೂರ್ತಿಗೊಳಿಸಲಾಗುತ್ತದೆ. ಇದಕ್ಕೆ ರೀಕಾಂಬಿನೆಂಟ್ ಡಿಎನ್‌ಎ ಎಂದೂ ಮತ್ತು ಈ ವಿಧಾನಕ್ಕೆ ರೀಕಾಂಬಿನೆಂಟ್ ಡಿಎನ್‌ಎ ಟೆಕ್ನಾಲಜಿ ಅಥವಾ ಪುನಸ್ಸಂಯೋಜಿತ ಡಿಎನ್‌ಎ ತಂತ್ರವೆನ್ನುವರು. ಹೀಗೆ ಡಿಎನ್‌ಎಯನ್ನು ಕತ್ತರಿಸಿ ಪುನಸ್ಸಂಯೋಜಿಸುವ ಕಾರ್ಯವನ್ನು ವಿಶಿಷ್ಟವಾದ ರೆಸ್ಟ್ರಿಕ್ಷನ್ ಎನ್‌ಜೈಮ್‌ಗಳ ಸಹಾಯದಿಂದ ನಡೆಸುವರು.

ಹೀಗೆ ಪುನಸ್ಸಂಯೋಜಿತ ಡಿಎನ್‌ಎಯನ್ನು ಮತ್ತೆ ಆತಿಥೇಯ ಸೂಕ್ಷ್ಮಜೀವಿಯಲ್ಲಿ ಹಾಯಿಸಿ ಹೆಚ್ಚು ಪ್ರಮಾಣದಲ್ಲಿ ಕೃಷಿಮಾಡಲಾಗುವುದು. ಇದರಿಂದಾಗಿ

ಪ್ಲಾಸ್ಮಿಡ್‌ನಲ್ಲಿರುವ ಡಿಎನ್‌ಎಯು ಪ್ರತಿರೂಪಗಳ ಸಂಖ್ಯೆಯುಂ ವೃದ್ಧಿಯಾಗಿ ಹೆಚ್ಚಿನ ಹಾರ್ಮೋನನ್ನು ಉತ್ಪಾದಿಸುವುದು. ಈ ಪ್ರಕಾರವಾಗಿ ಅಪೇಕ್ಷಿತ ಜೀವರಸಾಯನ ವಸ್ತು ಉತ್ಪಾದನಾ ಸಾಮರ್ಥ್ಯವಿರುವ ಡಿಎನ್‌ಎಯು ಪ್ರಯೋಜನ ಪಡೆಯಬಹುದು. ಈ ತಂತ್ರವಿದ್ಯೆಯಲ್ಲಿ ಇರುವುದೊಂದೇ ಸವಾಲು. ಅದೇನೆಂದರೆ ಅಪೇಕ್ಷಿತ ವಸ್ತು. ಉತ್ಪಾದನಾ ಸಾಮರ್ಥ್ಯವಿರುವ ಡಿಎನ್‌ಎ ತುಣುಕನ್ನು ಪತ್ತೆಹಚ್ಚುವುದು.

ಇನ್ಸುಲಿನ್ ಮತ್ತು ಸೊಮಟೋಸ್ಟ್ಯಾಟಿನ್ ಹಾರ್ಮೋನ್ ಉತ್ಪಾದನೆ

ಪ್ರಪಂಚದಲ್ಲಿ ಮಧುಮೇಹ ಖಾಯಿಲೆಯಿಂದ ಬಹಳ ಮಂದಿ ನರಳುತ್ತಿದ್ದಾರೆ. ಇದು ಗುಣಮುಖವಾಗುವುದು ಅತಿ ಕಷ್ಟವಾದರೂ ಇದನ್ನು ಹತೋಟಿಯಲ್ಲಿಡಬಹುದು. ಇನ್ಸುಲಿನ್ ಎಂಬ ಹಾರ್ಮೋನು ಇದರ ಚಿಕಿತ್ಸೆಯಲ್ಲಿ ಬಹಳ ಮುಖ್ಯವಾದ ಪಾತ್ರ ವಹಿಸಿದೆ. ಇತ್ತೀಚೆಗೆ ಇದರ ಬೇಡಿಕೆ ಹೆಚ್ಚಾಗಿದೆ. ಜೀನ್ ತಂತ್ರದಿಂದ ಇದನ್ನು ಹೆಚ್ಚು ಪ್ರಮಾಣದಲ್ಲಿ ಉತ್ಪಾದಿಸುವುದು ಸಾಧ್ಯವಾಗಿದೆ.

ಮನುಷ್ಯನ ಕರುಳಿನಲ್ಲಿ ದೊರೆಯುವ ಎಸರೀಷಿಯಾಕೋಲಿ ಎಂಬ ಜೀವಾಣುವಿನ ಡಿಎನ್‌ಎಯಲ್ಲಿ ಇನ್ಸುಲಿನ್ ಉತ್ಪಾದಿಸಬಲ್ಲ ಜೀನಿನ ತುಣುಕನ್ನು ಸಂಯೋಜಿಸಿನಂತರ ಇನ್ಸುಲಿನ್ ಉತ್ಪಾದಿಸಬಹುದೆಂದು ಕಂಡು ಹಿಡಿದಿದ್ದಾರೆ. ಈ ರೀತಿ ಉತ್ಪಾದಿಸಿದ ಇನ್ಸುಲಿನನ್ನು ಮಾರಾಟಕ್ಕೆ ಬಿಡುಗಡೆ ಮಾಡಿದ್ದಾರೆ.

ದೇಹದ ಬೆಳವಣಿಗೆಗೆ ಅತ್ಯಾವಶ್ಯಕವಾಗಿ ಬೇಕಾಗುವ ಗ್ರೋತ್ ಹಾರ್ಮೋನನ್ನು ಸಹ ಇದೇ ತಂತ್ರದಿಂದ ಪಡೆಯಲು ಸಾಧ್ಯವಾಗಿದೆ. ಹೀಗೆ ಉತ್ಪಾದಿಸಿದ ಹಾರ್ಮೋನನ್ನು ಬೆಳವಣಿಗೆ ಕುಂಠಿತವಾಗಿರುವ ಮಕ್ಕಳ ಮೇಲೆ ಪ್ರಯೋಗಿಸಿ ೧೯೮೧ರಲ್ಲಿ ಒಳ್ಳೆ ಫಲಿತಾಂಶ ಹೊಂದಲಾಗಿದೆ. ಮುಂದೆ ಇದನ್ನು ಹೆಚ್ಚು ಪ್ರಮಾಣದಲ್ಲಿ ಉತ್ಪಾದಿಸುವ ಸಾಧ್ಯತೆಯ ಬಗ್ಗೆ ಇನ್ನೂ ಕಾರ್ಯ ನಡೆಯುತ್ತಲಿದೆ. ಇದು ಮಾನವನಿಗೇ ಅಲ್ಲದೆ ಜಾನುವಾರುಗಳ ತೂಕ ಹೆಚ್ಚಿಸಲು ಮತ್ತು ಹಾಲು ಉತ್ಪಾದನೆ ಹೆಚ್ಚು ಮಾಡಲು ಉಪಯೋಗಿಯಾಗಿದೆ.

ಗಿಣ್ಣು ಅಥವಾ ಚೀಸ್ ಉತ್ಪಾದನೆಯಲ್ಲಿ ರೆನ್ನಿನ್ ಎಂಬ ಕಿಣ್ವವನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ. ಇದು ಬಹಳ ದುಬಾರಿಯಾಗಿದ್ದು ಉತ್ಪಾದನಾ ಪ್ರಮಾಣ ಅತ್ಯಲ್ಪ. ಈಗ ಈ ಕಿಣ್ವವನ್ನು ಉತ್ಪಾದಿಸಬಲ್ಲ ಜೀನಿನ ತುಣುಕನ್ನು ಗುರ್ತಿಸಲಾಗಿದೆ ಮತ್ತು ಈಸ್ಟ್ ಎಂಬ ಸೂಕ್ಷ್ಮಜೀವಿಯಲ್ಲಿ ಇದನ್ನು ಪುನಸ್ಸಂಯೋಜಿಸಿ ಹೆಚ್ಚು ಪ್ರಮಾಣದಲ್ಲಿ ರೆನ್ನಿನನ್ನು ಪಡೆಯಲಾಗಿದೆ.

ಇಂಟರ್‌ಫೆರಾನ್

ಮನುಷ್ಯನಿಗೆ ಅಥವಾ ಪ್ರಾಣಿಗಳಿಗೆ ವೈರಸ್ ಸೋಂಕು ತಗುಲಿದಾಗ ದೇಹದಲ್ಲಿನ ಕೋಶಗಳು ಇಂಟರ್‌ಫೆರಾನ್ ಎಂಬ ವೈರಸ್ ನಿರೋಧಕ ವಸ್ತುವನ್ನು ಉತ್ಪಾದಿಸುತ್ತವೆ. ಇದುವರೆವಿಗೂ ವೈರಸ್ ಖಾಯಿಲೆಗೆ ಯಾವ ಮದ್ದೂ ಕಂಡು ಹಿಡಿದಿಲ್ಲವಾದ್ದರಿಂದ ಈ ಇಂಟರ್‌ಫೆರಾ

ನನ್ನು ಜೀನು ತಂತ್ರದಿಂದ ಉತ್ಪಾದಿಸಲು ಪ್ರಯತ್ನ ನಡೆದಿದೆ. ಸಣ್ಣ ಪ್ರಮಾಣದ ಉತ್ಪಾದನೆಯಲ್ಲಿ ಒಳ್ಳೆ ಫಲಿತಾಂಶ ತಂದು ಕೊಟ್ಟಿದೆ. ಇದು ವೈರಸ್ ಖಾಯಿಲೆಗೆ ಒಳ್ಳೆ ಔಷಧವಾಗಿದೆ.

ಸಂಶ್ಲೇಷಿತ ಲಸಿಕೆ

ರೋಗ ನಿರೋಧಕ ಲಸಿಕೆಗಳನ್ನು ಪಡೆಯಲು ಈ ತಂತ್ರವನ್ನು ಉಪಯೋಗಿಸ ಬಹುದು. ಜಾನುವಾರುಗಳು ಕಾಲು ಬಾಯಿ ಜ್ವರಕ್ಕೆ ತುತ್ತಾಗುವುದು ಎಲ್ಲರಿಗೂ ತಿಳಿದ ವಿಷಯ. ಈ ರೋಗನಿರೋಧಕ ಶಕ್ತಿ ಯನ್ನು ಜಾನುವಾರುಗಳಲ್ಲಿ ಪ್ರೇರೇಪಿಸಬಲ್ಲ ಲಸಿಕೆಯನ್ನು ಉತ್ಪಾದಿಸಲು ಈ ತಂತ್ರ ಉಪಕಾರಿಯಾಗಿದೆ.

ಕೃಷಿಯಲ್ಲಿ ಆಗುವ ಉಪಯೋಗಗಳು

ಸಸ್ಯಗಳ ಬೆಳವಣಿಗೆಗೆ ಸಾರಜನಕದ ಅವಶ್ಯಕತೆ ಬಹಳ. ಆದ್ದರಿಂದಲೇ ಸ್ವಾಭಾವಿಕ ಮತ್ತು ಕೃತಕ ಗೊಬ್ಬರಗಳ ಉಪಯೋಗ ಅತ್ಯಾವಶ್ಯಕವಾಗಿದೆ. ಹುರುಳಿ ಕಾಯಿ, ಸೋಯಾಬೀನ್ಸ್ ಮುಂತಾದ ಕೆಲವೇ ಸಸ್ಯಗಳಿಗೆ ಸಾರಜನಕವನ್ನು ಉಪಯೋಗಿಸಿಕೊಳ್ಳುವ ಸಾಮರ್ಥ್ಯ ಹೆಚ್ಚು. ಕಾರಣ ಇದರ ಬೇರಿನಲ್ಲಿ ಗಂಟು ಗಳಲ್ಲಿರುವ ಸೂಕ್ಷ್ಮಜೀವಿಗಳು. ಇವಕ್ಕೆ ನಿಸರ್ಗದಲ್ಲಿರುವ ಸಾರಜನಕವನ್ನು ನೇರ ವಾಗಿ ನೈಟ್ರೇಟ್ ಮತ್ತು ಅಮೋನಿಯಾಕ್ಕೆ ಪರಿವರ್ತಿಸುವ ಅರ್ಹತೆ ಇದೆ. ಈ ಅರ್ಹತೆ ಇದರ ಜೀನಿನಲ್ಲಿ ಅಡಗಿದೆ. ಇದನ್ನು ಗುರುತಿಸ ಲಾಗಿದೆ. ಇದಕ್ಕೆ 'ನಿಫ್'ಜೀನ್ ಎಂದು ಹೆಸರು. ಈ ಜೀನನ್ನು ಸಸ್ಯದ ಜೀನಿ ನೊಂದಿಗೆ ಸಂಯೋಜಿಸಲು ಪ್ರಯತ್ನ ಮಾಡಲಾಗುತ್ತಿದೆ. ಸಸ್ಯ ಶಾಸ್ತ್ರದ ಇತಿಹಾಸ ದಲ್ಲೇ ಇದೊಂದು ಮಹತ್ತರವಾದ ಹೆಜ್ಜೆ ಎನ್ನಬಹುದು. ಏಕೆಂದರೆ ಇದು ಫಲಿಸಿದರೆ ಮಾನವನ ಹಸಿವು ಇಂಗಿದಂತೆಯೇ ಮತ್ತು ಆಹಾರದ ಕೊರತೆ ನೀಗಿದಂತೆಯೇ. ಸಸ್ಯವು ನೇರವಾಗಿ ಸಾರಜನಕವನ್ನು ಪಯೋಗಿಸಿ ಕೊಂಡು ಹೇರಳವಾಗಿ ಆಹಾರ ನೀಡ ಬಲ್ಲುದು ಮತ್ತು ಸಸ್ಯಗಳಿಗೆ ಗೊಬ್ಬರಗಳ ಅವಶ್ಯಕತೆಯೇ ಉದ್ಭವಿಸುವುದಿಲ್ಲ.

ಆಹಾರ ಧಾನ್ಯಗಳ ಕೃಷಿಯಲ್ಲಿ ಉಪಯೋಗಿಸಲ್ಪಡುವ ಕೀಟನಾಶಕಗಳಲ್ಲಿ ಬ್ಯಾಸಿಲಸ್ ತುರಿಂಜಿಯೆನ್ಸಿಸ್ ಎಂಬ ಸೂಕ್ಷ್ಮಜೀವಿಯನ್ನು ಉಪಯೋಗಿಸಲಾಗು ತ್ತಿದೆ. ಇದು ಒಂದು ರೀತಿಯ ವಿಷಕಾರಿ ಯಾದ ಕೀಟನಾಶಕವನ್ನು ಉತ್ಪಾದಿಸು ತ್ತದೆ. ಈ ರೀತಿ ಉತ್ಪತ್ತಿಯಾದ ಕೀಟ ನಾಶಕದ ಪರಿಣಾಮವನ್ನು ಜೀನ್ ತಂತ್ರ ದಿಂದ ಹೆಚ್ಚು ಮಾಡಲು ಸಂಶೋಧನೆಗಳು ನಡೆಯುತ್ತಲಿದೆ.

ಹೀಗೆ ಇನ್ನೂ ಹಲವಾರು ಉಪಯೋಗ ಗಳನ್ನು ಈ ತಂತ್ರದಿಂದ ಪಡೆಯಲುಸಾಧ್ಯ. ಇದರಲ್ಲಿ ಮುಖ್ಯವಾಗಿ ಜೀನಿನ ತುಣುಕನ್ನು ಗುರ್ತಿಸುವುದು ಮತ್ತು ಪ್ರತ್ಯೇಕಿಸುವುದು ಕಷ್ಟಕರವಾದ ಕೆಲಸ. ಅನಂತರ ಮುಂದಿನ ಸಂಶೋಧನೆಗಳು ಸುವ್ಯವಸ್ಥಿತವಾಗಿ ಸಾಗಲು ಸಹಕಾರಿ.

೨. ಕಿಣ್ವ ತಂತ್ರವಿದ್ಯೆ—ಎನ್‌ಜೈಮ್ ಟೆಕ್ನಾಲಜಿ

ಜೀವಕೋಶದಲ್ಲಿ ಹಲವಾರು ಬಗೆಯ ಜೀವರಾಸಾಯನಿಕ ಕ್ರಿಯೆಗಳು ಸದಾ

ನಡೆಯುತ್ತಿರುತ್ತವೆ. ಈ ಕ್ರಿಯೆಗಳನ್ನು ಕಿಣ್ವ ಅಥವಾ ಎನ್‌ಜೈಮ್‌ಗಳ ಸಹಾಯದಿಂದ ನಿಯಂತ್ರಿಸಲ್ಪಡುತ್ತದೆ. ಕಿಣ್ವಗಳನ್ನು ಕೋಶದಿಂದ ಹೊರತೆಗೆದು, ಶುದ್ಧೀಕರಿಸಿ ಅದರ ಕಾರ್ಯಪ್ರವೃತ್ತಿಯನ್ನು ಉಪಯೋಗಿಸಬಹುದು.

ಕಿಣ್ವಗಳ ಸಾಮರ್ಥ್ಯ ಬಹಳ ಹೆಚ್ಚು. ಸಾಮಾನ್ಯ ಒತ್ತಡದಲ್ಲಿ ಇವು ೪° ಸೆಂ. ನಿಂದ ೮೦° ಸೆಂ. ನವರೆಗೆ ಬೇರೆ ಬೇರೆ ಜೀವರಾಸಾಯನಿಕ ಕ್ರಿಯೆಗಳನ್ನು ವೇಗೋತ್ಕರ್ಷಗೊಳಿಸುತ್ತವೆ. ಈ ಕಾರಣದಿಂದಲೇ ಮಾನವನು ಬಹಳ ಹಿಂದಿನಕಾಲದಿಂದಲೂ ಇದರ ಉಪಯೋಗಪಡೆದುಕೊಂಡು ಬಂದಿದ್ದಾನೆ. ಆಧುನಿಕವಾಗಿ ಇದನ್ನು ಹಲವಾರು ವಿಧಗಳಲ್ಲಿ ಉಪಯೋಗಿಸಲಾಗಿದೆ.

ಶುದ್ಧೀಕರಿಸಿದ ಕಿಣ್ವಗಳನ್ನು ಒಂದು ಸ್ಥಿರೀಕೃತವಾದ ಮತ್ತು ನಿಷ್ಕ್ರಿಯ ಗುಣವುಳ್ಳ ವಸ್ತುವಿನೊಡನೆ ಸಂಯೋಜಿಸಲಾಗುತ್ತದೆ. ಹೀಗೆ ಸ್ಥಿರೀಕರಿಸಿದ ಎನ್‌ಜೈಮ್‌ನ್ನು ದೊಡ್ಡ ಕೊಳವೆಗಳಲ್ಲಿ ತುಂಬಿ ಅದರಲ್ಲಿ ಕಿಣ್ವಕ್ರಿಯೆಯನ್ನು ಪ್ರಚೋದಿಸಲಾಗುತ್ತದೆ. ಒಂದು ಕಡೆಯಿಂದ ಕ್ರಿಯಾವಸ್ತುವನ್ನು ಹಾಯಿಸಿದಾಗ ಮತ್ತೊಂದು ಕಡೆಯಿಂದ ಕ್ರಿಯಾಫಲಗಳು ಹೊರಬರುತ್ತವೆ. ಇಂತಹ ತಂತ್ರಜ್ಞಾನವನ್ನು ಬೇರೆ ಬೇರೆ ರೀತಿಯಲ್ಲಿ ಉಪಯೋಗಿಸಲಾಗಿದೆ. ಶುದ್ಧೀಕರಿಸಿದ ಕಿಣ್ವಕ್ಕೆ ಬದಲಾಗಿ ಇಡೀ ಜೀವಕೋಶವನ್ನೇ ಕಿಣ್ವಸಂಕೀರ್ಣದ ರೀತಿಯಲ್ಲಿ ಸ್ಥಿರೀಕರಿಸಿ ಉಪಯೋಗಿಸಬಹುದು.

ಈ ಎನ್‌ಜೈಮ್ ತಂತ್ರಜ್ಞಾನವನ್ನು ಹೆಚ್ಚಾಗಿ ಆಹಾರ ಸಾಮಗ್ರಿಗಳ ಉತ್ಪಾದನೆಯಲ್ಲಿ ಬಳಸಲಾಗಿದೆ. ಉದಾಹರಣೆಗೆ—

ಮೆಕ್ಕೆಜೋಳದ ಹಿಟ್ಟಿನಲ್ಲಿರುವ ಪಿಷ್ಟ ಪದಾರ್ಥವನ್ನು (ಸ್ಟಾರ್ಚ್) ಮೂರು ಕಿಣ್ವಗಳ ಸಹಾಯದಿಂದ ಗ್ಲುಕೋಸ್ ಸಕ್ಕರೆಪಾಕ ಮತ್ತು ಅತಿ ಸಿಹಿಯಾದ ಫ್ರಕ್ಟೋಸ್ ಭರಿತ ಜೋಳದ ಸಕ್ಕರೆಪಾಕವನ್ನು ತಯಾರಿಸಿದ್ದಾರೆ.

ಪ್ರಥಮವಾಗಿ ಅಲ್ಫಾ ಅಮೈಲೇಸ್ ಮತ್ತು ಗ್ಲುಕೋಅಮೈಲೇಸ್ ಎಂಬ ಕಿಣ್ವಗಳೊಡನೆ ಗಂಜಿಯ ರೂಪದಲ್ಲಿರುವ ಪಿಷ್ಟ ಪದಾರ್ಥವನ್ನು ಕ್ರಮವಾಗಿ ಸಂಪರ್ಕಿಸಿದಾಗ ಗ್ಲುಕೋಸ್ ಸಿರಪ್ ಉತ್ಪತ್ತಿಯಾಗುತ್ತದೆ. ಇದನ್ನು ಪ್ರತ್ಯೇಕಿಸಬಹುದು ಅಥವಾ ಇದನ್ನು ಗ್ಲುಕೋಸ್ ಐಸೋಮರೇಸ್ ಕಿಣ್ವದೊಡನೆ ನಂತರ ಸಂಪರ್ಕಿಸಿದಾಗ ಫ್ರಕ್ಟೋಸ್ ಭರಿತ ಜೋಳದ ಸಕ್ಕರೆಪಾಕ—ಹೈಫ್ರಕ್ಟೋಸ್ ಕಾರ್ನ್‌ಸಿರಪ್ ಉಂಟಾಗುತ್ತದೆ. ಇದರಲ್ಲಿ ಶೇ. ೫೫ ರಿಂದ ೯೦ ಭಾಗ ಅತಿ ಸಿಹಿಯಾದ ಫ್ರಕ್ಟೋಸ್ ಅಂಶವಿರುವುದು. ಇದನ್ನು ಸಿಹಿಪಾನೀಯ ತಯಾರಿಕೆ ಮತ್ತು ಸಂಸ್ಕರಿಸಿದ ಆಹಾರ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ.

ಜೀವಕೋಶದ ನಾರಿನಿಂದ ಗ್ಲೂಕೋಸ್

ನಿಸರ್ಗದಲ್ಲಿ ಸಸ್ಯಗಳಿಂದ ಹೇರಳವಾಗಿ ಉತ್ಪತ್ತಿಯಾಗುವ ವಸ್ತು ಸೆಲ್ಯುಲೋಸ್. ಇದು ಸ್ವಾಭಾವಿಕವಾಗಿ ಗ್ಲುಕೋಸ್‌ಗೆ ಪರಿವರ್ತಿತವಾಗುತ್ತದೆ. ಈ ಕ್ರಿಯೆಯಲ್ಲಿ ಹಲವು ಕಿಣ್ವಗಳು ಸಂಯುಕ್ತವಾಗಿ ಭಾಗಿಯಾಗಿವೆ. ಈ ಕಿಣ್ವಗಳಿಗೆ ಒಟ್ಟಾಗಿ ಸೆಲ್ಯುಲೇಸಸ್ ಎಂದು ಕರೆಯುವರು. ಇವುಗಳು ಮನುಷ್ಯನಿಗೆ ಜೀರ್ಣಮಾಡಿ

ಕೊಳ್ಳಲಸಾಧ್ಯವಾದ ಸೆಲ್ಯೂಲೋಸನ್ನು ಗ್ಲೂಕೋಸ್‌ಗೆ ಪರಿವರ್ತಿಸುತ್ತವೆ. ಇವನ್ನು ಕಿಣ್ವತಂತ್ರ ಮತ್ತು ಪುನಸ್ಸಂಯೋಜಿತ ಜೀನುತಂತ್ರದಿಂದಲೂ ಗ್ಲೂಕೋಸ್ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತಿದೆ.

ಭತ್ತದ ಹುಲ್ಲು, ಕಬ್ಬಿನ ರಸಹಿಂಡಿದ ನಾರಿನ ಅಂಶಗಳನ್ನು ಗ್ಲೂಕೋಸ್‌ಗೆ ಮಾರ್ಪಡಿಸಬಹುದು. ಪಾಶ್ಚಾತ್ಯ ದೇಶಗಳಲ್ಲಿ ಇವರಿಂದ ಇಂಧನಕ್ಕೆ ಯೋಗ್ಯವಾದ ಆಲ್ಕೋಹಾಲನ್ನು ತಯಾರಿಸುತ್ತಿದ್ದಾರೆ.

ಹೀಗೆ ಇನ್ನೂ ಅನೇಕ ಜೀವರಸಾಯನಿಕ ವಸ್ತುಗಳ ಉತ್ಪಾದನೆಯಲ್ಲಿ ಕಿಣ್ವತಂತ್ರವನ್ನು ಅಳವಡಿಸಲಾಗಿದೆ.

೩. ಸಸ್ಯ ಅಂಗಾಂಶ ಕೃಷಿ— ಪ್ಲಾಂಟ್ ಟಿಷ್ಯೂ ಕಲ್ಚರ್

ಒಂದೇ ಒಂದು ಅಂಗಾಂಶ ಕೋಶದಿಂದ ಅದೇ ರೀತಿಯ ಹಲವಾರು ಕೋಶಗಳನ್ನು ಕೃತಕವಾಗಿ ಪ್ರಯೋಗಶಾಲೆಗಳಲ್ಲಿ ಬೆಳೆಯಬಹುದು. ಇವಕ್ಕೆ ಟಿಷ್ಯೂಕಲ್ಚರ್ ಅಥವಾ ಅಂಗಾಂಶ ಕೃಷಿ ಎನ್ನುತ್ತಾರೆ. ಸಸ್ಯ ಕೋಶದಿಂದ ಆಗುವ ಕೃಷಿಗೆ ಪ್ಲಾಂಟ್ ಟಿಷ್ಯೂ ಕಲ್ಚರ್ ಅಥವಾ ಸಸ್ಯ ಅಂಗಾಂಶ ಕೃಷಿ ಎಂದು ಹೆಸರು. ಮುಂದೆ ಹೀಗೆ ಬೆಳೆದ ಕೋಶ ಸಮೂಹವನ್ನು ಹಂತಹಂತವಾಗಿ ಬೇರೆಬೇರೆ ಮಾಧ್ಯಮಗಳಲ್ಲಿ ಬೆಳೆದು ಸಣ್ಣ ಗಿಡವನ್ನಾಗಿ ಮಾರ್ಪಡಿಸಬಹುದು. ಈ ತಂತ್ರಜ್ಞಾನವೂ ಒಂದು ಅಮೂಲ್ಯವಾದ ಜೈವತಂತ್ರ ವಿದ್ಯೆ. ಇದರಿಂದಾಗುವ ಉಪಯೋಗಗಳನ್ನು ತಿಳಿಯೋಣ.

ಸಾಮಾನ್ಯವಾಗಿ ಸಸ್ಯಾಭಿವೃದ್ಧಿ ಅದರ ಬೀಜದ ಸಹಾಯದಿಂದ ಆಗುತ್ತದೆ. ಇದಕ್ಕೆ ಹೆಚ್ಚು ಸಮಯಬೇಕಾಗುತ್ತದೆ. ಮುಖ್ಯವಾಗಿ ನಮಗೆ ಬಹೂಪಯೋಗಿಯಾಗಿರುವ ಮರಗಳ ಉತ್ಪಾದನೆಗೆ ಹಲವಾರು ವರ್ಷಗಳೇ ಆಗುತ್ತವೆ. ಅಂಗಾಂಶ ಕೃಷಿ ತಂತ್ರ ಈ ವಿಚಾರದಲ್ಲಿ ಬಹಳ ಸಹಾಯಕವಾಗಿದೆ. ಗಿಡದ ಯಾವುದಾದರೊಂದು ಭಾಗದಿಂದ ತೆಗೆದ ಅಂಗಾಂಶವನ್ನು ಕೃತಕವಾಗಿ ಬೆಳೆದು ಅದನ್ನು ಬೇರೂರಿದ ಗಿಡವನ್ನಾಗಿ ಮಾರ್ಪಡಿಸಿ ಬೀಜದ ಸಹಾಯವಿಲ್ಲದೆಯೇ ಹಲವಾರು ಸಸಿಗಳನ್ನು ಅತಿ ಕಡಿಮೆ ಕಾಲದಲ್ಲಿ ಬೆಳೆಯಬಹುದು. ನಂತರ ಇವನ್ನು ಹಂತಹಂತವಾಗಿ ಹೊರಗಿನ ವಾತಾವರಣಕ್ಕೆ ಹೊಂದಿಸಿ ಬೆಳೆಯಬಹುದು. ಇದು ಇತ್ತೀಚೆಗಿನ ಅರಣ್ಯಾಭಿವೃದ್ಧಿ ಕಾರ್ಯದಲ್ಲಿ ಬಹಳ ಉಪಯೋಗಿ.

ಸಸ್ಯಗಳೂ ಮಾನವನಂತೆ ಹೆಚ್ಚು ರೋಗಗಳಿಗೆ ತುತ್ತಾಗತೊಡಗಿವೆ. ಸಸ್ಯಾಂಗ ಕೃಷಿ ತಂತ್ರದಿಂದ ರೋಗನಿರೋಧಕ ಸಸ್ಯಗಳನ್ನು ಬೆಳೆಯಬಹುದು. ಗಿಡದ ತುಟ್ಟತುದಿಯ ಅತಿ ಚಟುವಟಿಕೆಯಿಂದ ಕೂಡಿದ, ಎಳೆಯ ಬೆಳೆಯುತ್ತಿರುವ ಮೆರಿಸ್ಟೆಮ್ ಎಂಬ ಭಾಗ ಸ್ವಾಭಾವಿಕವಾಗಿಯೇ ರೋಗರಹಿತವಾಗಿರುತ್ತದೆ. ಈ ಅಂಗಾಂಶವನ್ನು ಕೃಷಿಮಾಡಿ ರೋಗರಹಿತ ಸಸ್ಯಗಳನ್ನು ಪಡೆಯಲಾಗಿದೆ. ಉದಾಹರಣೆಗೆ ವೈರಸ್ ರೋಗ ನಿರೋಧಕ ಕಬ್ಬಿನ ತಳಿಗಳನ್ನು ಬೆಳೆಯಲಾಗಿದೆ. ಅಲ್ಲದೆ ಶ್ರೀಗಂಧ, ತೇಗ ಮತ್ತು ರಬ್ಬರ್‌ಮುಂತಾದ ಅತ್ಯುಪಯುಕ್ತ ಸಸ್ಯಾಭಿವೃದ್ಧಿಗೆ ಕೂಡ ಈ ತಂತ್ರ ಒಂದು ವರದಾನವಾಗಿದೆ.

ಈ ತಂತ್ರದಿಂದ ತಾಳೆಎಣ್ಣೆ ಉತ್ಪಾದನೆಗೆ ಹೆಸರಾದ ತಾಳೆ ಗಿಡಗಳನ್ನು ಮಲೇಶಿಯಾ, ಆಫ್ರಿಕಾದೇಶ ಮುಂತಾದೆಡೆ ಯಥೇಚ್ಛ

ವಾಗಿ ಬೆಳೆದಿದ್ದಾರೆ. ಪರಿಣಾಮ ಹೊರ ದೇಶಕ್ಕೆ ಧಾರಾಳವಾಗಿ ತಾಳೆಎಣ್ಣೆಯ ರಫ್ತು ಮತ್ತು ವಿದೇಶೀ ವಿನಿಮಯಗಳಿಕೆ. ಹೆಚ್ಚು ಇಳುವರಿ ನೀಡುವ ಹಣ್ಣು ತರಕಾರಿ ಮತ್ತು ಇತರೆ ಸಸ್ಯಾಭಿವೃದ್ಧಿ ಕೂಡ ಇದರಿಂದ ಸಾಧ್ಯ.

ಸಸ್ಯದಿಂದ ಉತ್ಪಾದನೆಯಾಗುವ ಬಣ್ಣಗಳು, ಸುವಾಸಿತ ದ್ರವ್ಯಗಳು ಮುಂತಾದ ವಸ್ತುಗಳನ್ನು ಗಿಡವನ್ನು ಬೆಳೆಯದೆಯೇ ಪ್ರಯೋಗಶಾಲೆಯಲ್ಲಿ ಅಂಗಾಂಶ ಕೃಷಿಯಿಂದ ಪಡೆಯುವ ಸಾಧ್ಯತೆಯನ್ನು ಪ್ರಯತ್ನಿಸಲಾಗುತ್ತಿದೆ. ಪುರಾತನ ಕಾಲದಿಂದ ರೂಢಿಯಲ್ಲಿರುವ ಆಯುರ್ವೇದ ಚಿಕಿತ್ಸೆಗೆಬೇಕಾಗುವ ಅತ್ಯಮೂಲ್ಯವಾದ ಮೂಲಿಕೆಗಳನ್ನು ಉತ್ಪಾದಿಸುವುದಕ್ಕೆ ಈ ತಂತ್ರವಿದ್ಯೆ ಒಂದು ವರವಾಗಿದೆಯೆನ್ನಬಹುದು. ಏಕೆಂದರೆ ಔಷಧ ತಯಾರಿಸಿ ಶೀಘ್ರ ಹಣಗಳಿಕೆಯ ದೃಷ್ಟಿಯಿಂದ ಮೂಲಿಕೆಗಳ ನಾಶ ದಿನೇದಿನೇ ಹೆಚ್ಚುತ್ತಿದೆ. ಈ ಕಾರಣದಿಂದ ಮೂಲಿಕೆಗಳು ಅದೃಶ್ಯವಾಗುವ ಮುನ್ನ ಅವನ್ನು ಅಂಗಾಂಶ ಕೃಷಿ ವಿಧಾನದಿಂದ ಸಂರಕ್ಷಿಸಬಹುದು ಮತ್ತು ಅದರ ಬೆಳೆಯನ್ನು ಶೀಘ್ರಗತಿಯಲ್ಲಿ ಅಭಿವೃದ್ಧಿಗೊಳಿಸಬಹುದು.

೪. ಕೈಗಾರಿಕಾ ಸೂಕ್ಷ್ಮಜೀವ ವಿಜ್ಞಾನ

ಮಾನವನಿಗೆ ಪರಿಸರದಲ್ಲಿರುವ ಸೂಕ್ಷ್ಮಜೀವಿಯ ಸಂಬಂಧವಿಲ್ಲದೆ ಜೀವನ ಕಷ್ಟ. ಮಾದಕ ಪಾನೀಯದಿಂದ ಹಿಡಿದು ಪ್ರತಿಜೈವಿಕದವರೆಗೆ ಅವುಗಳ ಮೇಲೆ ಅವಲಂಬಿತನಾಗಿದ್ದಾನೆ. ಹಲವಾರು ವರ್ಷಗಳ ಸಂಶೋಧನೆ ಮತ್ತು ಅನುಭವದಿಂದ ತಿಳಿದಿರುವ ಸಂಖ್ಯಾಂಶವಿದು. ಪ್ರಥಮವಾಗಿ ೧೯೪೦ರಲ್ಲಿ ಪೆನ್ಸಿಲಿನ್‌ನ ಉತ್ಪಾದನೆಯಿಂದ ಸೂಕ್ಷ್ಮಾಣು ಉದ್ದಿಮೆಯು ಆರಂಭವಾಗಿ ಇಂದಿನವರೆಗೆ ಹಲವಾರು ಪದಾರ್ಥಗಳ ಉತ್ಪಾದನೆಯಲ್ಲಿ ಸೂಕ್ಷ್ಮಜೀವಿಗಳನ್ನು ಉಪಯೋಗಿಸಲಾಗಿದೆ.

ಗಣಿಗಳಲ್ಲಿ ಬಿಸಾಡಿದ ಕೀಳುದರ್ಜೆಯ ಅದುರನ್ನು ಸೂಕ್ಷ್ಮಜೀವಿಗಳ ಸಹಾಯದಿಂದ ಸಂಸ್ಕರಿಸಿ ಅದರಿಂದ ಲೋಹವನ್ನು ಶುದ್ಧಮಾಡಲಾಗಿದೆ. ಈ ವಿಧಾನದಿಂದ ತಾಮ್ರವನ್ನು ತೆಗೆಯಲಾಗುತ್ತಿದೆ ಕೆನಡಾ ದೇಶದಲ್ಲಿ ಒಂದು ತಿಂಗಳಿನಲ್ಲಿ ಸುಮಾರು ೭ ಟನ್ ಯುರೇನಿಯಮ್ ಅನ್ನು ಈ ರೀತಿ ಸಂಸ್ಕರಿಸಿ ಉತ್ಪಾದಿಸಿದ್ದಾರೆ ಎಂದರೆ ಆಶ್ಚರ್ಯವಾಗಬಹುದು.

ಬಯೋಗ್ಯಾಸ್

ವೋಲ್ಟಾ ಎಂಬ ವಿಜ್ಞಾನಿ ೧೭೭೬ರಲ್ಲಿ ಕಸದಿಂದ ಬಯೋಗ್ಯಾಸ್ ಉತ್ಪಾದನೆಯಾಗುತ್ತದೆ ಎಂದು ತೋರಿಸಿಕೊಟ್ಟನು. ಈ ವಿಧಾನವನ್ನು ಚೈನಾ ಮತ್ತು ನಮ್ಮ ದೇಶದಲ್ಲಿ ಬಹಳವಾಗಿ ಅಡಿಗೆ ಅನಿಲವನ್ನು ಉತ್ಪತ್ತಿಮಾಡಲು ಬಳಸಲಾಗುತ್ತಿದೆ. ಇದರ ಜೊತೆಗೆ ಫಲವತ್ತಾದ ಗೊಬ್ಬರವನ್ನು ಕೂಡ ಪಡೆಯಬಹುದು. ಈ ಕ್ರಿಯೆಗೆ ಮೂಲಕಾರಣ, ಮೆಥೆನೋಬ್ಯಾಕ್ಟೀರಿಯಂಗೆ ಸೇರಿದ ಸೂಕ್ಷ್ಮಾಣುಜೀವಿಗಳು. ಪ್ರಪಂಚದಲ್ಲಿಯ ಇಂಧನ ನಿಕ್ಷೇಪಗಳು ಇಲ್ಲವಾದಾಗ ಈ ತಂತ್ರಜ್ಞಾನದ ಮಹತ್ವದ ಅರಿವು ಹೆಚ್ಚಾಗುತ್ತದೆ.

ಕಡೆಯದಾಗಿ ಪ್ರನಾಳಶಿಶುವಿನ ಬಗ್ಗೆ ಎರಡು ಮಾತು.

ಪ್ರಪಂಚಾದ್ಯಂತ ಪ್ರಚಲಿತವಾಗಿರುವ ಸಂಗತಿ ಎಂದರೆ ಪ್ರನಾಳ ಶಿಶು. ಟೆಸ್ಟ್-ಟ್ಯೂಬ್ ಬೇಬಿ. ಈಗ್ಗೆ ಕೆಲವು ದಿನಗಳ ಹಿಂದೆ ದಕ್ಷಿಣ ಭಾರತದ ಪ್ರಥಮ ಪ್ರನಾಳ ಶಿಶುವಿನ ಜನ್ಮದ ಹಿನ್ನೆಲೆ ಜೈವತಂತ್ರವಿದ್ಯೆ ಈ ವಿಜ್ಞಾನದ ಉಪಯೋಗವನ್ನು ಪರಿಣಾಮಕಾರಿಯಾಗಿ ಲೋಕಕ್ಕೆ ತೋರಿಸಿ ಕೊಟ್ಟಿರುವುದಕ್ಕೆ ಇದೊಂದು ನಿದರ್ಶನ. ಮಕ್ಕಳು ಆಗುವ ಆಸೆಯನ್ನು ಸಂಪೂರ್ಣ ತ್ಯಜಿಸಿರುವ ದಂಪತಿಗಳಿಗೆ ಈ ಜೀವತಂತ್ರ ಜ್ಞಾನ ಪ್ರನಾಳ ಶಿಶುವಿನ ಸಾಧ್ಯತೆಯ ಮೂಲಕ ಅಪಾರ ಸಂತೋಷಕ್ಕೆ ಮತ್ತು ನವೀನ ಜೀವನಕ್ಕೆ ದಾರಿಯಾಗಿದೆ.

ಜಾನುವಾರುಗಳ ಸಂಖ್ಯೆಯನ್ನು ಹೆಚ್ಚು ಮಾಡಲು ಮತ್ತು ಹಾಲೋತ್ಪನ್ನವನ್ನು ಹೆಚ್ಚು ಮಾಡಲು ಕೂಡ ಈ ವಿಧಾನವನ್ನು ಬಳಸಲಾಗುತ್ತಿದೆ.

ಹೀಗೆ ಅನೇಕ ಪ್ರಕಾರವಾಗಿ ಜೈವತಂತ್ರ ವಿದ್ಯೆ ಮಾನವನ ಜೀವನವನ್ನು ಬಹಳ ಮಟ್ಟಿಗೆ ಬದಲಾಯಿಸ್ಸದೆ, ಆಧುನಿಕ ವಿಜ್ಞಾನ ಇನ್ನೂ ತ್ವರಿತಗತಿಯಲ್ಲಿ ಮುಂದು ವರಿದು ಅನೇಕ ರೀತಿಯಲ್ಲಿ ಪರಿಣಾಮಕಾರಿ ಯಾಗುವುದರಲ್ಲಿ ಸಂದೇಹವಿಲ್ಲ. ಹಾವಿನ ವಿಷವನ್ನು ಅಮೃತವನ್ನಾಗಿ ಮಾಡಲು ಸಾಧ್ಯವೋ ಏನೋ? ಜಗತ್ತಿನಲ್ಲಿ ಹೇರಳ ವಾಗಿರುವ ಮತ್ತು ಮುಂದೆ ಹೇರಳವಾಗಿ ಸೇರುವ ಕಸದಿಂದ ಆಹಾರ ತಯಾರಿಕೆ ಸಾಧ್ಯವೇ? ಮೂಕ ಪ್ರಾಣಿಗಳೊಂದಿಗೆ ಮಾತುಕತೆ ಸಾಧ್ಯವಾಗುವುದೋ ಕಾದು ನೋಡಬೇಕು.



ಪ್ರಾಥಮಿಕ ಪ್ರಜ್ಞೆಯಿಂದ ತಾರ್ಕಿಕ ಪ್ರಜ್ಞೆಯವರೆವಿಗೆ
ಸಾಕ್ಷರತೆ ಕೈಗೊಳ್ಳುವ ಪ್ರವಾಸವೇ ಶಿಕ್ಷಣ.

ಫಯಲೊ ಫ್ರಯರಿಸ್

ಈಶಾವಾಸ್ಯಂ—ಒಂದು ಪ್ರವಾಸ ಕಥನ

ಟಿ. ವಿ. ಸತ್ಯಪ್ರಭಾ
೧೪ ಮಹಡಿ, ೪ನೇ ಮುಖ್ಯ ರಸ್ತೆ
ವೆಂಕಟಪ್ಪ ಲೇಔಟ್, ಸಂಜಯನಗರ
ಬೆಂಗಳೂರು-೫೬೦ ೦೯೪

ಸುವರ್ಣಾವಕಾಶ

ದಕ್ಷಿಣ ಭಾರತದ ಪುಣ್ಯಕ್ಷೇತ್ರಗಳನ್ನು ನನ್ನವರೊಡನೆ ಸಂದರ್ಶಿಸಬೇಕೆಂಬ ಹಂಬಲ ನನ್ನಲ್ಲಿ ಬಹಳ ದಿವಸಗಳಿಂದ ಇತ್ತು. ನನ್ನ ಯಜಮಾನರಾದರೋ ಈ ಜಾಗಗಳ ವಿಶ್ವವಿದ್ಯಾಲಯಗಳಿಗೆ ಕಾರ್ಯನಿಮಿತ್ತ ಹೋದಾಗ ದೇವರ ದರ್ಶನವನ್ನೂ ಒಂದೊಂದಾಗಿ ಮುಗಿಸಿದವರು. ಆದರೆ ನಾನು ಮಾತ್ರ ಊಹುಂ. ಭಾಗ್ಯವಶಾತ್ ೧೯೯೫ರ ಅಕ್ಟೋಬರ್ ತಿಂಗಳಲ್ಲಿ ಇಂಥ ಒಂದು ಸೊಗಸಾದ ಅವಕಾಶ ತಾನಾಗಿಯೇ ದೊರಕಿತು. ಮಂಗಳೂರಿನ ನಮ್ಮ ಬಂಧುಗಳಾದ ಹೆಬ್ಬಾರ ಕುಟುಂಬದವರು ನಿರ್ಮಲಾ ಟ್ರಾವೆಲ್ಸ್ ಸಂಸ್ಥೆಯ ಮೂಲಕ ದಕ್ಷಿಣದ ಪುಣ್ಯಧಾಮಗಳಿಗೆ ಎಂಟುದಿವಸಗಳ ಪ್ರವಾಸದ ವ್ಯವಸ್ಥೆ ಮಾಡಿಸುತ್ತಿದ್ದಾರೆಂದು ತಿಳಿದುಬಂತು. ಆಗ ನನಗಾದ ಸಂತೋಷ ಅಷ್ಟಿಷ್ಟಲ್ಲ. ಅವು ನನಗೂ ನಮ್ಮವರಿಗೂ ರಜಾದಿವಸಗಳು. ಇನ್ನೇನು ಬೇಕು? ರೋಗಿ ಬಯಸಿದ್ದೂ ಹಾಲು, ವೈದ್ಯ ಹೇಳಿದ್ದೂ ಹಾಲು. ನಾವಿಬ್ಬರೂ ಖುಶಿಯಿಂದ ನಮ್ಮ ಹೆಸರುಗಳನ್ನು ನೋಂದಾಯಿಸಿದೆವು.

ನಾವು ಹೊರಟೆವು

ಪ್ರವಾಸಿಗಳ ೩೮ ಸದಸ್ಯರ ಪ್ರಧಾನ ತಂಡ ಅಕ್ಟೋಬರ್ ೨, ೧೯೯೫ ಸೋಮವಾರದ ಮುಂಜಾನೆ ೬ ಗಂಟೆಗೆ ಮಂಗಳೂರಿನಿಂದ ಹೊರಟಿತು. ಸುಮಾರು ಅದೇ ಹೊತ್ತಿಗೆ ಬೆಂಗಳೂರಿನ ಕಡೆಯಿಂದ ಹೊರಟ ಲ ಪ್ರವಾಸಿಗರ ಕಿರುತಂಡ ಮುಖ್ಯ ತಂಡವನ್ನು ಮೈಸೂರಿನಲ್ಲಿ ಸೇರಿಕೊಂಡಿತು; ಭದ್ರಾನದಿ ತುಂಗೆಯನ್ನು ಸೇರಿದಂತೆ. ಅಂದು ನವರಾತ್ರಿ ಹಬ್ಬದ ನವಮಿಯ ಪುಣ್ಯದಿವಸ. ಅಂದರೆ ವಿಜಯದಶಮಿಯ ಮುನ್ನಾದಿನ. ಅದಲ್ಲದೆ ಗಾಂಧಿಜಯಂತಿಯ ವಿಶಿಷ್ಟದಿನ ಕೂಡಾ. ಮಂಗಳೂರಲ್ಲಿ ಹಿರಿಯ ಹೆಬ್ಬಾರರ ಮನೆಯ ಹೆಸರು ಅಯೋಧ್ಯೆ. ಬೆಳಗಿನ ಉಪಹಾರ ಮುಗಿಸಿದ ಹೊಟೆಲು ಕೂಡಾ ಅಯೋಧ್ಯೆ. ಮೈಸೂರಲ್ಲಿ ಹಿರಿಯ-ಕಿರಿಯ ತಂಡಗಳು ಒಂದನ್ನೊಂದು ಸೇರಿದ ಜಾಗ ಕೂಡ 'ಅಯೋಧ್ಯೆ'. ಈ ಅಯೋಧ್ಯಾತ್ರಯಗಳಿಗಿಂತ ಉತ್ತಮವಾದ ಆರಂಭಜಾಗ ಬೇರೆ ಯಾವುದಿರಲು ಸಾಧ್ಯ? ನಾವೆಲ್ಲರೂ ಉಲ್ಲಸಿತರಾಗಿದ್ದೆವು.

ಭಾಸ್ಕರನ ಬಳಗ

ಸದಸ್ಯರ ಒಟ್ಟು ಸಂಖ್ಯೆ ೪೬. ಬಸ್ಸಿನ ಹೆಸರು, ಸೂಕ್ತವಾಗಿಯೇ, ಭಾಸ್ಕರ

ಎಂದು. ದಿವ್ಯ, ತೇಜೋಮಯ ಮತ್ತು ಜಗತ್ತಿನ ಎಲ್ಲ ಶಕ್ತಿಯ ಮೂಲದೇವತೆ ಸೂರ್ಯನ ಪರ್ಯಾಯನಾಮವದು. ನಮ್ಮ ಮಾರ್ಗದರ್ಶಿ, ವಯಸ್ಸಿನಲ್ಲಿ ಕಿರಿಯ ಆದರೆ ಎತ್ತರದ, ನಗುಮುಖದ ಮೋಹನದಾಸ ಹೆಗಡೆಯವರು. ಬಸ್ಸಿನ ಚಾಲಕ ಜನಾರ್ಧನರು; ಪಾರ್ಥನಿಗೆ ಶ್ರೀಕೃಷ್ಣ ಪರಮಾತ್ಮ ಸಾರಥಿಯಾಗಿ ಕುರುಕ್ಷೇತ್ರದ ಸಾಗರವನ್ನು ದಾಟಿಸಿದಂತೆ ಭವಸಾಗರವನ್ನು ದಾಟುವ ನಮ್ಮ ಯತ್ನದಲ್ಲಿ ನಮಗೆ ಜನಾರ್ಧನನೇ ಸಾರಥಿ. ಸಹಾಯಕ ಉನ್ನಿಕೃಷ್ಣನ್; ಗುರುವಾಯೂರಿನ ದೇವರ ಹೆಸರು ಹೊತ್ತವರು. ಅವರ ಮಾತು ಶುದ್ಧ ಮಲೆಯಾಳಂ. ನಮ್ಮದು ಕನ್ನಡ ಯಾ ತುಳು—ಆದ್ದರಿಂದ ನಸುನಗೆಯೇ 'ಉನ್ನಿ' ಮತ್ತು ನಮ್ಮ ನಡುವಿನ ಸಂಪರ್ಕಭಾಷೆ. ಬಸ್ಸಿನಲ್ಲಿ ಎಲ್ಲ ಅಚ್ಚುಕಟ್ಟು, ಒಪ್ಪ ಓರಣ. ನಾವು ಒಟ್ಟು ೪೯. 'ಭಾಸ್ಕರ' ಸೇರಿ ೫೦ರ ಬಳಗ.

ದಿನ ಒಂದು

ಮೊದಲ ದಿನದ ಸಂದರ್ಶನ ಮೈಸೂರಿನದು, ಮಧ್ಯಾಹ್ನದ ಊಟವನ್ನು 'ಅಯೋಧ್ಯೆ'ಯಲ್ಲಿ ಮುಗಿಸಿ, ಮೃಗಾಲಯದತ್ತ ನಮ್ಮ ಪಯಣ. ಅಲ್ಲಿ ಹುಲಿ, ಸಿಂಹ, ಆನೆ ಮೊದಲಾದ ಪ್ರಾಣಿಗಳನ್ನು ನೋಡಿ ಆನಂದಿಸಿದೆವು—ಅವು ನಮ್ಮನ್ನು ನೋಡಿ ಖುಶಿಪಟ್ಟವೋ ಇಲ್ಲವೋ, ಗೊತ್ತಿಲ್ಲ. ಇದೇ ಮೃಗಾಲಯವನ್ನು ನಾನು ಕೆಲವು ವರ್ಷಗಳ ಹಿಂದೆ ಸಂದರ್ಶಿಸಿದ್ದೆ. ಆಗಿದ್ದ ಸೊಗಸು, ಪ್ರಾಣಿ, ಪಕ್ಷಿ ಸಂಕುಲದ ವೈವಿಧ್ಯ ಈಗ ಅಲ್ಲಿಲ್ಲದಿರುವುದು ಬೇಸರದ ಸಂಗತಿ.

ಮುಂದೆ ನಾವು ವಿಶ್ವಪ್ರಸಿದ್ಧ ಕೃಷ್ಣರಾಜಸಾಗರ ಅಣೆಕಟ್ಟೆಗೆ ಹೋದೆವು. ಅದೊಂದು ಮನಮೋಹಕ ತಾಣ. ಮಾನವ ನಿರ್ಮಿತ ಅಣೆಕಟ್ಟು, ಹರಿಯುವ ಕಾವೇರಿಗೆ ಕಡಿವಾಣ ಹಾಕಿ, ಅಗಾಧ ನೀರನ್ನು ಶೇಖರಿಸಿ, ಎತ್ತರ ಪಡೆದ ಅದನ್ನು ನೀರಾವರಿಗೆ ಹಾಯಿಸುವ ಸುಂದರ ವ್ಯವಸ್ಥೆ. ಮೈಸೂರು ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಕಾಲದಲ್ಲಿ ಕಟ್ಟಿದ್ದು (೧೯೩೩), ಸರ್. ಎಂ. ವಿಶ್ವೇಶ್ವರಯ್ಯನವರ ಕೌಶಲಕ್ಕೆ ಜೀವಂತ ಸಾಕ್ಷಿ; ಕನ್ನಂಬಾಡಿ ಕಟ್ಟೆಯೆಂಬುದು ಇದಕ್ಕೆ ಇನ್ನೊಂದು ಹೆಸರು. ಇದೇ ಕಾವೇರಿ ಈಗ ಕರ್ನಾಟಕ-ತಮಿಳುನಾಡುಗಳ ನಡುವೆ ಆಗಾಗ 'ಕಾವೇರಿ'ಸುವ ಸಂಗತಿಯಾಗುತ್ತಿರುವುದು ವಿಷಾದದ ವಿಚಾರ. ಆದರೆ ಅದಕ್ಕೆ ವಿಶ್ವೇಶ್ವರಯ್ಯನವರು ಜವಾಬ್ದಾರರಲ್ಲ! ಈ ಅಣೆಕಟ್ಟಿನ ಕೆಳಭಾಗದಲ್ಲಿರುವ ಆಕರ್ಷಕ ವೃಂದಾವನ ಲೋಕಪ್ರಸಿದ್ಧ. ಏರಿ, ಹಾರಿ ಜಿಗಿಯುವ ನೀರಿನ ಕಾರಂಜಿಗಳು, ಬಣ್ಣ ಬಣ್ಣದ ಹೂವಿನ ಗಿಡಗಳು—ಮೇಲೆ ಎತ್ತರದ ಅಣೆಕಟ್ಟು. ಭಾರೀ ನೀರಿನ ಸಂಗ್ರಹ, ಬಳಕುತ್ತ, ಕುಲುಕುತ್ತ ಓಡುವ ನೀರಿನ ಹರಿವು, ಹಾರುವ ಕಾರಂಜಿ ಇತ್ಯಾದಿ. ಒಟ್ಟಿನಲ್ಲಿ ಆ ಜಾಗವನ್ನು ಬಿಟ್ಟು ಕದಲಲು ನಮಗೆ ಮನಸ್ಸೇ ಬರಲಿಲ್ಲ. ಆದರೆ ಮೋಹನದಾಸರು ಸಮಯಪ್ರಜ್ಞೆ ಇರುವವರು. ನಗುನಗುತ್ತಾ ಶಿಸ್ತುಪಾಲನೆ ಮಾಡಿಸುವವರು. ಆದ್ದರಿಂದ ಮನಸ್ಸನ್ನು ವೃಂದಾವನದಲ್ಲೇ ಬಿಟ್ಟು ನಮ್ಮ ದೇಹಗಳು ಮಾತ್ರ ಮೈಸೂರಿಗೆ ಮರಳಿದವು.

ಅಂದು ಮಹಾನವಮಿಯ ದಿವಸವಾದ್ದರಿಂದ 'ಚಾಮುಂಡಿ ಬೆಟ್ಟದ ದೇವಿ ಬಹಳ ಕುರ್ತಿನಲ್ಲಿದ್ದಾಳೆ ಹೊರಗಿನ ಯಾರನ್ನೂ ನೋಡುತ್ತಿಲ್ಲ'ವೆಂದು ತಿಳಿದು ಬಂತು. ಆದ್ದರಿಂದ ಬೆಟ್ಟಕ್ಕೆ ಹೋಗದೆ, ಸುಂದರ ಜಗಮಗಿಸುವ ಮೈಸೂರಿನ ಅರಮನೆಯ ದೀಪಾಲಂಕಾರದ ಸೊಬಗನ್ನು ಸವಿಯುತ್ತ ಸಂಜೆ ಕಳೆದೆವು. ಅದು ಕಣ್ಮನ ತಣಿಸುವ ದೃಶ್ಯ, ನಿಜವಾದ ಲಕ್ಷದೀಪೋತ್ಸವ. ಅನಂತರ ನಾವು ನಮ್ಮ ರಾತ್ರಿ ತಾಣವಾದ 'ಕಳಿಂಗ್' ಹೊಟೆಲನ್ನು ಸೇರಿದೆವು. ಆಗ ನನ್ನ ಪತಿರಾಯರು ಕಳಿಂಗ–ಅಶೋಕರ ಇತಿಹಾಸವನ್ನು ಹೇಳಲು ಯತ್ನಿಸಿದರೂ ಸುಸ್ತಾದ ನಾವೆಲ್ಲ ಅವರ ಮಾತಿಗೆ ಕಿವಿಗೊಡುವ ಸ್ಥಿತಿಯಲ್ಲಿಲ್ಲದ್ದರಿಂದ ಒಂದಿಷ್ಟು ಊಟಮಾಡಿ, ನಮ್ಮ ನಮ್ಮ ಕೊಠಡಿಗಳನ್ನು ಸೇರಿ ನಿದ್ರಾವಶರಾದೆವು.

ದಿನ ಎರಡು

ಮಂಗಳವಾರ, ಅಕ್ಟೋಬರ್ ೩. ಮುಂಜಾನೆ ಬ್ರಾಹ್ಮೀ ಮುಹೂರ್ತ ೪.೩೦ಕ್ಕೆ ನಾವೆಲ್ಲ ಎದ್ದೆವು, ಖುಷಿ ಖುಷಿಯಾಗಿ. ಪ್ರಾತರ್ವಿಧಿಗಳನ್ನು ಮುಗಿಸಲು ಕಟ್ಟುನಿಟ್ಟಾಗಿ ಒಂದು ಗಂಟೆಯ ಅವಧಿ. ನಮ್ಮ ಗಂಟುಮೂಟೆಗಳನ್ನು ೫.೩೦ಕ್ಕೆ ಭಾಸ್ಕರನಿಗೆ ಒಪ್ಪಿಸಲಾಯಿತು. ಬಳಿಕ ಅಯೋಧ್ಯೆಯಲ್ಲಿ ಬೆಳಗಿನ ತಿಂಡಿ–ಇಡ್ಲಿ, ವಡೆ, ಉಪ್ಪಿಟ್ಟು, ದೋಸೆ–ಚಹ, ಹಾಲು, ಕಾಫಿ ಮೊದಲಾದವು; ಎಲ್ಲವೂ ಅಪರಿಮಿತ, ಯಾರಲ್ಲಾದರೂ ಬಕಾಸುರನ ಪ್ರವೃತ್ತಿ ಸ್ಫುರಿಸುವ ಸನ್ನಿವೇಶ. ಇದರಿಂದಾಗಿಯೇ ನಮ್ಮಲ್ಲಿ ಕೆಲವರು 'ಅಬ್ಬಾ, ಹೊಟ್ಟೆ ಭರ್ತಿ' ಎಂದು ಪಿಸುಗುಟ್ಟುವಂತಾಯಿತು. ಅಂದಿನ ನಮ್ಮ ಪಯಣ ಬಂಡೀಪುರದ ಮೂಲಕ ಉದಕಮಂಡಲದ ಕಡೆಗೆ 'ಅತ್ತ ಇತ್ತ ಎಲ್ಲ ಕಡೆ ವನಸಿರಿ. ಅಲ್ಲಲ್ಲಿ ಜಿಂಕೆ, ಕಾಡುಕೋಣ, ನವಿಲು ಮತ್ತು ಗಜರಾಜರ ದರ್ಶನ. ಇತ್ತೀಚೆಗೆ ತಾನೇ ಮಳೆಗಾಲ ಕಳೆದದ್ದರಿಂದ ಪ್ರಕೃತಿಮಾತೆ ಮೈತುಂಬ, ಹಸನ್ಮುಖಿಯಾಗಿ ರಾರಾಜಿಸುತ್ತಿದ್ದಳು. ಬಸ್ಸಿನ ಒಳಗೆ ನಾವು ಹಾಡುತ್ತ ನಲಿಯುತ್ತ ಖುಷಿಯಿಂದ ಕುಪ್ಪಳಿಸಿದೆವು. ಕ್ಯಾಮರಾ ತಂದಿದ್ದವರು ಅದನ್ನು 'ಕ್ಲಿಕ್ಕಿ'ಸಿದರು—ಈ ಮಧ್ಯೆ ದಂತಚೋರ, ಶ್ರೀಗಂಧ ಕಳ್ಳಸಾಗಣಿಕೆಯ ಕುಖ್ಯಾತಿಯ ವೀರಪ್ಪನ್ ದೈತ್ಯನ ಮಾತೂ ಬಂತು. ಅವನನ್ನು ಹಿಡಿದು ಕೊಟ್ಟವರಿಗೆ ಮಾರ್ಗದರ್ಶಿ ಹೆಗಡೆ ನಿರ್ಮಲಾ ಟ್ರಾವೆಲ್ಸ್‌ನ ಪರಿಯಿಂದ ಹತ್ತು ಲಕ್ಷಗಳ ಬಹುಮಾನ ಘೋಷಿಸಿದರು. ಆದರೆ ನಾವು ಯಾರೂ ಆ ಸಾಹಸಕ್ಕೆ ಕೈ ಹಾಕಲಿಲ್ಲ. ನಾವು ಹೊರಟಿದ್ದು ಭಗವಂತನ ದರ್ಶನಕ್ಕೆ ತಾನೇ?

ಮುಂದೆ ಸುಮಾರು ೧೧ ಗಂಟೆಗೆ ನಾವು ಉದಕಮಂಡಲವನ್ನು ತಲಪಿದೆವು. ಅಲ್ಲಿನ ಮಾರಿಯಮ್ಮನ ತೆಪ್ಪಕೊಳ, ಬಟಾನಿಕಲ್ ತೋಟ ಇತ್ಯಾದಿ ಮನತಣಿಯುವಷ್ಟು ನೋಡಿದೆವು. ವಿವಿಧ ವಂಶಗಳ ಸಸ್ಯಸಂಪತ್ತು—ಇಟಲಿ, ಮೆಕ್ಸಿಕೋ ಮೊದಲಾದ ಬೇರೆ ಬೇರೆ ದೇಶಗಳಿಂದ ತರಿಸಿದ್ದೂ ಸೇರಿ, ನಮ್ಮ ಮನಸ್ಸನ್ನು ಸೂರೆಗೊಂಡಿತು. ಈ ವನರಾಜಿಯ ನಡುವೆ ಕವಿತ್ವದ ತುಣುಕೂ ಇಲ್ಲದ ನಾನು ಕೂಡ ಕಿರುಗವನವೊಂದನ್ನು ರಚಿಸಿದೆ.

ಹಸಿರೇ ಹಸಿರು, ಪ್ರಕೃತಿಯ ಬಸಿರು
ಹಸಿರೇ ಹಸಿರು ಜೀವದ ಉಸಿರು
ಹಸಿರಿರಲು ಅದೇ ಸರ್ವ ಸಂಪತ್ತು
ಇರದಿರೆ ಅದುವೇ ಖಚಿತ ವಿಪತ್ತು

ಸುತ್ತಲೂ ಸಸ್ಯರಾಶಿ
ಅದೇ ಜೀವಕಾಶಿ
ಅದಿರಲು ಎಲ್ಲ ಅವಕಾಶ
ಅದರ ನಾಶ ಕಾಲನಿಗೆ ಸದವಕಾಶ

ಸಮುದ್ರ ಮಟ್ಟದಿಂದ ೨೨೪೦ ಮೀಟರ್ ಎತ್ತರದಲ್ಲಿರುವ ಉದಕಮಂಡಲ (ಚುಟುಕು ಹೆಸರು, ಊಟಿ) ದಕ್ಷಿಣದ ಆಕರ್ಷಕ ಬೇಸಿಗೆತಾಣ. ಪೂರ್ವ ಮತ್ತು ಪಶ್ಚಿಮ ಘಟ್ಟಗಳ ಸಾಲು ಪರಸ್ಪರ ಸೇರುವ ನೀಲಗಿರಿಯ ತೆಕ್ಕೆಯಲ್ಲಿರುವ ಎತ್ತರದ ಸುಂದರ ಪ್ರದೇಶವದು. ಚಹಾ, ಕಾಫಿ, ನೀಲಗಿರಿ, ಏಲಕ್ಕಿಗಳಿಗೂ, ಮಧುಚಂದ್ರ ತಾಣವಾಗಿಯೂ ಪ್ರಸಿದ್ಧ. ಅದನ್ನು ನೋಡಿದ ನಾವೇ ಧನ್ಯರು. ನಮ್ಮಲ್ಲಿ ಇಳಿವಯಸ್ಸಿನವರು ಕೂಡ ತರುಣರ ಹುಮ್ಮಸ್ಸನ್ನು ಅಲ್ಲಿ ತೋರ್ಪಡಿಸಿದರು!

ಬಳಿಕ ನಮ್ಮ ಭಾಸ್ಕರನ ಓಟ ಇಳಿಜಾರಿನಲ್ಲಿ—ಕೂನೂರು ಮತ್ತು ಮೆಟ್ಟುಪಾಳ್ಯ ಮೂಲಕ ಪಳನಿಯ ಕಡೆಗೆ—ಅಷ್ಟರಲ್ಲಿ ಮಳೆರಾಯ ಬಂದ. ಎರಡೂ ಕಡೆ ಕಣ್ಣಿಗೆ ಎಟಕುವಷ್ಟು ಜಾಗದಲ್ಲೂ ಚಹಾತೋಟ. ಚಹಪ್ರಿಯರಿಗೆ ಸ್ವರ್ಗಕ್ಕೆ ಒಂದೇ ಗೇಣು, ಉಳಿಯುವ ಸನ್ನಿವೇಶ—ಈ ಎಕರೆಗಟ್ಟಲೆ ಬೆಳೆದ ಚಹಾ ಎಷ್ಟು ಲಕ್ಷಜನರಿಗೆ ಮುದ ನೀಡುತ್ತಿದೆಯೆಂದು ಮನದಲ್ಲೇ ಲೆಕ್ಕಿಸುತ್ತಾ ಪಕ್ಕದಲ್ಲೇ ಕಾಣಿಸುತ್ತಿದ್ದ ಬೆಟ್ಟವೇರುವ ವಿಶೇಷ ರೈಲನ್ನು ನೋಡುತ್ತ ನಾವು ಇಳಿದೆವು, ಸ್ವರ್ಗದಿಂದ ಧರೆಗೆ! ಪಳನಿ ತಲಪಿ ಷಣ್ಮುಗಾನಂದ ಲಾಡ್ಜ್‌ನ್ನು ಸೇರಿದೆವು.

ದಿನ ಮೂರು

ಬುಧವಾರ, ಅಕ್ಟೋಬರ್ ೪, ಸುಮಾರು ೪೫೦ ಅಡಿ ಎತ್ತರದ ಪಳನಿ ಬೆಟ್ಟದಲ್ಲಿರುವ (ಅವನು ನಿಜವಾಗಿಯೂ ಎಲ್ಲೆಲ್ಲೂ ಇದ್ದಾನೆ!) ಸುಬ್ರಹ್ಮಣ್ಯ ಸ್ವಾಮಿಯ (ಮುರುಗನ್) ದರ್ಶನಲಾಭ. ಶಿವಪಾರ್ವತಿಯರು ತಮ್ಮ ಮಕ್ಕಳಾದ ಗಣೇಶ, ಸುಬ್ರಹ್ಮಣ್ಯರೊಡನೆ ಭೂಪ್ರದಕ್ಷಿಣೆ ಮೊದಲು ಮುಗಿಸಿದವನಿಗೆ ನಾರದ ಮುನಿಗಳಿತ್ತ ವಿಶೇಷ ಹಣ್ಣನ್ನು ನೀಡುವ ಮಾತು ತಿಳಿಸಿದಾಗ, ಕಾರ್ತಿಕೇಯ ತನ್ನ ವಾಹನವಾದ ನವಿಲನ್ನೇರಿ ಓಟ ಆರಂಭಿಸಿದನಂತೆ. ಸ್ಥೂಲದೇಹಿ, ಆದರೆ ಸೂಕ್ಷ್ಮಮತಿ ಗಣಪ ಶಿವಪಾರ್ವತಿಯರೇ ಬ್ರಹ್ಮಾಂಡವೆಂದು ತಿಳಿಸಿ ಅವರಿಗೆ ಪ್ರದಕ್ಷಿಣೆಗೈದು ಪೈಪೋಟಿಯನ್ನು ಗೆದ್ದು ಹಣ್ಣನ್ನು ತನ್ನದಾಗಿಸಿಕೊಂಡ. ನಿರುತ್ಸಾಹಗೊಂಡ ಕಾರ್ತಿಕೇಯ ಈ ಊರಿಗೆ ತಪಸ್ಸು ಮಾಡಲು ಬಂದ. ಆಗ ಇತರ ದೇವತೆಗಳು, 'ನೀನೇ ಎಲ್ಲರಿಗೂ ಫಲವನ್ನು ನೀಡುವವನು, ಈ ಪುಟ್ಟ ಹಣ್ಣಿಗಾಗಿ ಯಾಕೆ ಮುನಿಸು?' ಎಂದು ಕಾರ್ತಿಕೇಯನನ್ನು ಸಮಾಧಾನಿಸುತ್ತಾರೆ. ಹೀಗಾಗಿ, ಈ ಜಾಗಕ್ಕೆ 'ಪಳಂ ನೀ' (ತಮಿಳು) ಯಾ 'ಪಳನೀ' ಎಂದೇ ಹೆಸರಾಯಿತು. ಇದು ಪಳನಿಯ ಪೌರಾಣಿಕ ಹಿನ್ನೆಲೆ. ಪಳನಿ ಬೆಟ್ಟವನ್ನೇರಲು ಮೂರು ಮಾರ್ಗಗಳಿವೆ. ಆನೆದಾರಿ ಎನ್ನಲಾಗುವ ಇಳಿಜಾರು ಮಾರ್ಗ, ೬೮೯ ಸೋಪಾನಗಳಿರುವ ಕಾಲು

ಮಾರ್ಗ ಹಾಗೂ ಆಧುನಿಕ ರೋಪ್‌ವೇ. ...ತ್ತರಿಗೆ ಕಾಲುದಾರಿಯೇ ಹಿತವೆಂದು ತಿಳಿದು ಅದರ ಮೂಲಕ ಬೆಟ್ಟ ಹತ್ತಿ ಸ್ವಾಮಿಯ ದರ್ಶನ ಪಡೆದೆವು ನಾವು; ಮೂರು ದಿನ ಕಾಲು ಸೊಂಟಗಳಿಗೆ ನೋವಿನೆಣ್ಣೆ ತಿಕ್ಕಿದರೂ ಪರವಾಗಿಲ್ಲವೆಂಬುದು ನಮ್ಮೆಲ್ಲರ ಮತವಾಗಿತ್ತು. ಕಾರ್ತಿಕೇಯನ ಆಶೀರ್ವಾದ ಪಡೆದ ನಮ್ಮ ತಂಡ ತಿರುಚನಾಪಳ್ಳಿ (ತಿರುಚಿ)ಯ ಕಡೆಗೆ ಪ್ರಯಾಣಿಸಿತು.

ನಮ್ಮ ಭಾಸ್ಕರ ಸರಿಸುಮಾರು ೧೫೦ ಕಿ.ಮೀ. ಕ್ರಮಿಸಿದಾಗ ತಿರುಚಿ ಸೇರಿದ. ಬಸ್ಸಿನೊಳಗೆ ಕಾಲಹರಣಕ್ಕೆ ಅಂತ್ಯಾಕ್ಷರಿ, ಹಾಡು, ಶ್ಲೋಕ ಹೇಳುವುದು, ವಿನೋದದ ಮಾತು ಮೊದಲಾದವು ನಡೆದವು. ತಿರುಚಿ ತಲಪಿದಾಗ ಅಪರಾಹ್ನ ಮೂರು ಗಂಟೆ. ಇದೊಂದು ದೊಡ್ಡ ಊರು, ವ್ಯಾಪಾರಿ ಕೇಂದ್ರ. ಇಲ್ಲಿನ ಪ್ರೇಕ್ಷಣೀಯ ಸ್ಥಳಗಳಲ್ಲಿ ಸರಿಸುಮಾರು ೨೭೩ ಅಡಿಯೆತ್ತರದ ಬೆಟ್ಟದ ಮೇಲಿರುವ ಕೋಟೆ ಹಾಗೂ ಉಟ್ಟಿಗಣೇಶನ ಗುಡಿ ಮೊದಲನೆಯದು. ಪೌರಾಣಿಕವಾಗಿ ಇದಕ್ಕೆ ರಾಮಾಯಣದ ವಿಭೀಷಣನೊಡನೆ ನಂಟಿದೆ, ಬೆಟ್ಟ ಹತ್ತಿದವರಿಗೆ ಗಣಪನ ಅನುಗ್ರಹದೊಂದಿಗೆ ತಿರುಚಿ ನಗರದ ಮನೋಹರ ದೃಶ್ಯ, ಹತ್ತಿರದಲ್ಲೇ ಕಾವೇರಿಯ ನಿಧಾನ ಹರಿವು ನೋಡಲು ಸಿಗುತ್ತವೆ. ಬೇಸಿಗೆಯ ಬಿಸಿಲಿಗೆ ದಣಿದವರಿಗೆ ಉಲ್ಲಾಸದಾಯಕ ತಂಪುಗಾಳಿ ನವಚೇತನ ನೀಡುತ್ತದೆ. ಬ್ರಿಟಿಷರ ಕಾಲದಲ್ಲಿ ರಾಬರ್ಟ್ ಕ್ಲೈವ್ ಮಹಾಶಯನ ಸೆನಟಿಗೆ ಕಟ್ಟಿಸಿದ ಇಗರ್ಜಿಯೂ ತಿರುಚಿಯಲ್ಲಿದೆ.

ತಿರುಚಿಯಿಂದ ಸರಿಸುಮಾರು ೫ ಕಿ.ಮೀ. ದೂರದಲ್ಲಿ ಕಾವೇರಿ ದಾಟಿದಾಗ ಶ್ರೀರಂಗ ಸಿಗುತ್ತದೆ. ಶ್ರೀರಾಮ ನೀಡಿದ ರಂಗನಾಥಸ್ವಾಮಿಯ ಸುಂದರ ವಿಗ್ರಹವನ್ನು ವಿಭೀಷಣ ಲಂಕೆಗೊಯ್ಯುತ್ತಿದ್ದಾಗ, ಸಂಧ್ಯಾವಂದನೆ ಕಾಲದಲ್ಲಿ ಅದನ್ನು ಹಿಡಿದುಕೊಳ್ಳಲು ಬಾಲಕವೇಷದಲ್ಲಿ ಬಂದ ಗಣಪನಿಗಿತ್ತಾಗ ಆತನ (ಎಂದಿನ) ತಂಟೆಯಿಂದ ಮೂರ್ತಿಗೆ ಭೂಸ್ಪರ್ಶವಾಗಿ ಅದು ಸ್ಥಿರಗೊಂಡ ಜಾಗವೇ ಶ್ರೀರಂಗಂ. ಇದೇ ಗಣೇಶ ಗೋಕರ್ಣದಲ್ಲಿ ಶಿವಲಿಂಗವನ್ನು ಸ್ಥಿರಗೊಳಿಸಿದಾಗ ಸೋತವ ರಾವಣ, ಗೆದ್ದವರು ನಾವು, ದೇವರ ಸಾನ್ನಿಧ್ಯ ದೊರೆತು, ಶ್ರೀಗಣೇಶನಿಗೆ ಧನ್ಯವಾದ ಅರ್ಪಿಸಿ, ಅನಂತಶಯನ ರಂಗನಾಥಸ್ವಾಮಿಯ ದರ್ಶನ ಪಡೆದೆವು. ದೇವಳಕ್ಕೆ ಏಳು ಗೋಪುರದ್ವಾರಗಳು, ಒಂದಾದ ಬಳಿಕ ಇನ್ನೊಂದು, ಇರುವುದರಿಂದ ಇಲ್ಲಿಗೆ ಭೂವೈಕುಂಠ ಎಂದೂ ಹೆಸರಿದೆ. ಇಲ್ಲಿಂದ ಸುಮಾರು ಒಂದು ಕಿ.ಮೀ. ದೂರದಲ್ಲಿರುವ ಜಂಬುಕೇಶ್ವರ ಸ್ವಾಮಿಯ ದರ್ಶನವೂ ನಮಗಾಯಿತು. ಬಳಿಕ ನಮ್ಮ ರಾತ್ರಿ ನೆಲೆಯಾದ ಅಜಂತಾ ಲಾಡ್ಜ್‌ಗೆ ಹೋದೆವು; ಮುಂದಿನ ಊಟದ ವೈಭವ ಬೇರೆ ಹೇಳಬೇಕಾದ್ದಿಲ್ಲ!

ದಿನ ನಾಲ್ಕು

ಗುರುವಾರ, ಅಕ್ಟೋಬರ್ ೫. ನಸುಕಿನಲ್ಲೇ ಎದ್ದು ಭಾಸ್ಕರವನ್ನೇರಿ ಸುಮಾರು ೯೦ ಕಿ.ಮೀ. ಕ್ರಮಿಸಿ ತಂಜಾವೂರು ತಲಪಿದಾಗ ಬೆಳಗಿನ ೮ ಗಂಟೆ. ಇಲ್ಲಿ ರಾಜರಾಜ

ಚೋಳನು ತನ್ನ ಕುಷ್ಠರೋಗ ಪರಿಹಾರಕ್ಕಾಗಿ ಕರೋರ ಗುರುಗಳ ಆದೇಶದಂತೆ ನರ್ಮದಾನದಿಯಿಂದ ತಂದ ಶಿವಲಿಂಗವನ್ನು ಸ್ಥಾಪಿಸಿ ದೇವಳದ ನಿರ್ಮಾಣ ಮಾಡಿಸಿದ. ಇಲ್ಲಿನ ಶಿವಲಿಂಗ ಅತ್ಯಂತ ದೊಡ್ಡದು. (೧೮ ಅಡಿ ಎತ್ತರ, ೨೨ ಅಡಿ ಸುತ್ತಳತೆ); ಹೀಗಾಗಿ ಬೃಹಧೀಶ್ವರ ಎಂದು ಪ್ರಸಿದ್ಧ. ದೇವರ ಎದುರು ಕಲ್ಲಿನ ನಂದಿ, ಲೇಪಾಕ್ಷಿಯದ್ದನ್ನು ಹೊರತುಪಡಿಸಿದರೆ, ಅತ್ಯಂತ ದೊಡ್ಡದು. ನಾವು ದೇವರ ದರ್ಶನ ಪಡೆದು, ಹಸಿವು ಬಾಯಾರಿಕೆಗೆ ಪರಿಹಾರ ಮತ್ತು ಪ್ರಕೃತಿಕರೆಗಳಿಗೆ ಉತ್ತರಿಸಿದ ಬಳಿಕ ೨೫೦ ಕಿ.ಮಿ. ದೂರದ ಶ್ರೀರಾಮೇಶ್ವರಕ್ಕೆ ಪಯಣಿಸಿದೆವು. ಬಸ್ಸಿನಲ್ಲಿ ಕಾಲಹರಣಕ್ಕೆ ಆಕರ್ಷಕ ಕಾರ್ಯಕ್ರಮಗಳ ಪುನರಾವರ್ತನೆಯಾಯಿತು, ಗಂಟೆ ಬದಲಿದ್ದೇ ತಿಳಿಯದಂತೆ. ರಾಮೇಶ್ವರ ತಲಪಿದಾಗ ಸಂಜೆಯ ೫ ಗಂಟೆ. ರಾವಣ ಸಂಹಾರದ ಬಳಿಕ ಪಾಪಪರಿಹಾರಕ್ಕಾಗಿ ಸೀತಾರಾಮರು ಮರಳಿನಿಂದ ರಚಿಸಿ, ಸ್ಥಾಪಿಸಿ ಪೂಜಿಸಿದ ಪವಿತ್ರಲಿಂಗ ಇಲ್ಲಿದೆ. ಲಂಕೆಗೆ ಹೋಗುತ್ತ ಶ್ರೀರಾಮ–ಲಕ್ಷ್ಮಣರು ಪೂಜಿಸಿದ ಲಿಂಗ ೧೯೬೪ರ ಬಿರುಗಾಳಿ ಕಾಲದಲ್ಲಿ ಧನುಷ್ಕೋಟಿಯೊಂದಿಗೆ ಸಮುದ್ರಪಾಲಾಗಿದೆಯಂತೆ. ರಾಮೇಶ್ವರದಲ್ಲಿ ೧೨೧೨ ಕಂಬಗಳ ವಿಶಾಲವಾದ ದೇವಳ; ೨೨ ಪವಿತ್ರ ತೀರ್ಥಗಳು, ಪಕ್ಕದಲ್ಲೇ ಬಂಗಾಳಕೊಲ್ಲಿ. ಸಂಜೆಯೇ ದೇವರ ದರ್ಶನ ಪಡೆದು, ಸ್ಥಳಪುರಾಣವನ್ನು ಅಲ್ಲಿನ ಮಾರ್ಗದರ್ಶಿ ಮುತ್ತು ಅವರಿಂದ ತಿಳಿದೆವು. ಬಹುಭಾಷಿ ಅತ. ಅನಂತರ ಚಿಪ್ಪಿನ ವಸ್ತು, ಶಂಖ, ಸೀರೆ, ಕೈಚೀಲ ಇತ್ಯಾದಿಗಳ ಖರೀದಿಗೆಂದು ಸುತ್ತಾಡಿ ಸಾಕಷ್ಟು ಹಣ ವ್ಯಯ ಮಾಡಿದೆವು. ಒಂದೇ ವಸ್ತುವಿಗೆ ರೂ. ೨೦ ತೆತ್ತವರೂ, ರೂ. ೭೫ ತೆತ್ತವರೂ ನಮ್ಮಲ್ಲಿ ಇದ್ದರು. ಸಮುದ್ರದ ಅಲೆಗಳಂತೆ ಇಲ್ಲಿ ಬೆಲೆಗಳ ಏರಿಳಿತ ಕೂಡ. ಆದರೂ ಹಣ ಕಳೆದುಕೊಳ್ಳುವುದಕ್ಕಿಂತ ಖರ್ಚುಮಾಡುವುದು ವಿಹಿತವಾದ್ದರಿಂದ, ಗಂಟುಮೂಟೆಯ ಭಾರವೇರಿದರೂ ಮನಸ್ಸಿನ ಆತಂಕದ ತೂಕ ಹೆಚ್ಚಿನವರಿಗೆ ಇಳಿಯಿತು! ರಾತ್ರಿಯು ನಮ್ಮ ವಿಶ್ರಾಂತಿ ಮಹಾರಾಜ ಲಾಡ್ಜ್‌ನಲ್ಲಿ. ನಮ್ಮೆಲ್ಲರ ಅಂತಸ್ತಿಗೆ ಸರಿಯಾದ ಹೆಸರು ಅದರದ್ದು.

ದಿನ ಐದು

ಶುಕ್ರವಾರ, ಅಕ್ಟೋಬರ್ ೬. ನಸುಕಿನಲ್ಲಿ ಎದ್ದು ತಯಾರಾಗಿ ಮೊದಲು ಸಮುದ್ರಸ್ನಾನ, ಬಳಿಕ ೨೨ ಪವಿತ್ರ ತೀರ್ಥಗಳ ಸ್ನಾನ ಮುಗಿಸಿದೆವು. ಇವುಗಳಿಂದ ಪುನೀತರಾದ ನಾವು ದೂರದ ಮಧುರೆಗೆ (೨೫೦ ಕಿ.ಮಿ.) ಮೀನಾಕ್ಷಿ ಅಮ್ಮನವರ ದರ್ಶನಕ್ಕಾಗಿ ಹೊರಟೆವು. ತಲಪಿದಾಗ ಸಂಜೆಯ ೫ ಗಂಟೆ. ಮೊದಲು ಭವ್ಯದೇಗುಲದ ಭೇಟಿ, ಬಳಿಕ ಶಾಪ್ಪಿಂಗ್; ಪಾರಮಾರ್ಥಕ್ಕೆ ಆದ್ಯತೆ ತಾನೇ? ದೇಗುಲದ ೧೪ ಎತ್ತರವಾದ ಗೋಪುರಗಳು, ಮಧ್ಯದ ೧೨೫ ಕಿ.ಲೋ (ಗ್ರಾಂ ಅಲ್ಲ!) ತೂಕದ ಅಪ್ಪಟ ಚಿನ್ನದ ಕಳಸವುಳ್ಳ ಗೋಪುರ, ೧೦೪ ಗಣೇಶನ ವಿಗ್ರಹಗಳು, ಸುಂದರೇಶ್ವರನ ಉದ್ಭವಲಿಂಗ, ೧೫ ಎಕರೆ ವಿಶಾಲಜಾಗ, ಅಧಿದೇವತೆಯಾಗಿ ಮೀನಾಕ್ಷಿ ಅಮ್ಮನವರು. ಇವೆಲ್ಲ ಯಾತ್ರಿಗಳ ಮನ

ಸೂರೆಗೈಯುವ ಸಂಗತಿಗಳು. ಪಾಂಡ್ಯ ರಾಜರ ಕಾಲದಲ್ಲಿ ಮಧುರೆ ರಾಜಕೀಯ ಶಕ್ತಿಕೇಂದ್ರವಾಗಿತ್ತು. ದೇವಾಲಯದ ಸಂದರ್ಶನದಿಂದ ನಮಗಾದ ಆನಂದ ಸಂತಸಗಳು ಅಪಾರ. ಅಂದಿನ ಸಂಜೆಯ ಬಿಡುವೇಳೆಯಲ್ಲಿ ನಮ್ಮಲ್ಲಿ ಹೆಚ್ಚಿನವರು ತಮ್ಮಲ್ಲಿ ಉಳಿದಿದ್ದ ಹಣವನ್ನು ಸೀರೆಯಾಗಿಯೋ, ಧೋತಿಯಾಗಿಯೋ ಪರಿವರ್ತಿಸಿದ ವಿವರ ನಾನು ನೀಡುವುದಿಲ್ಲ. ಆದರೆ ಈ ಸಂಗತಿ ಮಾತ್ರ ನಿಜ—ಖರ್ಚು ಮಾಡಿದ್ದು ನಮಗೆ, ಬಚ್ಚಿಟ್ಟಿದ್ದು ಪರರಿಗೆ, ಸರಿ ತಾನೇ? ಅಂದಿನ ನಮ್ಮ ವಸತಿ, ವಿಶ್ರಾಂತಿ ವಿಸಾನಾ ಲಾಡ್ಜ್‌ನಲ್ಲಿ.

ದಿನ ಆರು

ಶನಿವಾರ, ಅಕ್ಟೋಬರ್ ೭, ನಮ್ಮೆಲ್ಲರ ಉಲ್ಲಾಸ, ಲವಲವಿಕೆ ದಿನದಿಂದ ದಿನಕ್ಕೆ ಏರುತ್ತಿದ್ದವು, ಲಗೇಜ್‌ನೊಂದಿಗೆ. ಶ್ರೀದೇವರ ದಯದಿಂದ ಯಾರಿಗೂ ಅನಾರೋಗ್ಯ ಕಾಡಲಿಲ್ಲ; ಶೀತ ಚಳಿ ಕೂಡ ಇಲ್ಲ. ಈ ದೃಷ್ಟಿಯಿಂದ ನಮ್ಮ ತಂಡದಲ್ಲೇ ಇದ್ದ ಇಬ್ಬರು ವೈದ್ಯರು ಅನವಶ್ಯಕರಾದರೆಂದೇ ಹೇಳಬೇಕು. ರಕ್ಷಕ ಅವನಿರುವಾಗ ಇತರರು ಯಾಕೆ? ನಮ್ಮದು ಒಟ್ಟು ಹದಿನಾರು ಕುಟುಂಬಗಳು. ದಿನ ಕಳೆದಂತೆ ನಮ್ಮ ಪರಸ್ಪರ ಅನ್ಯೋನ್ಯತೆ, ಪ್ರೀತಿ, ವಾತ್ಸಲ್ಯ ಏರುತ್ತಿದ್ದವು. ಹೊಸಬರ ಪರಿಚಯ ಇನ್ನು ಚೆನ್ನಾಗಿ ಆಗುತ್ತಿತ್ತು. ಮೊದಲೇ ತಿಳಿದಿದ್ದವರ ಸ್ನೇಹ ಬಲವಾಗುತ್ತಿತ್ತು. ಭಗವಂತನ ದರ್ಶನ ಕಾರ್ಯದಲ್ಲಿ ನಾವೆಲ್ಲ ಸಮಭಾಗಿಗಳು. ದೇವರು ಎಲ್ಲರ ಒಳಗೂ ಹೊರಗೂ ಇರುವವ ತಾನೇ? ಇದರ ಪೂರ್ಣ ಮನವರಿಕೆ ನಮ್ಮ ಈ ಪ್ರವಾಸದ ಒಂದು ಮುಖ್ಯ ಲಾಭ, ಬಸ್ಸಿನ ಸಿಬ್ಬಂದಿವರ್ಗ ಕೂಡ ತಮ್ಮ ವಿನಯಪೂರ್ಣ ನಗುಮುಖದ ಸೇವೆಯಿಂದ ನಮಗೆ ಅನುಕೂಲವಾದರು. ಮಾರ್ಗದರ್ಶಿ ಹೆಗಡೆಯವರಂತೂ ನಮ್ಮವರೇ ಆದರು.

ಮುಂದಿನ ನಮ್ಮ ಗುರಿ ಕನ್ಯಾಕುಮಾರಿ, ಭಾರತ ಭೂಶಿರ; ಮೂರು ಮಹಾಸಮುದ್ರಗಳ ಪವಿತ್ರ ಸಂಗಮ. ಮಧುರೆಯಿಂದ ಬೆಳಗಿನ ಜಕ್ಕೆ ಹೊರಟ ನಾವು ತಿರುಪುರಕೊಂಡ್ರಂ (ಬೆಟ್ಟದ ಸುಬ್ರಹ್ಮಣ್ಯ ದೇವರು), ಶುಭೇಂದ್ರ ದೇವಳಗಳನ್ನು ನೋಡಿ ಏರಿದ ಉಲ್ಲಾಸದಿಂದ ಮುಂದುವರಿದೆವು. ಗೌತಮ ಶಾಪದಿಂದ ದೇವೇಂದ್ರ ವಿಮೋಚನೆಗೊಂಡ ಶುಚೀಂದ್ರದಲ್ಲಿ ಒಂದೇ ಕಲ್ಲಲ್ಲಿ ಕಡೆದ ತ್ರಿಮೂರ್ತಿಗಳ ಭವ್ಯಕೆತ್ತನೆ, ಏಕಶಿಲೆಯ ೧೮ ಅಡಿ ಎತ್ತರದ ವಿಶ್ವರೂಪ ಹನುಮಂತ, ಸುಂದರ ಗಣೇಶ ವಿಗ್ರಹಗಳೂ ಇದೆ. ಮಧ್ಯಾಹ್ನ ಒಂದು ಗಂಟೆಯ ಹೊತ್ತಿಗೆ ನಾವು ಕನ್ಯಾಕುಮಾರಿಯನ್ನು ತಲಪಿ ಅಂದಿನ ವಿಶ್ರಾಂತಿಧಾಮವಾದ ಶಂಕರ ಗೆಸ್ಟ್‌ಹೌಸನ್ನು ಸೇರಿದೆವು. ಹಾಂ, ಒಂದು ತಿಳಿಸಲು ಮರೆತೆ. ಶುಚೀಂದ್ರದಲ್ಲಿ ದೇವಳದ ಬಳಿಯೇ ನಿರ್ಮಲ ನೀರಿನ ವಿಶಾಲ ಪುಷ್ಕರಿಣಿ ಇದೆ. ಅದರಲ್ಲಿ ಕಾಲುತೊಳೆದು, ನೀರು ಪ್ರೋಕ್ಷಿಸಿಕೊಂಡು ದೇವದರ್ಶನ ಮಾಡಿದಾಗ ಆಗುವ ಸಂತಸ ವರ್ಣಿಸಲಸದಳ.

ಕನ್ಯಾಕುಮಾರಿಯಲ್ಲಿ ಅಪರಾಹ್ನ ಮೊದಲು ಶ್ರೀ ಸ್ವಾಮಿವಿವೇಕಾನಂದರ ಸ್ಮಾರಕ ಸೌಧಕ್ಕೆ ತೆರಳಿದೆವು. ಸಮುದ್ರ

ಮಧ್ಯದ ಭವ್ಯಬಂಡೆಯ ಮೇಲೆ ಸ್ವಾಮಿಜಿ ೧೮೯೨ರಲ್ಲಿ ಶಿಕಾಗೋಗೆ ತೆರಳುವ ಮುನ್ನ ಮೂರು ದಿನ (ಡಿ. ೨೫, ೨೬, ೨೭) ಅವಿರತ ಧ್ಯಾನಮಗ್ನರಾಗಿದ್ದ ಜಾಗದಲ್ಲಿ ಇಂದು, ನೂರು ವರ್ಷಗಳ ಬಳಿಕ, ಭವ್ಯ ಸ್ಮಾರಕ ತಲೆ ಎತ್ತಿ ನಿಂತಿದೆ. ದೇವಿ ಕನ್ಯಾಕುಮಾರಿಯ ಶ್ರೀ ಪಾದವನ್ನೊಳಗೊಂಡ ಒಂದು ದೇಗುಲವೂ ಇಲ್ಲಿದೆ; ಪ್ರಶಾಂತ ಧ್ಯಾನ ಮಂದಿರವೂ ಇದೆ. ಸುತ್ತಲೂ ಭೋರ್ಗರೆಯುವ ಸಮುಂದ್ರತ್ರಯಗಳು ಭೂಮದ ಕಲ್ಪನೆಯನ್ನು ವಾಸ್ತವಗೊಳಿಸುತ್ತವೆ. ಅನಂತರ ಕನ್ಯಾಕುಮಾರಿಯ ದೇವಸ್ಥಾನ, ಸರ್ವಧರ್ಮ ಸಂಕೇತವಾದ ಗಾಂಧಿಭವನವನ್ನೂ ನೋಡಿದ್ದಾಯಿತು. ಇನ್ನೇನು 'ಶಾಪಿಂಗ್'ಗೆ ಹೊರಡಬೇಕು ಅನ್ನುವಷ್ಟರಲ್ಲಿ ಧಾರಾಕಾರ ಮಳೆ. ಅದರಿಂದಾಗಿ ಸೂರ್ಯಾಸ್ತಮಾನದ ಸುಂದರ ದೃಶ್ಯ ಮತ್ತು ಇನ್ನಷ್ಟು ಲಗೇಜು ಶೇಖರಣೆ ತಪ್ಪಿದವು. 'ಹಣ ಉಳಿಯಿತು' ಎಂದು ಶೀರ ಧೈರ್ಯಶಾಲಿ ಪತಿರಾಯರೊಬ್ಬರು ಪಿಸುಗುಟ್ಟಿದರು. ಉಳಿದ 'ಯಜಮಾನರು'ಗಳು ಮನಸ್ಸಿನಲ್ಲೇ ಹಾಗಂದಿರಬೇಕು. ಏನಿದ್ದರೂ ಅಂದು ಸೂರ್ಯ ಹೇಗೋ ಮಾಡಿ ಅಸ್ತಮಿಸಿರಲೇ ಬೇಕು, ಯಾಕೆಂದರೆ ಮರು ದಿನ ಅವನು ಉದಯಿಸಬೇಕಿತ್ತಲ್ಲ!

ದಿನ ಏಳು

ಭಾನುವಾರ, ಅಕ್ಟೋಬರ್ ೮. ಪ್ರವಾಸಾಂತ್ಯಕ್ಕೆ ಮುನ್ನಾ ದಿನ. ಕನ್ಯಾಕುಮಾರಿಯಿಂದ ಮುಂದೆ ತಿರುವನಂತಪುರಕ್ಕೆ ಎರಡು ಗಂಟೆಗಳ ದಾರಿ. ಮಧ್ಯೆ ತಮಿಳುನಾಡು ಕಳೆದು ಕೇರಳ ಪ್ರವೇಶಿಸಿದೆವು. ಅಮ್ಮಾವ್ರ ಆಡಳಿತ ಜಾಗ ಸವೆದು ಅಂತೋನಿಯವರ ಊರನ್ನು ಸೇರಿದೆವು. ಕರಾವಳಿಜಾಗ ನೋಡಲು ಬಲು ಅಂದ. ಒಂದೆಡೆ ತೆಂಗುತೆಂಗುಗಳ ಮತ್ತು ಬೆಟ್ಟಗಳ ಎತ್ತರ, ಇನ್ನೊಂದೆಡೆ ಸಮುದ್ರದ ಆಳ ಮತ್ತು ವಿಸ್ತಾರ. ತಿರುವನಂತಪುರ ಕೇರಳದ ರಾಜಧಾನಿ. ಇಲ್ಲಿನ ಶ್ರೀ ಅನಂತ ಪದ್ಮನಾಭಸ್ವಾಮಿಯ ಸನ್ನಿಧಿ ಬಹು ಪುರಾತನ ಮತ್ತು ಪ್ರಸಿದ್ಧ. ದೇವರ ಪ್ರಶಾಂತಮೂರ್ತಿಯನ್ನು ೧೮ ಅಡಿ ಉದ್ದದ ಒಂದೇ ಶಿಲೆಯಲ್ಲಿ ಕೆತ್ತಲಾಗಿದ್ದು, ನಾಭಿಯಲ್ಲಿ ಕಮಲವನ್ನೂ, ಅದರಲ್ಲಿ ಬ್ರಹ್ಮನ ವಿಗ್ರಹವನ್ನೂ ನೋಡಬಹುದು. ದೇವರನ್ನು ಮೂರು ಪ್ರತ್ಯೇಕ ದ್ವಾರಗಳ ಮೂಲಕ ನಾವು ನೋಡಬೇಕಾಗುತ್ತದೆ. ಇಲ್ಲಿ ವರ್ಷದ ೩೬೫ ದಿವಸ ಸುಪ್ರಭಾತದ ಬೇರೆ ಬೇರೆ ಹಾಡುಗಳನ್ನು ನುಡಿಸಲಾಗುತ್ತದಂತೆ. ದೇವಳದ ಮುಖ್ಯ ಗೋಪುರ ಸುಮಾರು ೧೦೦೦ ಅಡಿ ಎತ್ತರವಿದ್ದು ೭ ಅಂತಸ್ತುಗಳನ್ನದು ಹೊಂದಿದೆ. ಮಾನವ ದೇಹದಲ್ಲಿ ನವರಂಧ್ರಗಳಿರುವಂತೆ ಈ ದೇವಸ್ಥಾನಕ್ಕೆ ೯ ದ್ವಾರಗಳಿವೆ. (ನವದ್ವಾರೇ ಪುರೇ ದೇಹೀ.....ಗೀತಾ). ದೇಹವೇ ದೇಗುಲವೆನ್ನುವ ಕಲ್ಪನೆಯಿದು. ಎಂಥ ಉನ್ನತ ವಿಚಾರಧಾರೆ! ದೇವರಮೂರ್ತಿ ಮಲಗಿರುವುದರಿಂದ ಈ ಊರಿಗೆ ಅಂನತಶಯನವೆಂದೂ ಕರೆಯುತ್ತಾರೆ. ದೇವರ ಪಾವನ ದರ್ಶನ ಮತ್ತು ಕೋವಲಂ ಸಮುದ್ರ ತೀರದ ವಿಹಾರ ಮುಗಿಸಿ, ಮುಂದೆ ಪ್ರವಾಸದ ಕೊನೆಯ ಕ್ಷೇತ್ರವಾದ ಗುರುವಾಯೂರಿಗೆ ಚಲಿಸಿದೆವು.

ಗುರುವಾಯುರಪ್ಪನ್ ಬಾಲಕೃಷ್ಣನ ಕ್ಷೇತ್ರ ಗುರುವಾಯೂರು. ದ್ವಾರಕೆ ಮುಳುಗುವ ಮೊದಲು ಅಲ್ಲಿದ್ದ ಸುಂದರ ಕೃಷ್ಣವಿಗ್ರಹವನ್ನು ಕಶ್ಯಪರ ಸೂಚನೆಯಂತೆ ದೇವಗುರು ಬೃಹಸ್ಪತಿ ವಾಯುವನ್ನು ಕೂಡಿಕೊಂಡು ಈ ಜಾಗಕ್ಕೆ ಬಂದು ಸ್ಥಾಪಿಸಿದರೆಂದು ಪ್ರತೀತಿ. ಇದರಿಂದಾಗಿ ಸ್ಥಳದ ಹೆಸರು ಗುರುವಾಯೂರೆಂದಾಯಿತು. ಭಕ್ತವತ್ಸಲ, ಯೋಗೇಶ್ವರ ಶ್ರೀ ಕೃಷ್ಣಪರಮಾತ್ಮನನ್ನು ಇಲ್ಲಿ ಕೃಷ್ಣ, ಕುಟ್ಟಿಕೃಷ್ಣ, ಉನ್ನಿಕೃಷ್ಣ ಮತ್ತು ಬಾಲಕೃಷ್ಣ ಎಂದು ಶಿಶುರೂಪದಲ್ಲಿ ಕಂಡು ನಾವು ಪುಲಕಿತರಾದೆವು. ಅವನನ್ನು ಕಂಡು ನಾವೇ ಧನ್ಯರು ಎಂದೆನಿಸಿತು. ಈ ಜಾಗದಲ್ಲಿ ಖರೀದಿಯೇನೂ ಮಾಡಲಾಗಲಿಲ್ಲ. ಯಾಕೆಂದರೆ ಎಲ್ಲರ ಹಣದ ಗಂಟೂ ಇಷ್ಟರಲ್ಲಿ ಬರಿದಾಗಿತ್ತು. ಅದಲ್ಲದೆ ಯಾರು ಕಡನೀಡುವ ಸ್ಥಿತಿಯಲ್ಲೂ ಇರಲಿಲ್ಲ, ಹೆಗಡೆಯವರ ಹೊರತು, ಬಸ್ಸಿನಲ್ಲಿ ನನ್ನ ಯಜಮಾನರು ದ್ವಾಪರದ ಭಾಗವತ ಈ ಕಲಿಯುಗದಲ್ಲಿ 'ಭಾಗವತಾ' ಅಗಲಂಚಾವತಾರ ಎಲ್ಲೆಡೆ ತಾಂಡವಾಡುತ್ತಿರುವ ಖೇದದ ವಿಚಾರವನ್ನು ವಿನೋದದ ಲಘು ಶೈಲಿಯಲ್ಲಿ ಹೇಳಿ ನಮ್ಮಲ್ಲಿ ವಿನೋದ ವಿಷಾದ ಮಿಶ್ರಿತ ಭಾವವನ್ನುಂಟು ಮಾಡಿದರು.

ದಿನ ಎಂಟು

ಸೋಮವಾರ, ಅಕ್ಟೋಬರ್ ೯. ನಮ್ಮ ಪ್ರವಾಸದ ಕೊನೆಯ ದಿನ. ಬೆಳಿಗ್ಗೆ ೭ ಗಂಟೆಗೆ ಕಲ್ಲಿಕೋಟೆಯ ಮೂಲಕ ಮಂಗಳೂರು ಕಡೆಗೆ ಓಟ—ಮನೆ ಸೇರಲು ಮನ ತವಕಿಸುತ್ತಿದ್ದರೂ, ಇತರ ಸದಸ್ಯರೊಡನೆ ನಮ್ಮ ಬಾಂಧವ್ಯದ ಬೆಸುಗೆ, ಕ್ಷೇತ್ರದರ್ಶನದಿಂದ ಆದ ಲೌಕಿಕ ಅನುಭವ, ಇನ್ನೂ ಕೆಲವು ದಿನ ಯಾಕೆ ಪ್ರವಾಸ ಮುಂದುವರಿಯಬಾರದೆಂದು ನಾವು ಯೋಚಿಸುವಂತೆ ಮಾಡಿದವು. ಈ ಎಂಟು ದಿವಸಗಳಲ್ಲಿ ನಾವೆಲ್ಲ ಒಟ್ಟಿಗೆ ಸಮುದ್ರದ ಆಳಕ್ಕೆ ಇಳಿದಿದ್ದೆವು, ಬೆಟ್ಟದ ಎತ್ತರಕ್ಕೆ ಏರಿದ್ದೆವು, ದೇವರಿಗೆ ಪ್ರದಕ್ಷಿಣೆ ಗೈದು ಸಾಷ್ಟಾಂಗ ವಂದಿಸಿದ್ದೆವು, ತೀರ್ಥಸ್ನಾನ ಮಾಡಿದ್ದೆವು, ಒಟ್ಟೊಟ್ಟಿಗೆ ಬಸ್ಸಿನಲ್ಲಿ ಹಾಡಿ, ನಲಿದು, ಕುಣಿದು ಕುಪ್ಪಳಿಸಿದ್ದೆವು. ನಾವು ಮಾಡದೆ ಇದ್ದುದೆಂದರೆ ಒಂದೇ ಸಂಗತಿ—ಅದು ಜಗಳ; ಗಂಡ ಹೆಂಡತಿಯರು ಕೂಡಾ! ಆದರೆ ಈಗ ಈ ಸ್ವರ್ಗೀಯ ಆನಂದದ ಅವಧಿ ಮುಗಿಯುತ್ತ ಬಂದಿತ್ತು. ಆರಂಭವಾದುದು ಅಂತ್ಯವಾಗಲೇಬೇಕಲ್ಲ? ಅದೇ ಪ್ರಕೃತಿ ನಿಯಮ. ನಾವು ಅದಕ್ಕೆ ಹೊರತಾಗಲು ಹೇಗೆ ಸಾಧ್ಯ? ಆ ಸುಂದರ ಅನುಭವ ಮಾತ್ರ ನಮ್ಮ ಮನಸ್ಸಿನಲ್ಲಿ ಶಾಶ್ವತ. ಇದಕ್ಕಾಗಿ ಅಲ್ಲಿದ್ದ ಎಲ್ಲ ಪ್ರವಾಸಿ ಬಾಂಧವರಿಗೆ, ನಿರ್ಮಲಾ ಟ್ರಾವೆಲ್ಸ್ ಸಂಸ್ಥೆಗೆ, ಮಾರ್ಗದರ್ಶಿ ಹೆಗಡೆಯವರಿಗೆ, ಮೇಲಾಗಿ ಅಧ್ಯಕ್ಷ ಭಗವಂತನಿಗೆ ಎಲ್ಲರೂ ಕೃತಜ್ಞತೆ ಸಲ್ಲಿಸಿ ಅಂಥ ಸಂದರ್ಭಗಳು ಮತ್ತೆ ಮತ್ತೆ ಬರಲೆಂದು ಹಾರೈಸಿದೆವು. ಪ್ರವಾಸದ ಕೆಲವು ಸವಿ ಚಿತ್ರಗಳು ಕ್ಯಾಮರಾ ಸೆರೆಹಿಡಿದ ಭಾವಚಿತ್ರಗಳಲ್ಲಿವೆ. ಆದರೆ ಎಲ್ಲವೂ ನೆನಪಿನ ಪುಟಗಳಲ್ಲಿ ಬಲವಾಗಿ ಅಚ್ಚೊತ್ತಿವೆ.

ಮುಗಿಸುವ ಮೊದಲು ಒಂದು ಮಾತು. ನಾವು ಪ್ರದಕ್ಷಿಣಾಕಾರವಾಗಿ ಪ್ರವಾಸ ನಡೆಸಿದ್ದು, ರಾಮೇಶ್ವರದ ತೀರ್ಥಸ್ನಾನ, ಮುಂದಿನ ಎರಡು ದಿನ ಪ್ರಕೃತಿಯಿಂದ ತೀರ್ಥಪ್ರೋಕ್ಷಣೆ, (ಮಳೆ), ಎಲ್ಲವೂ ಸಲೀಸಾಗಿ ಯಾವ ವಿಘ್ನವೂ ಇಲ್ಲದೆ ನಡೆದಿದ್ದು, ಊರ ನಮ್ಮ ಮನೆಗಳು ಈ ಅವಧಿಯಲ್ಲಿ ಭದ್ರವಾಗಿದ್ದುದು—ಇವೆಲ್ಲ ದೇವರ ಅನುಗ್ರಹ ನಮ್ಮ ಮೇಲಿದೆ ಎಂಬುದನ್ನು ಸಾಬೀತು ಪಡಿಸುತ್ತವೆ. ಪ್ರವಾಸ ಮುಗಿಯುವ ಹಂತದಲ್ಲಿ ಒಂದು ಚಿಕ್ಕ ಆದರೆ ಚೊಕ್ಕ ಭಾವಪೂರ್ಣ ಕಾರ್ಯಕ್ರಮ ಇರಿಸಿಕೊಂಡು ಗುರುವಾಯೂರಿನ ನಮ್ಮ ರಾತ್ರಿತಾಣದಲ್ಲಿ ಎಲ್ಲರೂ ಒಂದೆಡೆ ಕಲೆತೆವು. ದೇವರ ದಯೆ ಮತ್ತು ನಿರ್ಮಲಾ ಟ್ರಾವೆಲ್ಸ್‌ನವರು ಮಾಡಿದ ಸುವ್ಯವಸ್ಥೆಯಿಂದ ಪ್ರವಾಸ ಸಫಲವಾಯಿತೆಂದು ಎಲ್ಲರೂ ತಮ್ಮ ತಮ್ಮದೇ ಆದ ಶೈಲಿಯಲ್ಲಿ ಮನಮುಟ್ಟುವಂತೆ ವಿವರಿಸಿದರು. ನನ್ನ ಪತಿರಾಯರು 'ನಮ್ಮೆಲ್ಲರ ಭಾರ ಮೂರು ರೀತಿಗಳಲ್ಲಿ ಏರಿದೆ' ಎಂದರು. ಅವರು ಮಾತು ಮುಂದುವರಿಸಿ 'ಮೊದಲನೆಯದು ಲಗೇಜಿನ ಭಾರ; ಅದಕ್ಕೆ ನಾವೇ ಹೊಣೆ. ಎರಡನೆಯದು ದೇಹದ ತೂಕ! ಚೆನ್ನಾಗಿ ಉಣಿಸಿ, ತಿನಿಸಿದ ಹೆಗಡೆಯವರು ಇದಕ್ಕೆ ಕಾರಣ—ಮೂರನೆಯದು ಗಳಿಸಿದ ಪುಣ್ಯದ ಭಾರ. ಅದೇ ನಮ್ಮ ಪ್ರವಾಸದ ಗುರಿ. ಒಟ್ಟಿನಲ್ಲಿ ಪ್ರವಾಸ ಸಫಲ; ಒಳಗೂ, ಹೊರಗೂ!' ಎಂದು ನಮ್ಮೆಲ್ಲರ ಪರವಾಗಿ ನಾವು ಹೇಳಬೇಕೆಂದಿದ್ದುದನ್ನೇ ವಿವರಿಸಿದರು.

ನನ್ನ ಪತಿದೇವರು ನಮ್ಮ ಊರಾದ ಮಂಗಳೂರು ಬಳಿಯ ತಲಪಾಡಿಗೆ ತಮ್ಮ ತಾಯಿಯವರ ಮತ್ತು ಊರ ದೇವರು ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ದರ್ಶನಕ್ಕೆಂದು ಮೊದಲು ಇಳಿದರು. ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ, ಅಲ್ಲವೇ? ನಾನು ಬೆಂಗಳೂರಿನ ನಮ್ಮ ಮನೆಯಲ್ಲಿ ದಾರಿ ನೋಡುತ್ತಿದ್ದ ಮುದ್ದು ಮಕ್ಕಳನ್ನು ಬೇಗನೆ ಸೇರಿಕೊಳ್ಳಲು ಅಂದೇ ರಾತ್ರಿ ಬಸ್ಸಿನಲ್ಲಿ ಪಯಣಿಸಿದೆ. ಪ್ರವಾಸಿ ಬಂಧುಗಳು ಒಬ್ಬರನ್ನೊಬ್ಬರು ಬೀಳ್ಕೊಡುವ ದೃಶ್ಯ ಮನಸ್ಸು ಕರಗಿಸುವಂತಹದ್ದಾಗಿತ್ತು. ಮತ್ತೆ ಸಂಧಿಸೋಣ, ಖಂಡಿತ; ಭಗವಂತನ ಕೃಪೆ ಈ ಬಗ್ಗೆಯೂ ನಮಗಿರಲಿ' ಎನ್ನುವ ಪ್ರಾರ್ಥನಾಭಾವ ತುಂಬಿದ ಹೃದಯದಿಂದ ನಾವು ಒಬ್ಬರನ್ನೊಬ್ಬರು ಅಗಲಿದೆವು. ಈಗ ಪ್ರವಾಸದ ಸವಿನೆನಪು ಮಾತ್ರ ಮನಸ್ಸಿನಲ್ಲಿ ಅಚ್ಚೊತ್ತಿ ನಿಂತಿದೆ. ಅದನ್ನೇ ಪುನಃ ಪುನಃ ನೆನೆದು ಮೆಲುಕು ಹಾಕುತ್ತ ಆನಂದಪರವಶಳಾಗುತ್ತೇನೆ. ಸನ್ಮಾನ್ಯ ಡಿ. ವಿ. ಗುಂಡಪ್ಪನವರ ಮಂಕುತಿಮ್ಮನ ಕಗ್ಗದಿಂದ ಆಯ್ದ ಸುಂದರ ಅರ್ಥಗರ್ಭಿತ ಸಾಲುಗಳೊಡನೆ ಈ ಪ್ರವಾಸ ಕಥೆಯನ್ನು ಭಗವಂತನ ಪದತಲದಲ್ಲಿ ಸಮರ್ಪಿಸುವೆ.

ಮೇಲೆ ಕೆಳಗೊಳಗೆ ಬಳಿ ಸುತ್ತಲೆತ್ತೆತ್ತಲುಂ ।
ಮಾಲೆ ಮಾಲೆಯಲಿ ವಿದ್ಯುಲ್ಲಹರಿಯೊಂದು ॥
ಧೂಳಿಕಣ ಭೂಗೋಳ ರವಿ ಚಂದ್ರ ತಾರೆಗಳ ।
ಚಾಲಿಪುದು ಬಿಡುಕೊಡದೆ–ಮಂಕುತಿಮ್ಮ ॥

ಪುಸ್ತಕ ಪರಿಚಯ

ಕೆಳಕಂಡ ೬ ಪುಸ್ತಕಗಳ ಪ್ರಕಾಶಕರು: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿ., ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು.

ಸಾಮಾನ್ಯ ಘಟನೆಗಳ ವೈಜ್ಞಾನಿಕ ವಿಶ್ಲೇಷಣೆ—ಲೇಖಕರು: ಶ್ರೀಯುತ ವೆಂಕಟಯ್ಯ ಅಪ್ಪಗೆರೆ. (ರೂ. ೩೦).

ಜಗತ್ತು ಅಸಂಖ್ಯ ಚಟುವಟಿಕೆಗಳ ಮಹಾ ಸಾಗರ. ಒಂದೊಂದು ಕಾರ್ಯದ ಹಿನ್ನೆಲೆಯಲ್ಲಿಯೂ ಕಾರಣ ಇದ್ದೇ ಇರುವುದು. ಈ ಕಾರ್ಯ-ಕಾರಣ ಸಂಬಂಧದ ಅನ್ವೇಷಣೆಯೇ ವೈಜ್ಞಾನಿಕ ಮಾರ್ಗ. ಕಾರಣ ರಹಿತ ಕಾರ್ಯವಿಲ್ಲ, ಕಾರ್ಯರಹಿತ ಕಾರಣವೂ ಇಲ್ಲ. ಅಂದ ಮೇಲೆ ಯಾವುದೇ ಗೋಚರ ಕಾರ್ಯದ ಹಿನ್ನೆಲೆ ಕಾರಣ ತಿಳಿಯದಿದ್ದರೆ ಅಥವಾ ಯಾವುದೇ ನಿರ್ದಿಷ್ಟ ಕಾರಣದ ಪ್ರಕಟಿತ ಕಾರ್ಯ ಅರಿವಿಗೆ ಬರದಿದ್ದರೆ ನಾವು ಆ ಕಾರಣವನ್ನು ಇಲ್ಲವೇ ಕಾರ್ಯವನ್ನು ವ್ಯವಸ್ಥಿತವಾಗಿ ಅರಸಲು ಮುಂದಾಗಬೇಕೇ ಹೊರತು ಅವುಗಳಲ್ಲಿ ದೈವಿಕ ಪ್ರಭಾವ ಅಥವಾ ಪವಾಡ ಕಾಣುವುದಲ್ಲ. ಈ ಪುಸ್ತಕದ ಇಪ್ಪತ್ತೊಂದು ಸ್ವತಂತ್ರ ಲೇಖನಗಳಲ್ಲಿ ಅಪ್ಪಗೆರೆಯವರು ವಾಸ್ತವ ಘಟನೆಗಳನ್ನು ಉಲ್ಲೇಖಿಸಿ ಕಾರಣ ಸಹಿತ ವಿವರಿಸಿದ್ದಾರೆ. ಅಂದರೆ ಪವಾಡಗಳನ್ನು ಬಯಲಿಸಿದ್ದಾರೆ. ಜನರ ಸಂವೇದನೆಗೆ ನೋವಾಗದಂತೆ "ಜ್ಞಾನದ ಬಲದಿಂದ ಅಜ್ಞಾನದ ಕೇಡ"ನ್ನು ತಂದೊಗೆದಿದ್ದಾರೆ.

ದೇವರು ದೆವ್ವ ವಿಜ್ಞಾನ—ಡಾಕ್ಟರ್ ಕೋವೂರರು ವಾಸ್ತವ ಘಟನೆಗಳ ಸುತ್ತ ಇಂಗ್ಲಿಷಿನಲ್ಲಿ ನೇಯ್ದಿರುವ ಇಪ್ಪತ್ತೆರಡು ಘನ ವಿಚಾರಗಳ ಕನ್ನಡಾನುವಾದ. ಅನುವಾದದ ಸಂಪಾದಕರು ಡಾಕ್ಟರ್ ಪುರುಷೋತ್ತಮ ಬಿಳಿಮಲೆ. (ರೂ. ೪೦).

ದೇವರು ಎಂದರೇನು?—ಅದು ಮನುಕುಲದ ಪರಮಸುಂದರ ನಿರ್ಮಿತಿ, ನೈತಿಕ ಮೌಲ್ಯಗಳ ಆಕರ, ನಮ್ಮ ರಾಗ ಭಾವ ದೌರ್ಬಲ್ಯಗಳಿಗೆ ಅವಶ್ಯಕ ಅವಲಂಬನೆಯಾಗಿ ನಾವು ಸೃಷ್ಟಿಸಿರುವ ಒಂದು ಆದರ್ಶ ಪಾತ್ರ. ಪ್ರೀತಿ ನೀತಿಯುಕ್ತ ಜೀವನ ಅತಿ ಮುಖ್ಯ. ಇದಕ್ಕೆ ಆಧಾರವಾಗಿ ದೇವರು ಒಂದು ಸಾಕ್ಷಿ ಎಂದು ಒಬ್ಬ ನಂಬಿ ಬಾಳುವುದಾದರೆ ಆ ನಂಬಿಕೆಗೆ ಅರ್ಥ ಉಂಟು. ಹೀಗಲ್ಲದೇ ಈ ನಂಬಿಕೆ ವಾಮಾಚಾರಕ್ಕೆ ಕಾರಣವಾದರೆ ಇದೊಂದು ಮಾನಸಿಕ ವೈಕಲ್ಯವಾಗುತ್ತದೆ ಎಂದೇ ವ್ಯಾಧಿ. ಇದರ ಒಂದು ದುಷ್ಟ ಅವತಾರ ದೆವ್ವ. ವಂಚಕನಿಗೆ ಸ್ವಂತ ನೆರಳೇ ಭೂತ, ಕೊಲೆಪಾತಕಿಗೆ ಎಲ್ಲೆಲ್ಲೂ ದೆವ್ವ ದರ್ಶನ—"ಏನು ಭೂತ ಗ್ರಾಮನರ್ತನೋನ್ಮಾದ." ವಿಜ್ಞಾನದ ರಚನಾತ್ಮಕ ಪಾತ್ರ ಇರುವುದು

ಇಲ್ಲಿಯೋ—ಕಾರ್ಯ-ಕಾರಣ ಪಾತಳಿಯಲ್ಲಿ ಈ ಅಂಧಂತಮಸ್ಸಿನ ನಿವಾರಣೆ. ಪ್ರಸಕ್ತ ಕೃತಿ ಈ ಕರ್ತವ್ಯವನ್ನು ಮನೋವೈದ್ಯನ ಕೌಶಲದಿಂದಲೂ ದಾದಿಯ ನಲ್ಮೆಯಿಂದಲೂ ನಿರ್ವಹಿಸಿದೆ.

ನಾನೇಕೆ ನಾಸ್ತಿಕ—ಮೂರು ಪ್ರಖರ ವೈಚಾರಿಕ ಲೇಖನಗಳ ಸಂಕಲನ (ರೂ. ೯).

ದೇಶಪ್ರೇಮಿ ಹುತಾತ್ಮ ಭಗತ್‌ಸಿಂಗ್ ಜೀವನದರ್ಶನ ಕುರಿತು ಬಿಪನ್‌ಚಂದ್ರ ಬರೆದಿರುವ 'ಪ್ರಸ್ತಾವನೆ' ಮೊದಲನೆಯದು. ಸ್ವತಃ ಭಗತ್‌ಸಿಂಗ್ ಬರೆದಿರುವ 'ನಾನೇಕೆ ನಾಸ್ತಿಕ' ಮತ್ತು 'ಸ್ವಪ್ನಲೋಕದ ಮುನ್ನುಡಿ' ಉಳಿದೆರಡು ಲೇಖನಗಳು. ಇಂಗ್ಲಿಷ್ ಮೂಲದಿಂದ ಕನ್ನಡಕ್ಕೆ ಅನುವಾದಿಸಿರುವವರು ಶ್ರೀಮತಿ ಎಸ್. ಗಾಯಿತ್ರಿ. ದೇಶೋನ್ನತಿಯ ಸಲುವಾಗಿ ನಗುನಗುತ್ತ ನೇಣುಗಂಬ ಏರಿದ ಭಗತ್‌ಸಿಂಗ್‌ರಿಗೆ ದೇವರ ಬಗ್ಗೆ ಭ್ರಮನಿರಸನವಾದದ್ದು ಜಂಬದ ಅಥವಾ ಸ್ವಪ್ರತಿಷ್ಠೆಯ ಕಾರಣವಾಗಿ ಅಲ್ಲ. ಅಂತಃಕರಣಯುಕ್ತ ಜೀವನ ಮೌಲ್ಯಗಳ ಆದರ್ಶ ಮತ್ತು ಕಲ್ಪಿತ ರೂಪ ಭಗವಂತ ಆಗದೇ ವ್ಯಕ್ತಿಗಳ ಬದುಕಿನೊಂದಿಗೆ ಚೆಲ್ಲಾಟವಾಡುವ ಠಕ್ಕನಾದರೆ ಇಂಥ ದೇವರನ್ನು ನಿರಾಕರಿಸುವುದೇ ಋಜುಮಾರ್ಗ. ಈ ವಾಸ್ತವತೆಯನ್ನು ಅನುಭವದಿಂದ ದರ್ಶಿಸಿದ ಭಗತ್‌ಸಿಂಗ್ ಅವರ ಜೀವನ ಮತ್ತು ವೈಚಾರಿಕ ಸಂದೇಶ ಅನನ್ಯವಾಗಿವೆ, ಅನುಸರಣಯೋಗ್ಯವಾಗಿವೆ.

ರಾಮನಿಗೆ ಸೀತೆ ಏನಾಗಬೇಕು?—ತೆಲುಗು ಮೂಲ ಡಾಕ್ಟರ್ ಆರುದ್ರ. ಕನ್ನಡ ಅನುವಾದ ಶ್ರೀಯುತ ಕೆ. ಎಲ್. ಗೋಪಾಲಕೃಷ್ಣರಾವ್. (ರೂ. ೩೦)

ಕಾವ್ಯವಾಗಲಿ, ಧಾರ್ಮಿಕ ಗ್ರಂಥವಾಗಲಿ, ಅವರಲ್ಲಿ ನಳನಳಿಸುತ್ತಿರುವ ಬಹುಜನರ ಬಲುಕಾಲದ ಭಕ್ತಿ, ಶ್ರದ್ಧೆ ಏನೇ ಇರಲಿ, ಅದರ ಪ್ರಾಚೀನತೆ ಎಷ್ಟೇ ಇದ್ದು ವರ್ತಮಾನ ಯುಗದಲ್ಲಿ ಕೂಡ ಎಂಥ ಪರಿಣಾಮಕಾರಿ ಆಗಿರಲಿ ಅದನ್ನು ಕಾಲದಿಂದ ಕಾಲಕ್ಕೆ ವೈಚಾರಿಕ ವಿಮರ್ಶೆಗೆ ಒಳಪಡಿಸುವುದು ಜನರ ಮಾನಸಿಕ ಆರೋಗ್ಯವರ್ಧನೆಗೆ ಅವಶ್ಯಕ ರಸಧಾತು ಮತ್ತು ಸ್ವತಃ ಆ ಗ್ರಂಥದ ಅಂತರಂಗ ಸಂವರ್ಧನೆಗೆ ಅಗತ್ಯ ಜೀವಸತ್ತ್ವ ಕೂಡ. ಇಂಥ ತೀಕ್ಷ್ಣ ಸಂಶೋಧನೆ ಪರೀಕ್ಷಣೆಗಳ ಪಕ್ವ ಫಲ ಈ ಉತ್ಕೃಷ್ಟ ಕೃತಿ. ರಾಮಾಯಣ ಇಲ್ಲಿ ಹೊಸ ಹೊಸ ಹೊಳಹುಗಳಿಂದ ಬೆಳಗುತ್ತಿದೆ, ಆಯಾ ಕಾಲದ ನಾಗರಿಕತೆಯ ಮನೋಧರ್ಮ ಮತ್ತು ಮನುಕುಲದ ವಿಕಾಸ ಇದರಲ್ಲಿ ಅಕ್ಷರಿಯವಾಗಿ ಲಕಲಕಿಸುತ್ತಿವೆ.

ಮಹಿಳೆ ಬಿಡುಗಡೆಯ ಹಾದಿಯಲ್ಲಿ—ಲೇಖಕರು: ಶ್ರೀಮತಿ ಎಸ್. ಗಾಯತ್ರಿ. (ರೂ. ೫೫)

ಎಲ್ಲಿ ಮಾನವೀಯ ಮೌಲ್ಯಗಳು ಸಾರ್ವಜನಿಕ ಪ್ರಚಾರದಲ್ಲಿರುವುವೋ ಅಲ್ಲಿ ತದ್ವಿರುದ್ಧ ಪಾಶವೀಯ ಕೃತ್ಯಗಳು ಆಚರಣೆಯಲ್ಲಿರುವುವು ಎಂಬುದೊಂದು ಅನುಭವಜನ್ಯನಿಯಮ. ಭಾರತ ಇದಕ್ಕೆ ಅಪವಾದವಲ್ಲ. ಸೀತೆಯ ಬಾಯಿಯಲ್ಲಿ ಕವಿ ಲಕ್ಷ್ಮೀಶ ನುಡಿಸಿದ್ದಾನೆ: "ಕಡೆಗೆ ಕರುಣಾಳು ರಾಘವನಲ್ಲಿ ತಪ್ಪಿಲ್ಲ, ಕಡು ಪಾತಕಂಗೈದು ಪೆಣ್ಣಾಗಿ ಸಂಭವಿಸಿದ

ಒಡಲಂ ಪೊರೆವುದು, ಎನ್ನೊಳು ಅಪರಾಧವುಂಟು." ಶ್ರೀಮತಿ ಗಾಯತ್ರಿಯವರ ಈ ವೈಚಾರಿಕ ಕೃತಿಯಲ್ಲಿ ಶಾಸ್ತ್ರದ ಆಧಾರ ಇದೆ, ವಿವೇಚನೆಯ ಸೌಹಾರ್ದವಿದೆ, ವರ್ತಮಾನದ ಗಾಢ ಮತ್ತು ವೇದನಾಯುಕ್ತ, ಅನುಭವವಿದೆ ಮತ್ತು ತೀವ್ರ ಸಾಮಾಜಿಕ ಕಳಕಳಿ ಇದೆ. ಓದುಗರನ್ನು ಸಕ್ರಿಯಾತ್ಮಕವಾಗಿ ಚಿಂತಿಸಲು ಮತ್ತು ಅಂತರ್ಮುಖಿಗಳಾಗಿ ಸ್ವಂತ ಜೀವನ ಶೋಧಿಸಲು ಪ್ರೇರಿಸುತ್ತದೆ.

ವೈಜ್ಞಾನಿಕ ಮನೋಧರ್ಮ— ಲೇಖಕ: ಜಿ. ಟಿ. ನಾರಾಯಣರಾವ್ (ರೂ. ೪೫)

ವ್ಯಕ್ತಿ ಜೀವನವನ್ನು ಎಲ್ಲ ಸ್ತರಗಳಲ್ಲಿಯೂ ಎಲ್ಲ ಕಾಲಗಳಲ್ಲಿಯೂ ಪ್ರಭಾವಿಸಿ ನಿರ್ದೇಶಿಸಿ ರೂಪಿಸುವ ಮೂರು ಮಾನವ ಕೃತ ಬಲಗಳಿವೆ: ಪ್ರಭುತ್ವ, ಧರ್ಮ ಮತ್ತು ವಿಜ್ಞಾನ. ಇವು ನಿಸರ್ಗ ಜನ್ಯವಲ್ಲ. ಸಮಾಜ ವಿಕಸನದ ಫಲ ಪ್ರಭುತ್ವ, ಇದು ಲೌಕಿಕ; ಅಜ್ಞಾತದ ಬಗೆಗಿನ ಚಿಂತನೆ ಊಹನೆಗಳ ಫಲ ಧರ್ಮ, ಇದು ಭಾವನಾತ್ಮಕ; ಮಾನವ ಮತಿ-ನಿಸರ್ಗ ಅಂತರ ಕ್ರಿಯೆಯ ಫಲ ವಿಜ್ಞಾನ, ಜೀವನದ ನಾಲ್ಕು ಪ್ರಾಥಮಿಕ ಆವಶ್ಯಕತೆಗಳಾದ ಉಸಿರು, ಅಶನ, ವಸನ ಮತ್ತು ವಸತಿ ಪೈಕಿ ಉಸಿರಿನ ಹೊರತಾಗಿ ಉಳಿದ ಮೂರನ್ನೂ ಒದಗಿಸುವ ತಂತ್ರವೇ ವಿಜ್ಞಾನ. ಪ್ರಭುತ್ವ ಮತ್ತು ಧರ್ಮ ವ್ಯಕ್ತಿ ನಿಷ್ಠವಾದವು. ನಿಸರ್ಗ ಇವನ್ನು ಪುರಸ್ಕರಿಸುವುದಿಲ್ಲ. ವಿಜ್ಞಾನವಾದರೋ ವಸ್ತುನಿಷ್ಠ, ಸಾಕ್ಷಾತ್ ನಿಸರ್ಗವೇ ಇದರ ನಿಕಷ. ಈ ಮೂರು ಮಾನವಕೃತ ಬಲಗಳ ಸಾಮರಸ್ಯವೇ ವೈಜ್ಞಾನಿಕ ಮನೋಧರ್ಮ, ಸುಖೀಜೀವನದ ಭದ್ರ ನೆಲಗಟ್ಟು. ಪ್ರಸಕ್ತ ಪುಸ್ತಕ ಐತಿಹಾಸಿಕ ದಾಖಲೆಯೂ ಹೌದು, ವೈಚಾರಿಕ ಚಿಂತನೆಯೂ ಹೌದು.

ಜಿ. ಟಿ. ನಾರಾಯಣರಾವ್

ನಂ. ೮, 'ಅತ್ರಿ', ಶಾನಭಾಗ ಅಸ್ಪತ್ರೆ ರಸ್ತೆ
ಸರಸ್ವತೀಪುರ
ಮೈಸೂರು-೫೭೦ ೦೦೯


ಸಾಕ್ಷರತೆ ಅನುಭವದ ಭಂಡಾರಕ್ಕೆ ಬೀಗದ ಕೈ;
ಸಾಮಾಜಿಕ ಪುನರುತ್ಥಾನಕ್ಕೆ ದಾರಿ.

—ವೇಯಿನ್ ರೀಡ್

ಲೇಖಕರು ಮತ್ತು ಲೇಖನಗಳು

Reg. No. KRNN.29 / WPP 6

LICENCE No. 21
LICENCED TO POST WITH PAYMENT



Edited by Chandrashekhararadhya, Printed by Papanna
Printed & Published by Karnataka State Adult Education Council,
5/1, Vinoba Road, Manasa Gangothri, Mysore-570 006.

Phone : 512485